# ಕ್ರಿಸ್ತನ ಸ್ಮರಣೆಯ ಧ್ಯಾನಗಳು

# Memorial Meditations

## ಭಾಗ - I



ಏಳನೆಯ ದೂತ ಚಾರ್ಲ್ಸ್ ಟೇಜ್ ರಸ್ಸೆಲ್ ಅವರ ಬರಹಗಳು

# ಕ್ರಿಸ್ತನ ಸ್ಮರಣೆಯ ಧ್ಯಾನಗಳು

# Memorial Meditations

ಭಾಗ - I



**The Bangalore Bible Students**

E-mail: bangalorebiblestudents1874@gmail.com

# ವಿಷಯ ಸೂಚಿ


ನನ್ನ ನೆನಪಿಗಾಗಿ ನೀವು ಇದನ್ನು ಮಾಡಿರಿ | R3879 | ಅಕ್ಟೋಬರ್ 1906.............................. 1

ಕರ್ತನ ಪಾತ್ರೆ ಮತ್ತು ಕರ್ತನ ಮೇಜು | R1898 | ಡಿಸೆಂಬರ್ 1895.......................................... 10

ಕರ್ತನ ಸ್ಮರಣೆ | R4153 | ಮಾರ್ಚ್ 1908............................................................................. 18

ಸ್ಮರಣಾರ್ಥಕ ಭೋಜನ | R2282 | ಏಪ್ರಿಲ್ 1898 ....................................................................... 21

ಸಂಕೇತಗಳ ಮಹತ್ವ | R1636 | ಏಪ್ರಿಲ್ 1894............................................................................ 24

ಹುಳಿಯ ಸಾಮ್ಯ | R5050 | ಜೂನ್ 1912.................................................................................. 28

ನಮ್ಮ ವಾರ್ಷಿಕೋತ್ಸವದ ಭೋಜನ | R936 | ಮೇ 1887 ......................................................... 30

ಕರ್ತನ ಭೋಜನ | R899 | ಫೆಬ್ರುವರಿ 1887.............................................................................. 34

ಪಸ್ಕದ ಭೋಜನ | R740 | ಏಪ್ರಿಲ್ 1885 .................................................................................. 38

ರೊಟ್ಟಿ ಮತ್ತು ದ್ರಾಕ್ಷಾರಸ | R509 | ಜುಲೈ 1883 ...................................................................... 43

ಪಸ್ಕ | R465 | ಏಪ್ರಿಲ್ 1883 ..................................................................................................... 46

ನೀನು ಯೋಗ್ಯನಾಗಿ ಕಾಣಿಸಿಕೊಳ್ಳುವದಕ್ಕೆ ಅಧ್ಯಯನ ಮಾಡು | R4838 | ಜೂನ್ 1911.... 55

[R3879 : ಪುಟ 333]

# "ನನ್ನ ನೆನಪಿಗಾಗಿ ನೀವು ಇದನ್ನು ಮಾಡಿರಿ"

### *THIS DO IN REMEMBRANCE OF ME*

***MATTHEW 26 :17-30***

---

ಅನೇಕ ಜನರು ಹೇಳುವಂತೆ, ನಮ್ಮ ಕರ್ತನು ತನ್ನ ಕೊನೆಯ ಪಸ್ಕ ಹಬ್ಬ ಆಚರಣೆಗೆ ಸಂಬಂಧಿಸಿದಂತೆ ಗುರುವಾರ ರಾತ್ರಿ ಜ್ಞಾಪಕಾರ್ಥ(ಕ್ರಿಸ್ತನ ಸ್ಮರಣೆ) ಭೋಜನವನ್ನು ಸ್ಥಾಪಿಸಿದರು ಮತ್ತು ಮರುದಿನ, ಅಂದರೆ, ಶುಕ್ರವಾರ ಆತನನ್ನು ಶಿಲುಬೆಗೇರಿಸಲಾಯಿತು ಎಂಬ ಈ ಘಟನೆಗಳು ವಾರದ ಬೇರೆ ದಿನಗಳಲ್ಲಿ ನಡೆದವು ಎಂದು ಭಾವಿಸುವವರೊಂದಿಗೆ ನಮಗೆ ಯಾವುದೇ ವಾದವಿಲ್ಲ. ಆ ರಾತ್ರಿ ಯೇಸು ಸ್ಥಾಪಿಸಿದ ಜ್ಞಾಪಕಾರ್ಥ ಭೋಜನವು, ಮೋಶೆಯಿಂದ ಸ್ಥಾಪಿಸಲ್ಪಟ್ಟ ಪಸ್ಕದ ನಿಜಸ್ವರೂಪವಾಗಿ ಮತ್ತು ಇಡೀ ಲೋಕದ ಪಾಪ ಪರಿಹಾರಕ್ಕಾಗಿ ನಮ್ಮ ಕರ್ತನು ಮಾಡಿದ ಮಹಾಯಜ್ಞದ ಮುಕ್ತಾಯವಾಗಿತ್ತು ಎಂದು ಇದರ ಮಹತ್ವವನ್ನು ನಾವು ಹೆಚ್ಚು ಒತ್ತಿ ಹೇಳುತ್ತೇವೆ. ಈ ಪ್ರಮುಖ ತತ್ವಗಳು "ಪರಿಶುದ್ಧರಿಗೆ ಒಮ್ಮೆ ಒಪ್ಪಿಸಲ್ಪಟ್ಟ ನಂಬಿಕೆಯ" ಭಾಗವಾಗಿರುವುದರಿಂದ ನಾವು ಶ್ರದ್ಧೆಯಿಂದ ಹೋರಾಡಲು ಸಿದ್ಧರಿದ್ದೇವೆ, ಆದರೆ ವಾರದ ನಿರ್ದಿಷ್ಟ ದಿನಗಳ ವಿಷಯದಲ್ಲಿ ನಾವು ವಾದಿಸುವುದಿಲ್ಲ. ಏಕೆಂದರೆ, ನಮ್ಮ ಅಂದಾಜಿನ ಪ್ರಕಾರ ಅವು ಅಪ್ರಮುಖ ವಿಷಯಗಳಾಗಿವೆ, ಅವುಗಳಿಗೆ ಯಾವುದೇ ಮೌಲ್ಯವಿಲ್ಲ ಹಾಗೂ ಪರಿಣಾಮವಿಲ್ಲ. ಆದ್ದರಿಂದ ಯಾವುದೇ ಅರ್ಥದಲ್ಲಿಯೂ ಕರ್ತನ ಜನರ ಮನಸ್ಸು ಅಥವಾ ಹೃದಯದ ಅನ್ಯೋನ್ಯತೆಗೆ ತೊಂದರೆಗೊಳಿಸಬಾರದು.

ಕರ್ತನಾದ ಯೇಸುವನ್ನು ದೇವರ ಕುರಿಮರಿ ಎಂದು ಛಾಯೆಯಾಗಿ ಸೂಚಿಸುವ ಪಸ್ಕ ಹಬ್ಬವನ್ನು, ತನಗಾಗಿ ಮತ್ತು ತನ್ನ ಶಿಷ್ಯರಿಗಾಗಿ, ವಿಶೇಷ ಮತ್ತು ವಿಶಿಷ್ಟವಾದ ಯಹೂದಿ ಕುಟುಂಬವಾಗಿ, ಧರ್ಮಶಾಸ್ತ್ರದ ಪ್ರಕಾರ ಆಚರಣೆ ಮಾಡಲು ಒಂದು ಸ್ಥಳವನ್ನು ಸಿದ್ಧಗೊಳಿಸುವುದಕ್ಕೆ ಕರ್ತನಾದ ಯೇಸು ತನ್ನ ಶಿಷ್ಯರಿಗೆ ನೀಡಿದ ಸೂಚನೆಗಳೊಂದಿಗೆ ನಮ್ಮ ಪಾಠವು ಪ್ರಾರಂಭವಾಗುತ್ತದೆ. *"ನಾನು ಶ್ರಮೆ ಅನುಭವಿಸುವದಕ್ಕಿಂತ ಮುಂಚೆ ನಿಮ್ಮ ಸಂಗಡ ಈ ಪಸ್ಕದ ಊಟವನ್ನು ಮಾಡುವದಕ್ಕೆ ಕುತೂಹಲದಿಂದ ಅಪೇಕ್ಷಿಸಿದ್ದೇನೆ."* ***(ಲೂಕ 22:15)*** ಎಂದು ಈ ಭೋಜನವನ್ನು ಕುರಿತು ನಮ್ಮ ಕರ್ತನು ಹೇಳಿದ್ದನು. ಆತನು ನಿಸಾನ್ ಮಾಸದ 15ನೇ ದಿನದಿಂದ ಒಂದು ವಾರವೂ ಮುಂದುವರೆದ ಹುಳಿ ಇಲ್ಲದ ರೊಟ್ಟಿಗಳ ಹಬ್ಬ ಕುರಿತು ಇಲ್ಲಿ ಮಾತನಾಡಿಲ್ಲ. ಬೆಂಕಿಯಲ್ಲಿ ಸುಟ್ಟು ಅದನ್ನೂ ಹುಳಿಯಿಲ್ಲದ ರೊಟ್ಟಿಗಳನ್ನೂ ಕಹಿಯಾದ ಪಲ್ಯಗಳ ಸಂಗಡ ತಿನ್ನಬೇಕಾದ ಪಸ್ಕದ ಕುರಿಯ ಭೋಜನದ ಕುರಿತು ಇಲ್ಲಿ ಮಾತನಾಡಿದ್ದಾರೆ. ಇದು ಒಂದು ವಾರದ ಹುಳಿ ಇಲ್ಲದ ರೊಟ್ಟಿಗಳ ಹಬ್ಬಕ್ಕೆ ಮುಂಚಿನದು ಮತ್ತು ಐಗುಪ್ತ ದೇಶದಿಂದ ಅವರ ವಿಮೋಚನೆಯನ್ನು ಅವರಿಗೆ ನೆನಪಿಸಿತು ಮತ್ತು ವಿಮೋಚನೆಗೊಂಡ ಜನರಂತೆ ಸಂತೋಷಪಡಲು ಈ ಹಬ್ಬ ಅವರಿಗೆ ಆಧಾರವಾಯಿತು. ಈ ಭೋಜನಕ್ಕೆ ಮೇಲಂತಸ್ತಿನ ವಿಶಾಲವಾದ ಕೊಠಡಿಯನ್ನು ಒದಗಿಸಲಾಯಿತು. ಅಗತ್ಯವಾದ ವಸ್ತುಗಳನ್ನು

ಸಿದ್ಧಪಡಿಸಲಾಯಿತು ಮತ್ತು ಸಂಜೆ ಸೂರ್ಯಾಸ್ತಮಾನದಲ್ಲಿ ಅಂದರೆ, ಆರು ಗಂಟೆಯ ನಂತರ ನಮ್ಮ ಕರ್ತನು ಮತ್ತು ಹನ್ನೆರಡು ಅಪೊಸ್ತಲರು ಒಟ್ಟುಗೂಡಿದರು. ಇದಲ್ಲದೆ ತಮ್ಮಲ್ಲಿ ಯಾವನು ಅತಿ ದೊಡ್ಡವನು ಎಂಬ ವಿಷಯದಲ್ಲಿ ಶಿಷ್ಯರ ನಡುವೆ ಚರ್ಚೆ ಹುಟ್ಟಿತು ಎಂದು ಲೂಕನು ಬರೆದ ಸುವಾರ್ತೆಯಲ್ಲಿ ಹೇಳುತ್ತದೆ. ಯೇಸು ಅವರ ಪಾದಗಳನ್ನು ತೊಳೆಯುವ ಮೂಲಕ ಅವರಲ್ಲಿ ಈ ಮಹತ್ವಾಕಾಂಕ್ಷೆಯ ಮನೋಭಾವವನ್ನು ಖಂಡಿಸಿದನು, ಹೀಗೆ ಅವರು ತನ್ನ ಹೃದಯದ ನಮ್ರತೆಯನ್ನು ಮತ್ತು ಅವರೆಲ್ಲರಿಗೂ ಸೇವೆ ಸಲ್ಲಿಸಲು ಅವರ ಸಿದ್ಧತೆಯನ್ನು ತೋರಿಸಿದರು. ಹೀಗೆ ಅವರು ಯಾರನ್ನು ಅವರಲ್ಲಿ ಶ್ರೇಷ್ಠರೆಂದು ಭಾವಿಸುತ್ತಾರೋ ಅವರು ಅವರಲ್ಲಿ ಯಾರಿಗಾದರೂ ಅಥವಾ ಎಲ್ಲರಿಗೂ ಸೇವೆ ಸಲ್ಲಿಸಲು ಸಿದ್ಧರಾಗಿರುವ ಪ್ರಧಾನ ಸೇವಕರಾಗಿ ಇರಬೇಕು ಎಂದು ಕರ್ತನು ಮಾದರಿಯನ್ನು ತೋರಿಸಿದರು.

## ONE OF YOU SHALL BETRAYME
## ನಿಮ್ಮಲ್ಲಿ ಒಬ್ಬನು ನನ್ನನ್ನು ಹಿಡುಕೊಡುವನು

ಅವರು ಊಟಮಾಡುತ್ತಿರುವಾಗ, ಅವರಲ್ಲಿ ಒಬ್ಬನು ತನಗೆ ದ್ರೋಹ ಮಾಡುತ್ತಾನೆ ಎಂದು ಯೇಸು ಹೇಳಿದನು, ತಕ್ಷಣವೇ ಅಲ್ಲಿ ಶಿಷ್ಯರ ನಡುವೆ ದುಃಖದ ಭಾವನೆ ಹರಡಿತು. ಅಂತಹ ಆರೋಪದ ಬಗ್ಗೆ ತಮ್ಮ ನಿರಪರಾಧಿತ್ವವನ್ನು ಸಾಬೀತುಪಡಿಸುವ ಹೊಣೆಗಾರಿಕೆ ಅವರ ಮೇಲಿದೆ ಎಂದು ಭಾವಿಸಿ ಪ್ರತಿಯೊಬ್ಬರೂ - *"ಕರ್ತನೇ, ಅವನು ನಾನೋ?"* ಎಂದು ಕೇಳಿದರು. ಉಳಿದವರೊಂದಿಗೆ, ಯೂದನು ಕೂಡ ಈ ಪ್ರಶ್ನೆಯನ್ನು ಕೇಳಿದನು, ಒಂದು ವೇಳೆ ಅವನು ಈ ರೀತಿ ಕೇಳದಿದ್ದರೆ, ಅದು ಅವನೇ ಎಂದು ಒಪ್ಪಿಕೊಂಡಂತೆ ಆಗುತ್ತದೆ ಎಂದು ಅರಿತುಕೊಂಡನು ಮತ್ತು ಅವನ ವಿಚಾರಣೆಗೆ ಪ್ರತಿಕ್ರಿಯೆಯಾಗಿ ಯೇಸು, *"ನೀನೇ ಹೇಳಿದ್ದೀ"* ಎಂದು ಉತ್ತರಿಸಿದನು. ಅಂದರೆ, "ಹೌದು, ನಾನು ನಿನ್ನನ್ನು ಉಲ್ಲೇಖಿಸುತ್ತೇನೆ" ಮತ್ತು ಇನ್ನೊಂದು ಸುವಾರ್ತೆ ಪುಸ್ತಕ ಹೇಳುವಂತೆ, ಯೇಸು ಆ ಪ್ರಶ್ನೆಗೆ ಉತ್ತರಿಸುತ್ತಾ, ನಾನು ತುತ್ತನ್ನು ಅದ್ದಿ ಯಾರಿಗೆ ಕೊಡುತ್ತೇನೋ ಅವನೇ ಹಿಡುಕೊಡುವನು ಎಂದು ಹೇಳಿದನು. ಅವರು ತಿನ್ನುತ್ತಿದ್ದ ಪಸ್ಕದ ಕುರಿಯ ಒಂದು ತುಂಡನ್ನು ಮತ್ತು ಹುಳಿಯಿಲ್ಲದ ರೊಟ್ಟಿಯ ಒಂದು ತುಂಡನ್ನು ತೆಗೆದು ಆ ತುತ್ತನ್ನು ಅದ್ದಿದ ನಂತರ ಯೇಸು ಅದನ್ನು ಯೂದನಿಗೆ ಕೊಟ್ಟನು, ಹೀಗೆ ಅವನ ಹೆಸರನ್ನು ನೇರವಾಗಿ ಹೇಳದೆಯೇ ಅವನನ್ನೇ ಸೂಚಿಸಿದನು. ಈ ಸಮಯದವರೆಗೆ ಇತರ ಶಿಷ್ಯರು ಯೂದನನ್ನು ಸರಿಯಾಗಿ ತಿಳಿದುಕೊಳ್ಳಲಿಲ್ಲವೆಂದು ತೋರುತ್ತದೆ, ಅವರು ಯೂದನು ಕಳ್ಳನಾಗಿದ್ದನು ಎಂಬುದನ್ನು ತರುವಾಯ ತಿಳಿದುಕೊಂಡರು.

ಯಹೂದಿಗಳು ಮತ್ತು ಅರಬ್ಬರ(Arabs) ನಡುವೆ ವಂಚನೆ ಮತ್ತು ದ್ರೋಹವು ಸಾಮಾನ್ಯವಾಗಿತ್ತು, ಆದರೆ ಅವರ ಗೌರವ ನಿಬಂಧನೆಯ ಪ್ರಕಾರ, ಯಾರಾದರೂ ಮತ್ತೊಬ್ಬ ವ್ಯಕ್ತಿಗೆ ಯಾವ ರೀತಿಯಲ್ಲಿ ಆದರೂ ಹಾನಿ ಮಾಡಲು ಯೋಚಿಸಿದ್ದರೆ, ಅವರು ಆ ವ್ಯಕ್ತಿಯ ಆಹಾರವನ್ನು ತಿನ್ನುವುದಿಲ್ಲ. ಆಹಾರವು ಉಪ್ಪಿನೊಂದಿಗೆ ರುಚಿಯಾಗಿರುವುದರಿಂದ, ಬಹುಶಃ ಈ ಪದ್ಧತಿಯನ್ನು *"ಉಪ್ಪಿನ ಒಡಂಬಡಿಕೆಯೆಂದು"*, ನಂಬಿಗಸ್ತಿಕೆಯ ಒಡಂಬಡಿಕೆಯೆಂದು ಕರೆಯಲಾಗುತ್ತಿತ್ತು. ಶತ್ರುವು ನಿಮ್ಮ ಮೇಜಿನ ಬಳಿ ತಿನ್ನಲು ಅಥವಾ ಉಪ್ಪಿನೊಂದಿಗೆ ರುಚಿಯಾಗಿರುವ ನಿಮ್ಮ ಆಹಾರವನ್ನು ತೆಗೆದುಕೊಳ್ಳುವಲ್ಲಿ ಯಶಸ್ವಿಯಾಗಲು, ಆ ಸಮಯದಲ್ಲಿ ಅವರ ನಡುವೆ ದೀರ್ಘಕಾಲದ ಸ್ನೇಹದ ಪ್ರತಿಜ್ಞೆಯನ್ನು ಪ್ರತಿಬಿಂಬಿಸುವುದಾಗಿತ್ತು. ಆದ್ದರಿಂದ ಅವನು ಎಂದಿಗೂ ನಿನಗೆ ಕೆಡುಕು ಮಾಡುವುದಿಲ್ಲ. ಸ್ಪಷ್ಟವಾಗಿ, ಯೂದಾಸನು ಸರಿಯಾದ ಮನೋಭಾವವಿಲ್ಲದೆ ಇದ್ದನು, ಹಾಗಾಗಿ ಅವನು ಆ ಕಾಲದ ಈ ಪದ್ಧತಿಯನ್ನು ಸಹ ಅಂಗೀಕರಿಸಲಿಲ್ಲ ಮತ್ತು ಪಾಲಿಸಲಿಲ್ಲ, ಅವನು ಯಾವ ವ್ಯಕ್ತಿಯ ರೊಟ್ಟಿಯನ್ನು ತಿಂದನೋ, ಯಾವ ವ್ಯಕ್ತಿಯ ಉಪ್ಪನ್ನು ಸೇವಿಸಿದನೋ, ಅವನಿಗೆ ಪ್ರಾಮಾಣಿಕ ಮತ್ತು ನಿಷ್ಠಾವಂತನಾಗಬೇಕಾದ ರೂಢಿಯನ್ನು ಪಾಲಿಸಲಿಲ್ಲ. ಆದ್ದರಿಂದ ನಮ್ಮ ಕರ್ತನ ಮಾತುಗಳು, *"ನನ್ನ ಸಂಗಡ ಪಾತ್ರೆಯಲ್ಲಿ ಕೈ*

*ಅದ್ದಿದವನೇ ನನ್ನನ್ನು ಹಿಡುಕೊಡುವವನು."* ***(ಮತ್ತಾಯನು 26:23)*** ಎಂಬುದಾಗಿತ್ತು.

ಆದಾಗ್ಯೂ, ಯೇಸುವಿನ ಮರಣವು ತನಗೆ ಆದ ದ್ರೋಹಿ ಮತ್ತು ಶತ್ರುಗಳ ಪರವಾದ ವಿಜಯವಲ್ಲ, ಬದಲಿಗೆ ಪ್ರವಾದಿಗಳು ಆತನ ಬಗ್ಗೆ ಮೊದಲೇ ಬರೆಯಲ್ಪಟ್ಟ ವಾಕ್ಯಗಳ ಹೊಂದಾಣಿಕೆಯಲ್ಲಿ ನಡೆದದ್ದು ಎಂದು ಸಾಕ್ಷಿ ನೀಡಿದರು. ಯೂದಾಸನು ಈ ವಿಷಯದಲ್ಲಿ ಅವನ ಸ್ವಂತ ಜವಾಬ್ದಾರಿ ಮತ್ತು ಉದ್ದೇಶಪೂರ್ವಕ ಕ್ರಿಯೆಗಳನ್ನು ನಿರ್ಲಕ್ಷಿಸಿ ಕೇವಲ ಪ್ರವಾದನೆಯನ್ನು ನೆರವೇರಿಸುತ್ತಿದ್ದಾನೆ ಎಂದು ನಾವು ಭಾವಿಸಬಾರದು. ಅಂತಹ ಭಾವನೆಯನ್ನು ನಮ್ಮ ಕರ್ತನ ಈ ಮಾತುಗಳು ನಿರಾಕರಿಸುತ್ತವೆ, *"ಆದರೆ ಯಾವನು ಮನುಷ್ಯಕುಮಾರನನ್ನು ಹಿಡುಕೊಡುವನೋ ಅವನ ಗತಿಯನ್ನು ಏನು ಹೇಳಲಿ. ಆ ಮನುಷ್ಯನು ಹುಟ್ಟದಿದ್ದರೆ ಅವನಿಗೆ ಒಳ್ಳೇದಾಗಿತ್ತು ಅಂದನು"* ***(ಮತ್ತಾಯ 26:24)***. ಈ ವಾಕ್ಯವು ನಮಗೆ ಯಾವುದೇ ಸಂದೇಹವನ್ನು ನೀಡುವುದಿಲ್ಲ, ಏಕೆಂದರೆ ಯೂದಸನಿಗೆ ಸತ್ಯದ ಸ್ಪಷ್ಟವಾದ ಜ್ಞಾನಕ್ಕೆ ಬರುವ ಅವಕಾಶಗಳು ಮತ್ತು ಅದರ ಅನುಗುಣವಾದ ಜವಾಬ್ದಾರಿಗಳ ಮೂಲಕ ಯೂದಸನು ಪಾಪ ನಿವಾರಣಾ ಕಾರ್ಯದಲ್ಲಿ ತನ್ನ ಪೂರ್ಣ ಪಾಲನ್ನು ಈಗಾಗಲೇ ಅನುಭವಿಸಿದ್ದನು. ಆದ್ದರಿಂದ ಸ್ಪಷ್ಟವಾಗಿ ಅವನ ಪಾಪವು ಮರಣಕರವಾದ ಪಾಪವಾಗಿತ್ತು ಅಂದರೆ ಎರಡನೆಯ ಮರಣವಾಗಿತ್ತು. ಆದ್ದರಿಂದ, ಅವನ ಭವಿಷ್ಯದ ಅಸ್ತಿತ್ವದ ಬಗ್ಗೆ ಯೋಚಿಸದೆ, ಅವನ ಜೀವನವು ನಿಷ್ಪ್ರಯೋಜಕ ಮತ್ತು ವ್ಯರ್ಥವಾಗಿತ್ತು. ಅವನ ಸಂತೋಷವು, ಅವನ ದುಃಖ ಮತ್ತು ಸಂಕಟಕ್ಕಿಂತ ಹೆಚ್ಚಾಗಲಿಲ್ಲ, ಆ ದುಃಖವು ಅವನ ನಂತರದ ನಿರಾಶೆ ಮತ್ತು ಆತ್ಮಹತ್ಯೆಗೆ ಕಾರಣವಾಯಿತು.

## TAKE, EAT; THIS IS MY BODY
## ತಕ್ಕೊಳ್ಳಿರಿ, ತಿನ್ನಿರಿ; ಇದು ನನ್ನ ದೇಹ

ಪಸ್ಕಾ ಭೋಜನದ ನಂತರ, ಕುರಿಯನ್ನು ಕಹಿಯಾದ ಪಲ್ಯ ಮತ್ತು ಹುಳಿ ಇಲ್ಲದ ರೊಟ್ಟಿ, ಇತ್ಯಾದಿಯೊಂದಿಗೆ ಸೇವಿಸಿದ ಬಳಿಕ, ಯೇಸು ತನ್ನ ಎಲ್ಲ ಶಿಷ್ಯರೊಂದಿಗೆ, ಜ್ಞಾಪಕಾರ್ಥ(ಕ್ರಿಸ್ತನ ಸ್ಮರಣೆ) ಭೋಜನವನ್ನು ಸ್ಥಾಪಿಸಿದನು. ಇದು ಕ್ರಿಸ್ತನ ನಿರ್ದೇಶನದಂತೆ ಯಹೂದ್ಯರ ಪಸ್ಕಾ ಭೋಜನಕ್ಕೆ ಬದಲಿಯಾಯಿತು. ಅದು ಹೊಸ ವಿಷಯವಾಗಿದ್ದು, ಅಪೋಸ್ತಲರು ಆಸಕ್ತಿಯಿಂದ ಯೇಸುವಿನ ಮಾತುಗಳನ್ನು ಕೇಳಿದರು. ಆತನು ಹುಳಿ ಇಲ್ಲದ ರೊಟ್ಟಿ ತೆಗೆದು ಆಶೀರ್ವದಿಸಿದನು, ಅದನ್ನು ಮುರಿದು ಶಿಷ್ಯರಿಗೆ ಹಂಚುತ್ತಾ, *"ತಕ್ಕೊಳ್ಳಿರಿ, ತಿನ್ನಿರಿ; ಇದು ನನ್ನ ದೇಹ"* ಎಂದು ಹೇಳಿದನು. ಯೇಸುವಿನ ಈ ಮಾತುಗಳಿಗೆ ಅರ್ಥವೇನು? **[R3879: ಪುಟ 334]** ಮೂರು ವರ್ಷಗಳ ಕಾಲ ಶಿಷ್ಯರು ಆತನೊಂದಿಗೆ ಇದ್ದುದರಿಂದ, ಯೇಸು ಸಾಮ್ಯಗಳಲ್ಲಿ ಮತ್ತು ಗೂಢಾರ್ಥ ಮಾತುಗಳಲ್ಲಿ ಮಾತನಾಡುವುದನ್ನು ತಿಳಿದುಕೊಂಡಿದ್ದರು. ಯೇಸು ತಾನೇ ಪರಲೋಕದಿಂದ ಇಳಿದು ಬಂದ ರೊಟ್ಟಿ ಮತ್ತು ಇದರಲ್ಲಿ ಒಬ್ಬ ಮನುಷ್ಯನು ಪಾಲು ತೆಗೆದುಕೊಂಡರೆ ಅವನು ಶಾಶ್ವತವಾಗಿ ಜೀವಿಸುವನು ಎಂದೂ ಅವರು ಕೇಳಿಸಿಕೊಂಡಂತೆ ಮತ್ತೊಂದು ಸಂದರ್ಭದಲ್ಲಿ ಘೋಷಿಸಿದ್ದರು. ಈಗ ಆತನು ಹುಳಿ ಇಲ್ಲದ ರೊಟ್ಟಿಯನ್ನು ಕೊಟ್ಟು, ಇದನ್ನು ತನ್ನ ದೇಹ ಎಂದು ಹೇಳಿದನು. ಈ ರೊಟ್ಟಿಯು ಯೇಸುವಿನ ದೇಹವನ್ನು ಪ್ರತಿನಿಧಿಸುತ್ತದೆ ಅಥವಾ ಸಂಕೇತಿಸುತ್ತದೆ ಎಂದು ಶಿಷ್ಯರು ಸ್ಪಷ್ಟವಾಗಿ ಅರ್ಥಮಾಡಿಕೊಂಡರು. ಏಕೆಂದರೆ ಈ ಸಂದರ್ಭದಲ್ಲಿ ಆತನು ಅವರಿಗೆ, ಅಂದಿನಿಂದ ಆತನನ್ನು ನೆನಪಿಸಿಕೊಳ್ಳುವ(ಸ್ಮರಿಸಿಕೊಳ್ಳುವ) ಸಲುವಾಗಿ ಇದನ್ನು ಮಾಡಬೇಕು ಎಂದು ಹೇಳಿದನು. ಅಂದಿನಿಂದ ಅವರು ಆತನನ್ನು ಕೊಯ್ಯಲ್ಪಟ್ಟ ಕುರಿಮರಿ ಎಂದು ನೆನಪಿಸಿಕೊಳ್ಳಬೇಕು ಮತ್ತು ಆತನ ಮಾಂಸವನ್ನು ಪ್ರತಿನಿಧಿಸುವಂತಹ ಹುಳಿಯಿಲ್ಲದ ರೊಟ್ಟಿಯನ್ನು ಬಳಸಬೇಕು ಮತ್ತು ನೇರವಾಗಿ ಕುರಿಮರಿಯನ್ನು ತಿನ್ನುವ ಬದಲು ಇದನ್ನು ಸೇವಿಸಬೇಕು ಎಂದು ಹೇಳಿದರು.

ಆ ರೊಟ್ಟಿ ಆತನ ಆಶೀರ್ವಾದದಿಂದ ಆತನ ನಿಜವಾದ ಮಾಂಸವಾಗಿ ಮಾರ್ಪಟ್ಟಿದೆ ಎಂದು ರೋಮನ್ ಕ್ಯಾಥೋಲಿಕರು ಮತ್ತು ಕೆಲವು ಪ್ರೋಟೆಸ್ಟೆಂಟ್‌ಗಳು ನಂಬುವಂತೆ ಅರ್ಥವಾಗಿರಲಾರದು. ಯಾಕಂದರೆ, ಆತನ ದೇಹ ಇನ್ನೂ ಜೀವಂತವಾಗಿತ್ತು, ಅವರು ಶಿಲುಬೆಗೆ ಹಾಕಲ್ಪಡುವುದಕ್ಕೆ ಇನ್ನೂ ಸುಮಾರು ಹದಿನೈದು ಗಂಟೆಗಳ ಸಮಯ ಬಾಕಿಯಿತ್ತು. ಆದ್ದರಿಂದ, ಈ ಸಂಬಂಧ ಇರುವ ಎಲ್ಲಾ ವಾದಗಳು ಮೂರ್ಖತನ ಮತ್ತು ತಂತ್ರಮಯ ಎಂದು ಪರಿಗಣಿಸಬಹುದು. *"ಇದು ನನ್ನ ಮಾಂಸ"* ಎಂದು ಆತನು ಹೇಳುವಾಗ ಯಾವ ಮಾತಿನ ರೂಪವನ್ನು ಬಳಸಿದ್ದರೋ, ಅದೇ ರೂಪವನ್ನು ಸ್ವಲ್ಪ ಸಮಯದ ನಂತರ *"ನಾನೇ ದ್ರಾಕ್ಷಾಬಳ್ಳಿ", "ನಾನೇ ಬಾಗಿಲು", "ನಾನೇ ಒಳ್ಳೆಯ ಕುರುಬನು", "ನಾನೇ ಮಾರ್ಗವೂ ಸತ್ಯವೂ ಜೀವವೂ",* ಮುಂತಾದವುಗಳನ್ನು ಹೇಳುವಾಗಲೂ ಬಳಸಿದ್ದಾರೆ. ಯಜಮಾನನು ಈ ಎಲ್ಲಾ ವಿಭಿನ್ನ ರೂಪಗಳಲ್ಲಿ ಪ್ರತಿನಿಧಿಸಲ್ಪಟ್ಟಿರುತ್ತಾರೆ ಎಂಬುದನ್ನು ಅವರ ಸರಿಯಾದ, ವಿವೇಕಯುತವಾದ ದೃಷ್ಟಿಕೋನದ ಮಾತುಗಳಿಂದ ಇದು ಸ್ಪಷ್ಟವಾಗಿದೆ. ಈ ರೀತಿಯಾಗಿ ಆತನ ಅಪೊಸ್ತಲರಿಗೆ ಮತ್ತು ಸುವಾರ್ತಾಯುಗದ ಆತನ ಎಲ್ಲಾ ಅನುಯಾಯಿಗಳಿಗೆ ರೊಟ್ಟಿಯು ಆತನನ್ನು, ಆತನ ದೇಹವನ್ನು ಪ್ರತಿನಿಧಿಸುತ್ತದೆ.

ರೊಟ್ಟಿಯು ಎಲ್ಲಾ ಆಹಾರವನ್ನು ಪ್ರತಿನಿಧಿಸುತ್ತದೆ ಮತ್ತು ಸಂಕೇತಿಸುತ್ತದೆ (ವಾಸ್ತವವಾಗಿ ಗೋಧಿಯು ಅದರ ಸರಿಯಾದ ಪ್ರಮಾಣದಲ್ಲಿ ಪೌಷ್ಟಿಕಾಂಶದ ಪ್ರತಿಯೊಂದು ಅಂಶವನ್ನು ಹೊಂದಿರುತ್ತದೆ), ಆದ್ದರಿಂದ, ಈ ಸಂಕೇತವನ್ನು ಸೂಚಿಸುವ ಬೋಧನೆಯ ಅರ್ಥವೇನೆಂದರೆ, ಕ್ರಿಸ್ತನು ನೀಡಬೇಕಾದ ಜೀವನವನ್ನು ಪಡೆಯಲು ಬಯಸುವವರು ಆತನ ತ್ಯಾಗದ ಪರಿಣಾಮವಾಗಿ ಅದನ್ನು ಸ್ವೀಕರಿಸಬೇಕು. ನಾವು ಬದುಕಬೇಕೆಂದು ಆತನು ಸತ್ತನು. ಆತನಲ್ಲಿ ನಂಬಿಕೆ ಇಡುವ, ಆತನನ್ನು ಮತ್ತು ಆತನ ಸೂಚನೆಗಳನ್ನು ಸ್ವೀಕರಿಸುವ ಎಲ್ಲರೂ, ಆತನು ಸ್ವಇಚ್ಛೆಯಿಂದ ಬಿಟ್ಟುಕೊಟ್ಟ ಹಕ್ಕುಗಳು ಮತ್ತು ಸವಲತ್ತುಗಳನ್ನು ತಿನ್ನಬಹುದು, ಅನ್ವಯಿಸಬಹುದು ಮತ್ತು ಸ್ವಾಧೀನಪಡಿಸಿಕೊಳ್ಳಬಹುದು. ಅಂತಹವರನ್ನು ಆದಾಮನಿಂದ ಕಳೆದುಕೊಂಡು ಕ್ರಿಸ್ತನಿಂದ ವಿಮೋಚನೆಗೊಂಡ ಎಲ್ಲಾ ಹಕ್ಕುಗಳು ಮತ್ತು ಸವಲತ್ತುಗಳೊಂದಿಗೆ ಪರಿಪೂರ್ಣ ಮಾನವ ಸ್ವಭಾವವನ್ನು ಅವರಿಗೆ ನೀಡಲಾಗಿದೆ ಎಂದು ಎಣಿಸಲ್ಪಡುತ್ತದೆ. ಪರಲೋಕದಿಂದ ಬಂದ ಈ ರೊಟ್ಟಿಯನ್ನು ತಿನ್ನುವುದರ ಹೊರತು ಯಾರೂ ನಿತ್ಯಜೀವವನ್ನು ಹೊಂದಲಾರರು. ಇದು ಪ್ರಸ್ತುತ ಕಾಲದ ವಿಶ್ವಾಸಿಗಳಿಗೆ ಮಾತ್ರವಲ್ಲದೆ, ಭವಿಷ್ಯ ಕಾಲದ ವಿಶ್ವಾಸಿಗಳಿಗೂ ಅನ್ವಯಿಸುತ್ತದೆ. ನಮ್ಮ ಜೀವನದ ಹಕ್ಕುಗಳು ಮತ್ತು ಸವಲತ್ತುಗಳು ಕರ್ತನ ತ್ಯಾಗದ ಮೂಲಕ ಬಂದಿವೆ ಎಂದು ಗುರುತಿಸಬೇಕು. ಒಂದೇ ಪದದಲ್ಲಿ ಹೇಳುವುದಾದರೆ, ನಮ್ಮ ಕರ್ತನ ದೇಹವನ್ನು ಪ್ರತಿನಿಧಿಸುವ ರೊಟ್ಟಿಯು, ಆತನ ತ್ಯಾಗವನ್ನು ಸ್ವೀಕರಿಸುವ ಮೂಲಕ ನಮಗೆ ಸಿಗುವ ನೀತಿವಂತಿಕೆಯನ್ನು ಅದು ತಿಳಿಸುತ್ತದೆ.

## DRINK YE ALL OF IT
## ನೀವೆಲ್ಲರೂ ಇದರಲ್ಲಿರುವದನ್ನು ಕುಡಿಯಿರಿ

ನಂತರ, ನಮ್ಮ ಕರ್ತನು ದ್ರಾಕ್ಷಾರಸದ ಪಾತ್ರೆಯನ್ನು ತೆಗೆದುಕೊಂಡನು. ಇದು ಹುಳಿಯ ದ್ರಾಕ್ಷಾರಸವಾಗಿತ್ತೆಂದು(wine) ಹೇಳಲಾಗಿಲ್ಲ, ಆದ್ದರಿಂದ ಇದು ಹುಳಿಯಿಂದ ಕೂಡಿರುವಂತದ್ದೋ ಅಥವಾ ಇಲ್ಲವೋ ಎಂಬುದು ತೆರೆದ ಪ್ರಶ್ನೆಯಾಗಿದೆ. ನಮ್ಮ ಕಾಲದ ಎಲ್ಲಾ ಸನ್ನಿವೇಶಗಳು ಮತ್ತು ಕರ್ತನ ವಾಕ್ಯದ ಅಗತ್ಯಗಳನ್ನು ಗಮನದಲ್ಲಿಟ್ಟುಕೊಂಡರೆ, ಹುಳಿಯ ದ್ರಾಕ್ಷರಸ ಅಥವಾ ಒಣದ್ರಾಕ್ಷಾರಸವು ಆತನ ಆಜ್ಞೆಯ ನಿಯಮಗಳನ್ನು ಪೂರೈಸುತ್ತದೆಂದು ನಾವು ಖಚಿತವಾಗಿ ಭಾವಿಸಬಹುದು. ಇದನ್ನು ಎಂದಿಗೂ ಹುದುಗಿಸಿದ ದ್ರಾಕ್ಷರಸ(wine) ಎಂದು ಕರೆಯಲಾಗಿಲ್ಲ, **[R3880 : ಪುಟ 334]** ಬದಲಿಗೆ "ಪಾತ್ರೆ" ಮತ್ತು

"ದ್ರಾಕ್ಷಾರಸ" ಎಂದು ಮಾತ್ರ ಹೇಳಲಾಗಿದೆ. ಆದ್ದರಿಂದ, ಈ ವಿಷಯದಲ್ಲಿ ಕರ್ತನ ಅನುಯಾಯಿಗಳ ಮಧ್ಯದಲ್ಲಿ ವಿವಾದಗಳಿಗೆ ಅವಕಾಶವಿಲ್ಲ. ಪ್ರತಿಯೊಬ್ಬರೂ ತಮ್ಮ ಸ್ವಂತ ಮನಃಸಾಕ್ಷಿಗೆ ಅನುಗುಣವಾಗಿ ಯಾವ ರೀತಿಯ ದ್ರಾಕ್ಷಾರಸವನ್ನು ಬಳಸಬೇಕು ಎಂಬುದರಲ್ಲಿ ಸ್ವತಂತ್ರರಾಗಿರಬಹುದು. ನಮ್ಮ ವಿಚಾರದಲ್ಲಿ, ಹುಳಿಯ ದ್ರಾಕ್ಷಾರಸವು ಹಾನಿ ಮಾಡುವ ಅಥವಾ ಕರ್ತನ ಅನುಯಾಯಿಗಳಲ್ಲಿ ನಿದ್ರಾವಸ್ಥೆಯಲ್ಲಿರುವ ಮದ್ಯದ ಆಸೆಗಳನ್ನು ಎಬ್ಬಿಸುವ ಸಾಧ್ಯತೆ ಕಡಿಮೆ ಇರುವುದರಿಂದ ನಾವು ಅದಕ್ಕೆ ಆದ್ಯತೆ ನೀಡುತ್ತೇವೆ.

*"ಇದು ನನ್ನ ಒಡಂಬಡಿಕೆಯ ರಕ್ತವಾಗಿದೆ, ಇದು ಪಾಪಗಳ ಕ್ಷಮೆಗಾಗಿ ಬಹು ಜನರಿಗೋಸ್ಕರ ಸುರಿಸಲ್ಪಡುವ ರಕ್ತವಾಗಿದೆ"* ***(ಮತ್ತಾಯನು 26:28)*** ಎಂದು ಪಾತ್ರೆಗೆ ಸಂಬಂಧಿಸಿದಂತೆ ಕರ್ತನು ಹೇಳಿದನು. (ಹೊಸ ಒಡಂಬಡಿಕೆಯ ಎರಡು ಹಳೆಯ ಗ್ರೀಕ್ MSS(Manuscripts) ಸಿನ್ಯೆಟಿಕ್(Sinaitic) ಮತ್ತು ವ್ಯಾಟಿಕನ್(Vatican), "ಹೊಸ" ಎಂಬ ಪದವನ್ನು ಬಳಸಲಿಲ್ಲ). ನಿಜ, ಹೊಸ ಒಡಂಬಡಿಕೆಯು ಕಾರ್ಯರೂಪಕ್ಕೆ ಬರುವ ಮೊದಲು ಕ್ರಿಸ್ತನ ರಕ್ತದಿಂದ ಮುದ್ರೆ ಹಾಕಲ್ಪಡಬೇಕು ಮತ್ತು ಅದು ಸಾವಿರ ವರ್ಷದ ಯುಗದ ಪ್ರಾರಂಭದವರೆಗೆ ಜಾರಿಗೆ ಬರುವುದಿಲ್ಲ. ಆದರೆ ಮತ್ತೊಂದು ಒಡಂಬಡಿಕೆ ಇತ್ತು, ಅದು ಹಳೆಯ ಒಡಂಬಡಿಕೆ, ಅದು ಎಲ್ಲಾ ಒಡಂಬಡಿಕೆಗಳ ಅಡಿಪಾಯದ(ಅಸ್ತಿವಾರ) ಒಡಂಬಡಿಕೆಯಾಗಿತ್ತು. ಅವುಗಳೆಂದರೆ, ಅಬ್ರಾಮನ ಒಡಂಬಡಿಕೆ - ಇದು ನಮ್ಮ ಕರ್ತನ ಮರಣದಿಂದ ಮುದ್ರಿಸಲಾಗಿತ್ತು. ಈ ಒಡಂಬಡಿಕೆಯು ಕರ್ತನ ಮರಣದಿಂದ ಮುದ್ರಿಸಲಾಗುವುದೆಂಬುದನ್ನು ಅಬ್ರಹಾಮನ ಕೈಯಲ್ಲಿ ಇಸಾಕನ ಸಾಂಕೇತಿಕ ಮರಣ ಮತ್ತು ಅವನ ಸಾಂಕೇತಿಕ ಪುನರುತ್ಥಾನದ ಮೂಲಕ ಪ್ರತಿರೂಪವಾಗಿ ತೋರಿಸಲಾಯಿತು. ಇಸಾಕನು ನಮ್ಮ ಕರ್ತನಾದ ಯೇಸುವನ್ನು ಪ್ರತಿನಿಧಿಸುತ್ತಾನೆ ಎಂದು ಅಪೊಸ್ತಲನು ನಮಗೆ ಭರವಸೆ ನೀಡುತ್ತಾನೆ ಮತ್ತು *"ಸಹೋದರರೇ, ನಾವು ಇಸಾಕನಂತೆ ವಾಗ್ದಾನದ ಫಲವಾಗಿ ಹುಟ್ಟಿದ ಮಕ್ಕಳಾಗಿದ್ದೇವೆ"* ಎಂದು ಘೋಷಿಸುತ್ತಾನೆ. - ಅದು ಪ್ರಮಾಣ ಬದ್ಧ ಒಡಂಬಡಿಕೆ - ***ಗಲಾತ್ಯದವರಿಗೆ 4:28***.

ನಮ್ಮ ಕರ್ತನ ಮಾತುಗಳನ್ನು(ಮತ್ತಾಯನು 26:28) ಆತನು ಮುದ್ರೆ ಮಾಡುತ್ತಿದ್ದ ಅಥವಾ ಖಚಿತಪಡಿಸಿಕೊಳ್ಳುತ್ತಿದ್ದ ಅಬ್ರಹಾಮನ ಒಡಂಬಡಿಕೆಗೆ ಹೀಗೆ ಅನ್ವಯಿಸುವಾಗ, ಆತನು ತನ್ನ ಮರಣದ ಮೂಲಕ ಆ ಒಡಂಬಡಿಕೆಯ ಮತ್ತು ಭೂಮಿಯ ಎಲ್ಲಾ ಕುಟುಂಬಗಳ ಆಶೀರ್ವಾದಕ್ಕಾಗಿ ಅದರ ಎಲ್ಲಾ ಮಹಿಮೆಯುಳ್ಳ ನಿಬಂಧನೆಗಳ ಉತ್ತರಾಧಿಕಾರಿಯಾದನು ಎಂದು ನಾವು ನೋಡುತ್ತೇವೆ. ಮತ್ತು ಈ ದೃಷ್ಟಿಕೋನದಿಂದ ಯೇಸು ತನ್ನ ಹಿಂಬಾಲಕರಿಗೆ ಹೇಳಿದ ಮಾತುಗಳಲ್ಲಿ ವಿಶೇಷ ಅರ್ಥ ಮತ್ತು ಬಲವನ್ನು ನಾವು ನೋಡುತ್ತೇವೆ, *"ಇದು ನನ್ನ ಪಾತ್ರೆ, ಇದರಲ್ಲಿರುವುದನ್ನು ನೀವೆಲ್ಲರೂ ಕುಡಿಯಿರಿ"*. ಹೀಗೆ ಅರ್ಥಮಾಡಿಕೊಂಡರೆ, ಕರ್ತನ ಪಾತ್ರೆಯಲ್ಲಿ ಕುಡಿಯಲು ಕೊಡಲ್ಪಟ್ಟ ಆಹ್ವಾನವು (ಕರೆಯುವಿಕೆಯು) ಸೂಚಿಸುವುದೇನೆಂದರೆ, ಈ ಸುವಾರ್ತಾ ಯುಗದ ಆತನ ಆದುಕೊಂಡ ಸಭೆಯು ಆತನೊಂದಿಗೆ, ಆತನ ಸಂಕಟ (ದುಃಖ) ಮತ್ತು ಮರಣದ ಪಾತ್ರೆಯಲ್ಲಿ ಪಾಲ್ಗೊಳ್ಳಲು ಹಾಗೂ ಆತನೊಂದಿಗೆ ತಮ್ಮ ಪ್ರಾಣಗಳನ್ನು ಅರ್ಪಿಸಿದರೆ, ಆತನೊಂದಿಗೆ ಮುಂಬರುವ ರಾಜ್ಯದ ಮಹಿಮೆಯಲ್ಲಿ ಪಾಲ್ಗೊಳ್ಳಲು ಸಾಧ್ಯವಾಗುತ್ತದೆ. ಇದು ಅಬ್ರಹಾಮನ ವಾಗ್ದಾನದ ನೆರವೇರಿಕೆಗೆ ಹಾಗೂ ಭೂಮಿಯ ಎಲ್ಲಾ ಕುಟುಂಬಗಳ ಆಶೀರ್ವಾದಕ್ಕೆ ದೈವಿಕ ಮಾರ್ಗವಾಗಿದೆ.

ನಮ್ಮ ಕರ್ತನ ತ್ಯಾಗದಿಂದ ಖರೀದಿಸಲ್ಪಟ್ಟ ಮರುಸ್ಥಾಪನೆಯ ಆಶೀರ್ವಾದಗಳನ್ನು ಪಡೆಯಲು, ರೊಟ್ಟಿಯನ್ನು ತಿನ್ನುವುದು ಹಾಗೂ ನಮ್ಮ ಕರ್ತನ ಮರಣ ಮತ್ತು ಅದನ್ನು ಸ್ವೀಕರಿಸುವ ಮೂಲಕ ಉಂಟಾಗುವ ನೀತಿವಂತಿಕೆಯಲ್ಲಿ ಭಾಗವಹಿಸುವುದು ಇಡೀ ಲೋಕಕ್ಕೆ ಅಗತ್ಯವಾಗಿದ್ದರೂ, ಪಾತ್ರೆಯು ಲೋಕಕ್ಕಾಗಿ ಅಲ್ಲ, ಬದಲಾಗಿ ಸಭೆಗೆ ಮಾತ್ರ, ಈ

ಸುವಾರ್ತಾ ಯುಗದಲ್ಲಿ ಅರ್ಪಣೆಮಾಡಿಕೊಂಡವರಿಗೆ ಮಾತ್ರ. "ನೀವೆಲ್ಲರೂ ಇದರಲ್ಲಿರುವದನ್ನು ಕುಡಿಯಿರಿ", ನೀವೆಲ್ಲರೂ ಇದನ್ನು ಕುಡಿಯುವುದು ಮಾತ್ರವಲ್ಲ ಬದಲಿಗೆ, ನೀವೆಲ್ಲರೂ ಇದನ್ನು ಸಂಪೂರ್ಣವಾಗಿ ಕುಡಿಯಿರಿ. ಮುಂಬರುವ ಯುಗಕ್ಕೆ ಕ್ರಿಸ್ತನು ಅನುಭವಿಸಿದ ಯಾವುದೇ ಕಷ್ಟಗಳು ಉಳಿಯುವುದಿಲ್ಲ, ನೀತಿಯ ನಿಮಿತ್ತ ಇನ್ನು ಮುಂದೆ ಯಾವುದೇ ಕಷ್ಟಗಳು ಲೋಕಕ್ಕೆ ತಿಳಿಯುವುದಿಲ್ಲ, ನಂತರ ದುಷ್ಟರು ಮಾತ್ರ ಕಷ್ಟ ಪಡುತ್ತಾರೆ. ಪ್ರಸ್ತುತ ಕಾಲವು ದೈವಭಕ್ತಿಯಿಂದ ಬದುಕಲು ಇಚ್ಛಿಸುವವರೆಲ್ಲರೂ ಹಿಂಸೆ ಅನುಭವಿಸುವ ಕಾಲವಾಗಿದೆ. ಹಾಗೂ ಕರ್ತನಿಗೆ ನಿಷ್ಠಾವಂತರಾಗಿರುವ ಮತ್ತು ಆತನ ರಾಜ್ಯದ ಮಹಿಮೆಯಲ್ಲಿ ಹಂಚಿಕೊಳ್ಳಲು ಅರ್ಹರೆಂದು ಎಣಿಸಲ್ಪಡುವ ಎಲ್ಲಾ ಅನುಯಾಯಿಗಳು ಆತನ ಪಾತ್ರೆಯಲ್ಲಿ ಕುಡಿಯುವ ನಿರೀಕ್ಷೆಹೊಂದಿರಬೇಕು. ಆದ್ದರಿಂದ, ಮತ್ತೊಮ್ಮೆ, ಕರ್ತನು ಎರಡು ಆಲೋಚನೆಗಳನ್ನು ಒಂದುಗೂಡಿಸಿ, *"ನೀವು ಮನುಷ್ಯಕುಮಾರನ ಮಾಂಸವನ್ನು ತಿಂದು ಆತನ ರಕ್ತವನ್ನು ಕುಡಿಯದ ಹೊರತು ನಿಮ್ಮೊಳಗೆ ಜೀವವಿಲ್ಲ"* ಎಂದು ಹೇಳುತ್ತಾನೆ. ***(ಯೋಹಾನನು 6:53)*** ಪ್ರಸ್ತುತ ಕಾಲದಲ್ಲಿ ಕರ್ತನ ಶಿಷ್ಯರಾಗಿ ಆತನ ಹೆಜ್ಜೆಜಾಡಿನಲ್ಲಿ ನಡೆಯಲು ಅರ್ಪಣೆಮಾಡಿಕೊಂಡವರು, ಈಗ ಎಲ್ಲವನ್ನೂ ತ್ಯಜಿಸಿ ಆತನ ಶಿಷ್ಯರಾಗಲು ಆದುಕೊಂಡವರಿಗೆ ವಾಗ್ದಾನ ಮಾಡಲಾದ ನಿತ್ಯಜೀವವನ್ನು ಪಡೆಯಲು, ನಂಬಿಕೆಯ ಮೂಲಕ ನೀತಿವಂತಿಕೆಯಲ್ಲಿ ಪಾಲ್ಗೊಳ್ಳುವುದು ಮಾತ್ರವಲ್ಲದೆ, ಬಲಿಯ(ತ್ಯಾಗದ) ಮೂಲಕ ಪಾತ್ರೆಯನ್ನು ಸಹ ಹಂಚಿಕೊಳ್ಳಬೇಕು.

## NEW WINE IN THE KINGDOM
## ದೇವರ ರಾಜ್ಯದಲ್ಲಿ ಹೊಸ ದ್ರಾಕ್ಷಾರಸ

*"ನಾನು ನನ್ನ ತಂದೆಯ ರಾಜ್ಯದಲ್ಲಿ ದ್ರಾಕ್ಷಾರಸವನ್ನು ನಿಮ್ಮ ಸಂಗಡ ಹೊಸದಾಗಿ ಕುಡಿಯುವ ದಿನದವರೆಗೂ ಇನ್ನು ಕುಡಿಯುವದೇ ಇಲ್ಲ"* ***(ಮತ್ತಾಯ 26:29)*** ಎಂದು ಘೋಷಿಸುವಲ್ಲಿ ನಮ್ಮ ಕರ್ತನು ಭವಿಷ್ಯದಲ್ಲಿ, ವಿಭಿನ್ನ ಪರಿಸ್ಥಿತಿಗಳಲ್ಲಿ ಹೊಸ ದ್ರಾಕ್ಷಾರಸವನ್ನು ಸೂಚಿಸುತ್ತಾನೆ.

**[R3880 : ಪುಟ 335]** ಈ ರೀತಿಯಾಗಿ, ಕರ್ತನು ಈ ಸಮಯದಲ್ಲಿ ತನ್ನ ರಾಜ್ಯವನ್ನು ಸ್ಥಾಪಿಸುವುದಿಲ್ಲ, ಬದಲಿಗೆ ಆತನು ಶ್ರಮೆಗಳನ್ನು (ಬಾಧೆ) ಅನುಭವಿಸುತ್ತಾನೆ, ಶಿಲುಬೆಗೆ ಹಾಕಲ್ಪಡುತ್ತಾನೆ ಮತ್ತು ಶಿಷ್ಯರು ಸಹ ಆತನೊಂದಿಗೆ ಅನುಭವಿಸಬೇಕೆಂಬುದನ್ನು ನಿರೀಕ್ಷಿಸಬೇಕು ಎಂದು ಕರ್ತನು ಈ ಹಿಂದೆ ಕೆಲವು ವಾರಗಳವರೆಗೆ ಅವರಿಗೆ ಬೋಧಿಸುತ್ತಿದ್ದುದನ್ನು ಅವರ ಮನಸ್ಸಿನಲ್ಲಿ ದೃಢಪಡಿಸಿದರು ಮತ್ತು ರಾಜ್ಯವು ಸ್ಥಾಪನೆಯಾದಾಗ ಮತ್ತು ಸ್ವತಃ ಮಹಿಮೆಯಲ್ಲಿದ್ದಾಗ, ಶಿಷ್ಯರು ಸಹ ತನ್ನೊಂದಿಗೆ ಸಿಂಹಾಸನದಲ್ಲಿ ಇರುತ್ತಾರೆ ಎಂಬುದನ್ನು ದೃಢೀಕರಿಸಲ್ಪಟ್ಟರು. ಹೀಗೆ, ಅವರ ಮನಸ್ಸಿನಲ್ಲಿರುವ ಈ ಹೊಸ ಆಲೋಚನೆಗಳು ಈಗ ನೀಡಲಾದ ಪಾಠದಿಂದ ದೃಢೀಕರಿಸಲ್ಪಟ್ಟವು.

ಪಾತ್ರೆಯು ಪ್ರಸ್ತುತ ಕಾಲದಲ್ಲಿ, ದ್ರಾಕ್ಷಿಯನ್ನು ಜಜ್ಜಲ್ಪಡುವುದು, ದ್ರಾಕ್ಷಿಯ ರಕ್ತ, ಅವರ ಕರ್ತನ ರಕ್ತ, ಆತನು ತ್ಯಾಗ ಮಾಡಿದ ಜೀವನ, ಸುರಿಯಲ್ಪಟ್ಟ ರಕ್ತ ಮತ್ತು ಅವರ ಜೀವನವೂ ಆತನ ಸೇವೆಯಲ್ಲಿ, ಆತನ ಉದ್ದೇಶದಲ್ಲಿ, ಆತನೊಂದಿಗೆ ತ್ಯಾಗ ಮಾಡುವುದರ ಬಗ್ಗೆ ತಿಳಿಸುತ್ತದೆ. ಆದರೆ, ಈ ಪ್ರಸ್ತುತ ಕಾಲದ ಕಷ್ಟಗಳು, ಮುಂದೆ ಬರುವ ಮಹಿಮೆಯೊಂದಿಗೆ ಸಂಬಂಧ ಹೊಂದಿದೆ. ಪ್ರಸ್ತುತ ಕಾಲದ ಕಷ್ಟ, ಅವಮಾನ ಮತ್ತು ಮರಣದ ಪಾತ್ರೆಯಲ್ಲಿ ಪಾನಮಾಡುವವರೆಲ್ಲರೂ, ಆತನೊಂದಿಗೆ ಆತನ ಸಂತೋಷ, ಆಶೀರ್ವಾದ, ಮಹಿಮೆ ಮತ್ತು ಗೌರವದ ಪಾತ್ರೆಯನ್ನು ರಾಜ್ಯದಲ್ಲಿ ಹಂಚಿಕೊಳ್ಳಲಿದ್ದಾರೆ ಎಂಬ ಆಲೋಚನೆಯಿಂದ ಪಾನಮಾಡಬೇಕು. ಇದೇ ಆಲೋಚನೆಯು ನಮ್ಮ ಮನಸ್ಸಿನಲ್ಲಿಯೂ ಇರಬೇಕು ಮತ್ತು ಹಳೆಯ ಕಾಲದ ಅಪೊಸ್ತಲರಂತೆ, ಕ್ರಿಸ್ತನ ಹೆಸರಿಗಾಗಿ ಶ್ರಮೆಯನ್ನು ಅನುಭವಿಸುತ್ತಿರುವ ಸಮಯವು ಕೊನೆಗೊಳ್ಳುವ ಮತ್ತು ಮಹಿಮೆಗಳು ಅನುಸರಿಸಿ, ಭೂಮಿಯ ಎಲ್ಲಾ ಕುಟುಂಬಗಳ ಆಶೀರ್ವಾದಕ್ಕೆ ಕಾರಣವಾಗುವ ಸಮಯಕ್ಕಾಗಿ ರಾಜ್ಯವನ್ನು ಹೆಚ್ಚು ಹೆಚ್ಚು ಎದುರುನೋಡಲು ಈ ಆಲೋಚನೆಯು ನಮಗೆ

ಸಹಾಯ ಮಾಡುತ್ತದೆ. ನಮ್ಮ ಕರ್ತನು ಇಲ್ಲಿ ತನ್ನ ರಾಜ್ಯವನ್ನು ತನ್ನ ಎರಡನೇ ಪ್ರತ್ಯಕ್ಷದೊಂದಿಗೆ ಗುರುತಿಸುತ್ತಾನೆ ಮತ್ತು ಯಾವುದೇ ಅರ್ಥದಲ್ಲಿಯೂ ಅವರು ಪಂಚಾಶತ್ತಮ ದಿನದಲ್ಲಿ ಅಥವಾ ಯೆರೂಸಲೇಮಿನ ನಾಶನದ ಸಮಯದಲ್ಲಿ ಅಥವಾ ಬೇರೆ ಯಾವುದೇ ಸಮಯದಲ್ಲಿ ಈ ಹೊಸ ದ್ರಾಕ್ಷಾರಸವನ್ನು ಪಾನಮಾಡಲಿದ್ದಾರೆ ಎಂದು ಸೂಚಿಸುವುದಿಲ್ಲ. ಬದಲಾಗಿ, ಆತನು ಅವರಿಗೆ ತಿಳಿಸಿದ ಪ್ರಾರ್ಥನೆಯಲ್ಲಿ *"ನಿನ್ನ ರಾಜ್ಯವು ಬರಲಿ, ನಿನ್ನ ಚಿತ್ತವು ಪರಲೋಕದಲ್ಲಿ ನೆರವೇರುವ ಪ್ರಕಾರ ಭೂಲೋಕದಲ್ಲಿಯೂ ನೆರವೇರಲಿ"* ***(ಮತ್ತಾಯ 6:10)*** ಎಂದು ಹೇಳಿದನು.

ನಮ್ಮ ಮನಸ್ಸಿನಲ್ಲಿಯೂ ಇದೇ ಆಲೋಚನೆ ಇರಬೇಕು. ನಾವು ರಾಜ್ಯಕ್ಕಾಗಿ ಕಾಯುತ್ತಿರುವಂತೆ, ನಮ್ಮ ಕರ್ತನ ಎರಡನೇ ಪ್ರತ್ಯಕ್ಷತೆ ಮತ್ತು ನಂತರದ ರಾಜ್ಯ ಸ್ಥಾಪನೆಗಾಗಿ ಕಾಯುತ್ತಿದ್ದೇವೆ. ಅಂದರೆ, ಪುನರುತ್ಥಾನದ ಬದಲಾವಣೆಗಾಗಿ, ಆತನೊಂದಿಗೆ ಮತ್ತು ಆತನ ಮಹಿಮೆಯಲ್ಲಿ ಪಾಲುಹೊಂದಬೇಕಾದ ಆತನ ನಂಬಿಗಸ್ತರು ಮಹಿಮೆಯನ್ನು ಹೊಂದಿಕೊಳ್ಳುತ್ತಾರೆ. ಆತನ ಮೇಲೆ ಈ ನಿರೀಕ್ಷೆಯನ್ನು ಇಟ್ಟಿರುವ ಪ್ರತಿಯೊಬ್ಬನು ಕ್ರಿಸ್ತನು ಶುದ್ಧನಾಗಿರುವಂತೆಯೇ ತನ್ನನ್ನು ಶುದ್ಧಮಾಡಿಕೊಳ್ಳುತ್ತಾನೆ ಎಂದು ಅಪೊಸ್ತಲನು ಹೇಳಿರುವುದರಲ್ಲಿ ಆಶ್ಚರ್ಯವಿಲ್ಲ ***(1 ಯೋಹಾನ 3:3)***. ಕರ್ತನ ರಾಜ್ಯದಲ್ಲಿ ಹೊಸ ದ್ರಾಕ್ಷಾರಸದ ಈ ನಿರೀಕ್ಷೆಯನ್ನು ಹೊಂದಿರುವವರು, ತನ್ನ ಯಜಮಾನನೊಂದಿಗೆ ಆ ಮಹಿಮೆಯಲ್ಲಿ, ಗೌರವದಲ್ಲಿ ಮತ್ತು ಮಾನವಕುಲವನ್ನು ಉನ್ನತೀಕರಿಸುವ ಆಶೀರ್ವಾದದ ಅವಕಾಶಗಳಲ್ಲಿ ಭಾಗವಹಿಸುವವನು, ಪ್ರಸ್ತುತ ಕಾಲದ ಕಷ್ಟಗಳು, ಪರೀಕ್ಷೆಗಳು, ತ್ಯಾಗಗಳನ್ನು ಹಗುರವಾಗಿ ಸಂತೋಷದಿಂದ ಸ್ವೀಕರಿಸುತ್ತಾನೆ. ಹಾಗಾಗಿ, ಅವರು ಸಹ ಯಜಮಾನನೊಂದಿಗೆ ಮಹಿಮೆಯನ್ನು ಹೊಂದುವಂತೆ ಆತನೊಂದಿಗೆ ಶ್ರಮೆಯನ್ನು ಅನುಭವಿಸಲು ಸಂತೋಷಪಡುತ್ತಾನೆ.

## FOR THE REMISSION OF SINS
## ಪಾಪಗಳ ಪರಿಹಾರಕ್ಕೋಸ್ಕರ

ನಮ್ಮ ದೃಷ್ಟಿಯಿಂದ, ದೇವರು ಯಾರಿಂದಲೂ ದಂಡವನ್ನು (Penalty) ವಿಧಿಸದೆ ಪಾಪಗಳನ್ನು ಕ್ಷಮಿಸುತ್ತಾನೆ ಎಂದು ಮನುಷ್ಯರು ಬೋಧಿಸುವುದು ವ್ಯರ್ಥವಾಗಿದೆ. ಕ್ರಿಸ್ತನು ಪಾಪಿಗಳಿಗಾಗಿ ಈಡುಬಲಿಯ (Ransom) ಬೆಲೆಯಾಗಿರಲಿಲ್ಲವೆಂದು ಅವರು ಹೇಳಿಕೊಳ್ಳುವುದು ವ್ಯರ್ಥವಾಗಿದೆ. ನಮ್ಮನ್ನು ದೇವರೊಡನೆ ಪೂರ್ತಿ ಸಮಾಧಾನಪಡಿಸಲು, ದೇವರು ನೀತಿವಂತನಾಗಿದ್ದು ಪಾಪಿಯನ್ನು ಸಮರ್ಥಿಸುವುದಕ್ಕೆ, ಕ್ರಿಸ್ತನು ಸಾಯಬೇಕಾದ ಅಗತ್ಯವಿರಲಿಲ್ಲ, ನೀತಿವಂತನು ಅನೀತಿವಂತರಿಗಾಗಿ ಬಲಿಯಾಗಬೇಕಾಗಿರಲಿಲ್ಲ ಎಂದು ಅವರು ಹೇಳಿಕೊಳ್ಳುವುದು ವ್ಯರ್ಥವಾಗಿದೆ. ಯೇಸು ಒಬ್ಬ ಶ್ರೇಷ್ಠ ಬೋಧಕನಾಗಿದ್ದರೆ ಸಾಕು, ಆತನ ವಾಕ್ಯಗಳಿಂದ ಲೋಕವನ್ನು ರಕ್ಷಿಸಬಹುದು ಎಂದು ಅವರು ಹೇಳಿಕೊಳ್ಳುವುದು ಕೂಡ ವ್ಯರ್ಥವಾಗಿದೆ. ಕ್ರಿಸ್ತನು ನಮ್ಮ ಪಾಪಗಳಿಗಾಗಿ ಸಾಯುವುದು ಅನಿವಾರ್ಯವಾಗಿತ್ತು ಮತ್ತು ದೈವಿಕ ವ್ಯವಸ್ಥೆಯ ಮೂಲಕ ಆತನು ನಮ್ಮ ದಂಡವನ್ನು ಪಾವತಿಸದೆ ಇದ್ದರೆ, ನಮ್ಮ ಪಾಪಗಳನ್ನು ದೈವಿಕ ನೀತಿಯು ಎಂದಿಗೂ ಕ್ಷಮಿಸಲು ಸಾಧ್ಯವಿಲ್ಲ ಎಂಬುದು ಕರ್ತನ ಹೇಳಿಕೆಗೆ ಮತ್ತು ಎಲ್ಲಾ ಅಪೊಸ್ತಲರ ಸಾಕ್ಷ್ಯಕ್ಕೆ ಹೊಂದಿಕೆಯಾಗುವಂತೆ ನಮ್ಮ ಉತ್ತರವಾಗಿದೆ. ಆದ್ದರಿಂದ, ನಮ್ಮ ಕರ್ತನ ರಕ್ತವು ಅನೇಕರ ಪಾಪಗಳ ಪರಿಹಾರಕ್ಕಾಗಿ ನಿಜವಾಗಿಯೂ ಸುರಿಸಲ್ಪಟ್ಟಿದೆ ಎಂಬುದು ನಮಗೆ ಅತ್ಯಂತ ಅಮೂಲ್ಯವಾದ ಆಲೋಚನೆಯಾಗಿದೆ. ಮತ್ತು ಕ್ರಿಸ್ತನ ಶರೀರದ ಅಂಗಗಳಾಗಿ ಆತನೊಂದಿಗೆ ತುಂಬಾ ನಿಕಟ ಸಂಬಂಧ ಹೊಂದಲು ನಾವು ಸವಲತ್ತು ಪಡೆದಿದ್ದೇವೆ ಎಂಬುದು ನಮಗೆ ಅಮೂಲ್ಯವಾದ ಆಲೋಚನೆಯಾಗಿದೆ. ಆತನ ಬಲಿಯ ಪುಣ್ಯವು ಆವರಿಸಲ್ಪಟ್ಟ ನಮ್ಮ ಸಣ್ಣ ತ್ಯಾಗಗಳು ದೇವರ ದೃಷ್ಟಿಯಲ್ಲಿ ಲೋಕಕ್ಕಾಗಿ ಮಹಾ ಪಾಪ ಯಜ್ಞದ ಭಾಗವಾಗಿ ಪರಿಗಣಿಸಲ್ಪಡುತ್ತವೆ. ಕ್ರಿಸ್ತನ ಜೊತೆಗೆ

ಬಾಧೆಪಡುವವರಾಗಿ ನಾವು ಆತನ ಪಾತ್ರೆಯಲ್ಲಿ ಕುಡಿಯಲು ಮತ್ತು ಆತನ ಮರಣದ ದೀಕ್ಷಾಸ್ನಾನದಲ್ಲಿ ಮುಳುಗಲು ಅನುಮತಿ ಹೊಂದಿದ್ದೇವೆ.

ಮಾನವನು ದೇವರ ಸ್ವರೂಪದಿಂದ ಪಾಪ ಮತ್ತು ಮರಣಕ್ಕೆ ಬೀಳುವುದರ ಬದಲು, ಪ್ರಾಣಿಗಳ ಸ್ಥಿತಿಯಿಂದ ಕ್ರಮೇಣ ಮೇಲಕ್ಕೆ ಏರುತ್ತಾ, ಈಗಿನ ಸ್ಥಿತಿಗೆ ಬಂದಿದ್ದಾನೆ ಎಂದು ವಿಕಾಸವಾದಿಗಳು (Evolutionists) ಮತ್ತು ಧರ್ಮಗ್ರಂಥ ವಿಮರ್ಶಕರು (Higher critics) ನಮಗೆ ಹೇಳುವುದು ವ್ಯರ್ಥವಾಗಿವೆ. ನಾವು ಅವರನ್ನು ನಂಬುವುದಿಲ್ಲ. ಮಾನವನು ಪಾಪದಲ್ಲಿ ಬಿದ್ದನು, ಇದರಿಂದಲೇ ವಿಮೋಚನೆಯ ಕಾರ್ಯ ಅನಿವಾರ್ಯವಾಯಿತು ಮತ್ತು ಕ್ರಿಸ್ತನು ದೇವರ ಗೌರವಾನ್ವಿತ(ಮಾನ್ಯ) ಸೇವಕನಾಗಿದ್ದು, ಇಡೀ ಲೋಕದ ಪಾಪಗಳಿಗೆ ಪರಿಹಾರ ಮಾಡಲು ದೇವರಿಂದ ಆಯ್ಕೆಯಾದನು ಮತ್ತು ಅಧಿಕಾರ ಹೊಂದಿದ್ದನು ಮತ್ತು ಆತನು ತನ್ನನ್ನು ತಾನೇ ಬಲಿಯಾಗಿ ಅರ್ಪಿಸುವ ಮೂಲಕ ಪಾಪ ಪರಿಹಾರ ಕಾರ್ಯವನ್ನು ಪ್ರಾರಂಭಿಸಿದನು ಮತ್ತು ಈ ಸುವಾರ್ತಾ ಯುಗದಲ್ಲಿ ಆತನು ತನ್ನ ಶರೀರವಾದ ಸಭೆಯು ತ್ಯಾಗ ಮಾಡುವ ಮೂಲಕ ಅದನ್ನು ಮುಂದುವರಿಸುತ್ತಿದ್ದಾನೆ ಮತ್ತು ಶೀಘ್ರದಲ್ಲೇ ಅದನ್ನು ಪೂರ್ಣಗೊಳಿಸುತ್ತಾನೆ, ಆತನು ತನ್ನ ಎಲ್ಲಾ ಅಂಗಗಳೊಂದಿಗೆ ಮಹಿಮೆಪಡಿಸಲ್ಪಟ್ಟಾಗ, ಸಾವಿರ ವರ್ಷದ ಯುಗದಲ್ಲಿ ಆ ವಿಮೋಚನಾ ಕಾರ್ಯದ ಆಶೀರ್ವಾದಗಳನ್ನು ಲೋಕಕ್ಕೆ ವಿತರಿಸುತ್ತಾನೆ, ಎಲ್ಲರೂ ಸತ್ಯದ ಜ್ಞಾನಕ್ಕೆ, ದೇವರ ಪ್ರೀತಿಯ ಜ್ಞಾನಕ್ಕೆ ಬರುವಂತೆ ಮಾಡುತ್ತಾನೆ ಮತ್ತು ದೇವರ ಪ್ರೀತಿಯ ಎತ್ತರ, ಆಳ, ಉದ್ದ ಮತ್ತು ಅಗಲ ಎಷ್ಟೆಂಬದನ್ನು ಗ್ರಹಿಸಲೂ ಸಾಧ್ಯವಿಲ್ಲ. ಹಾಗಾಗಿ, ನಮ್ಮನ್ನು ಪ್ರೀತಿಸಿದ ಮತ್ತು ತನ್ನ ಅಮೂಲ್ಯ ರಕ್ತದಿಂದ ನಮ್ಮನ್ನು ಕೊಂಡುಕೊಂಡಾತನ ಮೂಲಕ ಎಲ್ಲವನ್ನೂ ಸಾಧಿಸಲಾಗಿದೆ ಎಂದು ನಾವು ದೈವಿಕ ಪ್ರೇರಿತ ಸಾಕ್ಷಿಯನ್ನು ದೃಢವಾಗಿ ಹಿಡಿದಿಟ್ಟುಕೊಂಡಿದ್ದೇವೆ.

## IN REMEMBRANCE OF ME

## ನನ್ನನ್ನು ನೆನಸಿಕೊಳ್ಳುವದಕ್ಕೋಸ್ಕರ

ಅಪೋಸ್ತಲ ಪೌಲನು ಈ ಜ್ಞಾಪಕಾರ್ಥ(ಕ್ರಿಸ್ತನ ಸ್ಮರಣೆ) ಭೋಜನದ ಬಗ್ಗೆ ಮಾತನಾಡುತ್ತಾ, ನಮ್ಮ ಕರ್ತನ ವಾಕ್ಯಗಳನ್ನು ಉಲ್ಲೇಖಿಸಿ, *"ನನ್ನನ್ನು ನೆನಸಿಕೊಳ್ಳುವದಕ್ಕೋಸ್ಕರ ಹೀಗೆ ಮಾಡಿರಿ"* ಎಂದು ಹೇಳುತ್ತಾತ್ತಾನೆ. ನಂತರ ಆತನು ಹೀಗೆ ಹೇಳುತ್ತಾ, *"ನೀವು ಈ ರೊಟ್ಟಿಯನ್ನು ತಿಂದು ಈ ಪಾತ್ರೆಯಲ್ಲಿ ಪಾನಮಾಡುವಷ್ಟು ಸಾರಿ ಕರ್ತನ ಮರಣವನ್ನು ಆತನು ಬರುವ ತನಕ ಪ್ರಸಿದ್ಧಿಪಡಿಸುತ್ತೀರಿ." (1 ಕೊರಿಂಥ 11:24-26)*. ನಮ್ಮನ್ನು ಪ್ರೀತಿಸಿ, ಕ್ರಯಕ್ಕೆ ಕೊಂಡವನೊಂದಿಗೆ ನಾವು ಹಂಚಿಕೊಳ್ಳಬೇಕಾದ ಹೊಸ ದ್ರಾಕ್ಷಾರಸ, ಸಂತೋಷ, ಮಹಿಮೆ ಮತ್ತು ಗೌರವಗಳೊಂದಿಗೆ ರಾಜ್ಯದಲ್ಲಿ ಆಚರಣೆಯ ಸಮಯ ಬರುವವರೆಗೆ, ನಾವು ಈ ಮಹತ್ವದ ಕಾರ್ಯವನ್ನು ಹೀಗೆ ಆಚರಿಸಬೇಕೆಂಬುದೇ ಇದರ ಆಲೋಚನೆ. ಅಪೊಸ್ತಲನು ಸ್ಪಷ್ಟವಾಗಿ ಹೇಳುವುದೇನೆಂದರೆ, ಪರೋಷಿಯಾ(Parousia) ಬರುವವರೆಗೆ ಅಲ್ಲ, ಅಂದರೆ ಕರ್ತನ ಪ್ರತ್ಯಕ್ಷತೆಯು ತನ್ನ ಸೇವಕರನ್ನು ಒಟ್ಟುಗೂಡಿಸಿ ಅವರಿಗೆ ಪ್ರತಿಫಲ ನೀಡುವವರೆಗೆ ಎಂದು ಹೇಳುವುದಿಲ್ಲ, ಬದಲಾಗಿ ಎಲ್ಲರೂ ಒಟ್ಟುಗೂಡಿಸಲ್ಪಡುವವರೆಗೆ ಮತ್ತು ಸಭೆಯು ಹೀಗೆ ಸ್ಥಾಪಿಸಲ್ಪಟ್ಟು ಮಹಿಮೆಯನ್ನು ಹೊಂದುವವರೆಗೆ ಎಂದು ಹೇಳಲಾಗಿದೆ.

ಅಪೋಸ್ತಲನಾದ ಪೌಲನು ಅದೇ ಪತ್ರಿಕೆಯಲ್ಲಿ *(1 ಕೊರಿಂಥ 10:16,17; 12:12)* ಏಕತೆಯ ಆಲೋಚನೆಯನ್ನು, ಸಭೆಯಾದವರು ಒಬ್ಬರಿಗೊಬ್ಬರು ಮತ್ತು ಯೇಸುವಿನೊಂದಿಗೆ ಇರುವ ಹೊಂದಾಣಿಕೆಯನ್ನು ಒತ್ತಿ ಹೇಳುತ್ತಾನೆ. ಅವರು ಹೇಳುವುದೇನೆಂದರೆ, *"ನಾವು ರೊಟ್ಟಿಯನ್ನು ಮುರಿದು ತಿನ್ನುವದು, ಕ್ರಿಸ್ತನ ದೇಹದಲ್ಲಿ ಪಾಲುಗಾರರಾಗಿದ್ದೇವೆಂಬದನ್ನು[ಐಕ್ಯತೆ] ಸೂಚಿಸುತ್ತದಲ್ಲವೇ?" ನಾವೆಲ್ಲರೂ ಕರ್ತನೊಂದಿಗೆ ಮುರಿದ ಒಂದೇ ರೊಟ್ಟಿಯ ಭಾಗಗಳಂತಿಲ್ಲವೇ?. "ರೊಟ್ಟಿಯು ಒಂದೇಯಾಗಿರುವದರಿಂದ ಅನೇಕರಾಗಿರುವ ನಾವು ಒಂದೇ ದೇಹದಂತಿದ್ದೇವೆ,*

*ಯಾಕಂದರೆ ನಾವೆಲ್ಲರೂ ಆ ಒಂದೇ ರೊಟ್ಟಿಯಲ್ಲಿ ಪಾಲುತಕ್ಕೊಂಡು ತಿನ್ನುತ್ತೇವೆ."* ಮತ್ತು ಅವರು ಹೇಳುವುದೇನೆಂದರೆ, *"ನಾವು ದೇವಸ್ತೋತ್ರಮಾಡಿ ಪಾತ್ರೆಯಲ್ಲಿ ಪಾನಮಾಡುವದು ಕ್ರಿಸ್ತನ ರಕ್ತದಲ್ಲಿ ಪಾಲುಗಾರರಾಗಿದ್ದೇವೆಂಬದನ್ನು [ಭಾಗವಹಿಸುವಿಕೆ, ಐಕ್ಯತೆ] ಸೂಚಿಸುತ್ತದಲ್ಲವೇ?".* ಖಂಡಿತವಾಗಿಯೂ, ಆದುಕೊಂಡ ತಲೆ ಮತ್ತು ಆತನ ಆದುಕೊಂಡ ಶರೀರದ ಅಂಗಗಳು ಸೇರಿ ದೇವರ ದೃಷ್ಟಿಯಲ್ಲಿ ಒಬ್ಬನೇ ಮೆಸ್ಸಿಯನಾಗಿದ್ದಾನೆ ಎಂಬ ಆಲೋಚನೆ ಇಲ್ಲಿ ದೃಢಪಡುತ್ತದೆ. **[R3881 : ಪುಟ 335]** ಇವು(ಕ್ರಿಸ್ತನು ಮತ್ತು ಸಭೆ) ಒಂದೇ ರೊಟ್ಟಿಯಾಗಿ, ದೇವರ ದೃಷ್ಟಿಕೋನದಿಂದ ಲೋಕಕ್ಕೆ ನಿತ್ಯಜೀವದ ರೊಟ್ಟಿಯಾಗಿದೆ ಮತ್ತು ಈ ಚಿತ್ರವನ್ನು ತುಂಬಲು ಪ್ರತಿಯೊಬ್ಬರೂ ಮುರಿಯಬೇಕು, ಪ್ರತಿಯೊಬ್ಬರೂ ಕ್ರಿಸ್ತನ ಮಹಿಮೆಯನ್ನು ಪ್ರವೇಶಿಸುವ ಮೊದಲು ಆತನ ಸಂಕಟ ಮತ್ತು ಮರಣದ ಪಾತ್ರೆಯಲ್ಲಿ ಪಾಲ್ಗೊಳ್ಳಬೇಕು. ಈ ಎಲ್ಲಾ ಸಂಕಟಗಳು ಪೂರ್ಣಗೊಳ್ಳುವವರೆಗೆ, ಲೋಕಕ್ಕೆ ಸಂಬಂಧಿಸಿದಂತೆ ಹೊಸ ಯುಗ, ಹೊಸ ದಿನ, ಶಪಿಸುವ ಬದಲು ಆಶೀರ್ವಾದದ ದಿನ, ಸಾಯುವ ಬದಲು ಮರುಸ್ಥಾಪನೆ ದಿನ, ಬೀಳುವ ಬದಲು ಉನ್ನತಿಗೇರಿಸುವ ದಿನಕ್ಕಾಗಿ ಕರ್ತನ ಸಮಯವೂ ಬರುವುದಿಲ್ಲ.

[R1898: ಪುಟ 273]

# "ಕರ್ತನ ಪಾತ್ರೆ ಮತ್ತು ಕರ್ತನ ಮೇಜು"

## *THE CUP OF THE LORD AND THE TABLE OF THE LORD*

**1 ಕೊರಿಂಥದವರಿಗೆ *10:21,22***

*"ನೀವು ಕರ್ತನಪಾತ್ರೆಯಲ್ಲಿಯೂ ದೆವ್ವಗಳ ಪಾತ್ರೆಯಲ್ಲಿಯೂ ಕುಡಿಯಲಾರಿರಿ; ನೀವು ಕರ್ತನ ಮೇಜಿನಲ್ಲಿಯೂ ದೆವ್ವಗಳ ಮೇಜಿನಲ್ಲಿಯೂ ಪಾಲುಗಾರರಾಗಲಾರಿರಿ. ಕರ್ತನನ್ನು ರೇಗಿಸಬೇಕೆಂದಿದ್ದೇವೋ? ಆತನಿಗಿಂತಲೂ ನಾವು ಬಲಿಷ್ಠರೇನು?"*

---

ನಾವು ಈ ಎಚ್ಚರಿಕೆಯ ಮಾತುಗಳನ್ನು *"ಕೊರಿಂಥದಲ್ಲಿನ ದೇವರ ಸಭೆಗೆ"* ಮಾತ್ರವಲ್ಲದೆ, *"ಕ್ರಿಸ್ತ ಯೇಸುವಿನಲ್ಲಿ ಪ್ರತಿಷ್ಠಿತರೂ ಪರಿಶುದ್ಧರಾಗುವದಕ್ಕೆ ಕರೆಯಲ್ಪಟ್ಟವರೂ ಆಗಿರುವವರಿಗೆ ಮತ್ತು ಅವರಿಗೂ ನಮಗೂ ಪ್ರತಿಯೊಂದು ಸ್ಥಳದಲ್ಲಿ ನಮ್ಮ ಕರ್ತನಾಗಿರುವ ಯೇಸು ಕ್ರಿಸ್ತನ ನಾಮಸ್ಮರಣೆಯನ್ನು ಮಾಡುವವರೆಲ್ಲರಿಗೂ" (1 ಕೊರಿಂಥದವರಿಗೆ 1:2)* ಉದ್ದೇಶಿಸಲ್ಪಟ್ಟಿವೆ ಎಂದು ನಾವು ಕಂಡುಕೊಳ್ಳುತ್ತೇವೆ. ಇವು ಸುವಾರ್ತೆಯ ಸಭೆಯ ಪರೀಕ್ಷೆಯಲ್ಲಿರುವ ಸಂಪೂರ್ಣ ಸದಸ್ಯತ್ವಕ್ಕೆ ಯುಗದ ಅಂತ್ಯದವರೆಗೂ ಅನ್ವಯಿಸುತ್ತವೆ.

ದೇವರಿಗೆ ಇನ್ನೂ ನಿಷ್ಠರಾಗಿಯೂ ಸತ್ಯವಂತರಾಗಿಯೂ ಇರುವ ಹೃದಯಗಳು, ಮೊದಲಿಗೆ ಇಂತಹ ಎಚ್ಚರಿಕೆಯನ್ನು ವಿಚಿತ್ರವಾಗಿ ಭಾವಿಸಬಹುದು ಮತ್ತು ಹೀಗೆ ಹೇಳಬಹುದು: *"ಪೌಲನೇ, ಪೌಲನೇ, ನಮಗೆ ಸೈತಾನನ ವಸ್ತುಗಳನ್ನು ಮುಟ್ಟಲು, ರುಚಿ ನೋಡಲು ಅಥವಾ ನಿರ್ವಹಿಸಲು ಯಾವುದೇ ಬಯಕೆ ಇಲ್ಲದಿರುವಾಗ ನಮಗೆ ಯಾಕೆ ಇಷ್ಟೊಂದು ಸಲಹೆ ನೀಡಬೇಕು? ಇಂತಹ ಸಲಹೆಯು ಕರ್ತನಿಗೆ ನಮ್ಮ ನಿಷ್ಠೆಯ ಬಗ್ಗೆ ಸ್ವಲ್ಪ ಅಪನಂಬಿಕೆಯನ್ನು ಸೂಚಿಸುವಂತೆ ತೋರುತ್ತದೆ."* ಆದರೆ ಪೌಲನು ಉತ್ತರಿಸುತ್ತಾನೆ: *"ಆದಕಾರಣ ನಿಂತಿದ್ದೇನೆಂದು ನೆನಸುವವನು ಬೀಳದಂತೆ ಎಚ್ಚರಿಕೆಯಾಗಿರಲಿ."* ಈ ಎಚ್ಚರಿಕೆಯು ಆರೋಗ್ಯಕರವಾಗಿದೆ; ಏಕೆಂದರೆ, ನಮ್ಮ ಪರೀಕ್ಷೆ ಮತ್ತು ಶೋಧನೆಯೂ ಇನ್ನೂ ಪೂರ್ಣಗೊಂಡಿಲ್ಲ. ಕರ್ತನು ತನ್ನ ಪಾತ್ರೆಯನ್ನು ನಮಗೆ ನೀಡುತ್ತಿರುವಾಗಲೇ, ಸೈತಾನನು ಸಹ ಬೆಳಕಿನ ದೂತನಂತೆ ತೋರಿ, ಮಹಾ ಕುತಂತ್ರದಿಂದ ತನ್ನ ಪಾತ್ರೆಯನ್ನು ಮುಂದಿಡುತ್ತಾನೆ. ಕರ್ತನು ತನ್ನ ಭೋಜನದ ಮೇಜನ್ನು ಸಿದ್ಧಪಡಿಸುವಾಗ, ಸೈತಾನನು ಸಹ ತನ್ನ ಮೇಜನ್ನು ಸಿದ್ಧಪಡಿಸುತ್ತಾನೆ.

ಕರ್ತನ ಪಾತ್ರೆ ಎಂದರೇನು? ಕರ್ತನು ಅದರ ಬಗ್ಗೆ ಹೇಳಿದ ಮಾತುಗಳನ್ನು ನೆನಪಿಸಿಕೊಳ್ಳಿ, *"ತಂದೆ ನನಗೆ ಕೊಟ್ಟಿರುವ ಪಾತ್ರೆಯಲ್ಲಿ ನಾನು ಕುಡಿಯಬಾರದೋ?"* ಮತ್ತೊಮ್ಮೆ, ಅದರ ಕಹಿಯಾದ ಅಂತಿಮ ಭಾಗವನ್ನೂ ಆತನು ಅನುಭವಿಸಬೇಕಾಗಿದ್ದಾಗ, ಆತನು ಈ ರೀತಿಯಾಗಿ ಪ್ರಾರ್ಥಿಸಿದನು: *"ಓ ನನ್ನ ತಂದೆಯೇ, ಸಾಧ್ಯವಾದರೆ ಈ ಪಾತ್ರೆಯು ನನ್ನನ್ನು ಬಿಟ್ಟು ಹೋಗಲಿ; ಆದಾಗ್ಯೂ, ನನ್ನ ಚಿತ್ತದಂತಲ್ಲ; ನಿನ್ನ ಚಿತ್ತದಂತೆಯೇ ಆಗಲಿ."* ಮತ್ತೊಂದು ಬಾರಿ, *"ಓ ನನ್ನ ತಂದೆಯೇ, ನಾನು ಈ ಪಾತ್ರೆಯಲ್ಲಿ ಕುಡಿಯದ ಹೊರತು ಇದು ನನ್ನನ್ನು ಬಿಟ್ಟು ಹೋಗಕೂಡದಾಗಿದ್ದರೆ ನಿನ್ನ ಚಿತ್ತವೇ ಆಗಲಿ"* ಅಂದನು. ಇದು ಮರಣದವರೆಗೂ ತ್ಯಾಗದ ಪಾತ್ರೆಯಾಗಿದೆ. ಮತ್ತು ಇದು ಕೇವಲ ಜೀವನದ ತ್ಯಾಗ ಮಾತ್ರವಲ್ಲ, ಬದಲಾಗಿ ಗೌರವ ಮತ್ತು

ಮಾನವೀಯತೆಯು ಪ್ರೀತಿಸುವ ಎಲ್ಲದರ ತ್ಯಾಗವೂ ಆಗಿದೆ. ಅವಮಾನಗಳು, ಹಿಂಸೆಗಳು, ನಂಬಿಕೆ ಮತ್ತು ತಾಳ್ಮೆಯ ತೀವ್ರ ಪರೀಕ್ಷೆಗಳ ಮಧ್ಯದಲ್ಲಿ ಜೀವನವನ್ನು ತ್ಯಾಗ ಮಾಡಲಾಗುತ್ತದೆ. ತನ್ನ ಶಿಷ್ಯರೊಂದಿಗೆ ಕೊನೆಯ ಭೋಜನವನ್ನು ಮಾಡಿದ ನಂತರ ಯೇಸು ಸಾಂಕೇತಿಕ ಪಾತ್ರೆಯನ್ನು ತೆಗೆದುಕೊಂಡು, *"ಇದು ಬಹು ಜನರ ಪಾಪಗಳ ಪರಿಹಾರಕ್ಕೋಸ್ಕರ ಸುರಿಸಲ್ಪಡುವ ಹೊಸಒಡಂಬಡಿಕೆಯ ನನ್ನ ರಕ್ತವಾಗಿದೆ... ನೀವೆಲ್ಲರೂ ಇದರಲ್ಲಿರುವದನ್ನು ಕುಡಿಯಿರಿ"* ಎಂದು ಹೇಳಿದನು. *(ಮತ್ತಾಯ 26:27,28.)* ಅಪೋಸ್ತಲನು *(1 ಕೊರಿಂಥದವರಿಗೆ 10:16)* ಇದೇ ಪಾತ್ರೆಯನ್ನು ಉಲ್ಲೇಖಿಸುತ್ತಾ ಹೇಳುತ್ತಾನೆ, *"ನಾವು ಸ್ತೋತ್ರಸಲ್ಲಿಸುವ ಸ್ತೋತ್ರದ ಪಾತ್ರೆಯು ಕ್ರಿಸ್ತನ ರಕ್ತದ ಅನ್ಯೋನ್ಯತೆಯಲ್ಲವೋ? ನಾವು ಮುರಿಯುವ ರೊಟ್ಟಿಯು ಕ್ರಿಸ್ತನ ದೇಹದ ಅನ್ಯೋನ್ಯತೆಯಲ್ಲವೋ?"* ಮತ್ತು ಹೀಗೆಯೇ, *"ಅನೇಕರಾದ ನಾವು ಒಂದೇ ರೊಟ್ಟಿಯೂ ಒಂದೇ ದೇಹವೂ ಆಗಿದ್ದೇವೆ; ನಾವೆಲ್ಲರೂ ಆ ಒಂದೇ ರೊಟ್ಟಿಯಲ್ಲಿ ಪಾಲುಗಾರರಾಗಿದ್ದೇವೆ."*

ಹೀಗಿರಲು, ಕ್ರಿಸ್ತನ ದೇಹವು ತಲೆಯೊಂದಿಗೆ ಒಂದೇ ಪಾತ್ರೆಯಲ್ಲಿ ಪಾಲುಗೊಳ್ಳುವದಕ್ಕೆ ಕರೆಯಲ್ಪಟ್ಟಿದೆ, ಅದು ತ್ಯಾಗದ, ಅವಮಾನ ಮತ್ತು ನಿಂದೆಯ ಪಾತ್ರೆ. *"ನೀವೆಲ್ಲರೂ ಇದರಲ್ಲಿರುವುದನ್ನು ಕುಡಿಯಿರಿ"* ಎಂದು ಕರ್ತನು ಹೇಳಿದನು. ಇದುವರೆಗೂ ಕರ್ತನ ಪಾತ್ರೆಯಲ್ಲಿ ನಂಬಿಗಸ್ತರಾಗಿ ಭಾಗವಹಿಸಿದವನು ಧನ್ಯನು, ಯಾಕಂದರೆ ಅವನು ಹೀಗೆ ಹೇಳಬಲ್ಲನು, *"ನಿನ್ನನ್ನು ದೂಷಿಸುವವರ ದೂಷಣೆಗಳು ನನ್ನ ಮೇಲೆ ಬಂದಿವೆ."*

ನಾವು ಕರ್ತನ ಪಾತ್ರೆಯನ್ನು ಏನೆಂದು ನೋಡಿದ್ದೇವೆ; ಈಗ ದೆವ್ವಗಳ ಪಾತ್ರೆಯನ್ನು ಏನೆಂದು ನೋಡೋಣ? ಅದು ಕೂಡ ತ್ಯಾಗದ ಪಾತ್ರೆಯಾಗಿದೆ; ಅದನ್ನು ಕುಡಿಯುವವರು ಪ್ರಸ್ತುತ ಜೀವನದಲ್ಲಿ ತಮ್ಮ ನಿಜವಾದ ಸಂತೋಷವನ್ನು ಮತ್ತು ಮುಂದಿನ ಜೀವನದ ನಿರೀಕ್ಷೆಗಳನ್ನು ಸಹ ತ್ಯಾಗ ಮಾಡುತ್ತಾರೆ. ಆದಾಗ್ಯೂ, ಇವು ಸೈತಾನನ ಪಾತ್ರೆಯ ತಳದಲ್ಲಿರುವ ಉಳಿದ ಅವಶೇಷಗಳು, ಇವು ಮೇಲ್ನೋಟಕ್ಕೆ ಕಾಣಿಸುವುದಿಲ್ಲ. ಲೋಕಸಮೃದ್ಧಿ, ಹೆಮ್ಮೆ, ತನ್ನನ್ನು ತಾನೇ ಹೆಚ್ಚಿಸುವುದು ಮತ್ತು *"ಒಬ್ಬರಿಂದೊಬ್ಬರು ಮಾನವನ್ನು"* ಪಡೆಯುವದು ಎಂಬ ಭರವಸೆಗಳಿಂದ ಅದರ ಮೇಲ್ಮೈ ಹೊಳೆಯುತ್ತದೆ; ಈ ಭರವಸೆಗಳನ್ನು ಪಡೆಯುವದಕ್ಕಾಗಿ ಸಮಯ, **[R1899: ಪುಟ 273]** ಪ್ರತಿಭೆ ಮತ್ತು ಪ್ರಭಾವವನ್ನು ತ್ಯಾಗ ಮಾಡಲಾಗುತ್ತದೆ. ಆದರೆ, ಅದರ ಅಂತ್ಯ ಕಹಿಯೂ ನಿರಾಶಾದಾಯಕವೂ ಆಗಿದೆ.

ಅದು ನಿಜಕ್ಕೂ ಅಮಲೇರಿಸುವ ಪಾತ್ರೆ, ವಂಚನೆ ಮತ್ತು ಭ್ರಮೆಗಳ ಪಾತ್ರೆ, ಇದರ ಭೀಕರ ಶಕ್ತಿ ಅಂತಿಮವಾಗಿ ಶಾಶ್ವತ ಮರಣಕ್ಕೆ ಕಾರಣವಾಗುತ್ತದೆ. *"ಅನ್ಯಜನರು [ನಂಬಿಕೆಯಿಲ್ಲದ ಲೋಕ] ಯಜ್ಞಾರ್ಪಣೆ ಮಾಡುವದು ದೆವ್ವಗಳಿಗೆ, ದೇವರಿಗಲ್ಲ ಮತ್ತು ನೀವು [ನಂಬಿಗಸ್ತರು, ಕ್ರೈಸ್ತರು] ದೆವ್ವಗಳೊಂದಿಗೆ ಅನ್ಯೋನ್ಯವಾಗಿರಬೇಕೆಂದು ನಾನು ಇಷ್ಟಪಡುವದಿಲ್ಲ. ನೀವು ಕರ್ತನ ಪಾತ್ರೆಯಲ್ಲಿಯೂ ದೆವ್ವಗಳ ಪಾತ್ರೆಯಲ್ಲಿಯೂ ಕುಡಿಯಲಾರಿರಿ" (1 ಕೊರಿಂಥದವರಿಗೆ 10:20,21)* ಎಂದು ಅಪೋಸ್ತಲನು ಸರಿಯಾಗಿ ಹೇಳುತ್ತಾನೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ನಾವು ಲೋಕದ ಆತ್ಮದಲ್ಲಿ, ಸ್ವಾರ್ಥ, ಮಹತ್ವಾಕಾಂಕ್ಷೆ, ಹೆಮ್ಮೆಯ ಆತ್ಮದಲ್ಲಿ ಮತ್ತು ಹೀನ ಗುರಿಗಳಿಗಾಗಿ ನಮ್ಮ ಜೀವನವನ್ನು ತ್ಯಾಗ ಮಾಡುವ ಆತ್ಮದಲ್ಲಿ ಪಾಲ್ಗೊಂಡು ಅದೇ ಸಮಯದಲ್ಲಿ, ನಿಸ್ವಾರ್ಥ, ದೀನಭಾವ ಮತ್ತು ಸ್ವಯಂ ನಿರಾಕರಣೆಯುಳ್ಳ ತನ್ನ ಸ್ವಂತ ಅಮೂಲ್ಯ ರಕ್ತದಿಂದ ನಮ್ಮನ್ನು ಕೊಂಡುಕೊಂಡವನ ಸೇವೆಯಲ್ಲಿ ಲೋಕದ ಮಹತ್ವಾಕಾಂಕ್ಷೆಗಳನ್ನು ಬಲಿಯಾಗಿ ತ್ಯಜಿಸುವ ಕ್ರಿಸ್ತನ ಆತ್ಮದಲ್ಲಿಯೂ ಪಾಲ್ಗೊಳ್ಳಲು ಸಾಧ್ಯವಿಲ್ಲ. ನಾವು ಎರಡೂ ಆತ್ಮಗಳಲ್ಲಿ ಪಾಲ್ಗೊಳ್ಳಲು ಸಾಧ್ಯವಿಲ್ಲ; ಏಕೆಂದರೆ ಒಂದು ಮತ್ತೊಂದರ ವಿರುದ್ಧವಾಗಿದ್ದು, ಶತ್ರುತ್ವವೂ ಹೊಂದಿದೆ. *"ನೀವು ದೇವರನ್ನೂ ಧನವನ್ನೂ ಕೂಡ ಸೇವಿಸಲಾರಿರಿ"* **[R1899: ಪುಟ 274]**. ನೀವು ಎರಡರ ಮಧ್ಯೆ ನಿಂತುಕೊಳ್ಳಲಾರಿರಿ. *"ಆ ಮನುಷ್ಯನು ತಾನು ಕರ್ತನಿಂದ ಏನಾದರೂ ಹೊಂದುವೆನೆಂದು ಭಾವಿಸದೆ ಇರಲಿ; ಅವನು ಎರಡು*

*ಮನಸ್ಸುಳ್ಳವನೂ ತನ್ನ ನಡತೆಯಲ್ಲೆಲ್ಲಾ ಚಂಚಲನೂ ಆಗಿದ್ದಾನೆ.” **(ಯಾಕೋಬ 1:7,8)**.*

ಈ ಎಚ್ಚರಿಕೆಯು ಲೋಕಕ್ಕೆ ಅಲ್ಲ, ಬದಲಾಗಿ ಈಗಾಗಲೇ ಕರ್ತನ ಪಾತ್ರೆಯಲ್ಲಿ ಕುಡಿಯಲು ಒಡಂಬಡಿಕೆ ಮಾಡಿರುವವರಿಗೆ ನೀಡಲ್ಪಟ್ಟಿರುವುದರಿಂದ, ಅವರು ಈಗ ದೆವ್ವಗಳ ಪಾತ್ರೆಯಲ್ಲಿ ಪಾಲ್ಗೊಳ್ಳುವುದು ಕರ್ತನ ಪಾತ್ರೆಯಿಂದ ದೂರ ಸರಿಯುವುದನ್ನು ಸೂಚಿಸುತ್ತದೆ. ಮತ್ತು ಯಾರಾದರೂ ಮೂರ್ಖರಾಗಿದ್ದರೆ, ಅವರು ಕರ್ತನ ಪಾತ್ರೆಯಲ್ಲಿಯೂ ದೆವ್ವಗಳ ಪಾತ್ರೆಯಲ್ಲಿಯೂ ಅಂದರೆ, ಕರ್ತನ ಆತ್ಮದಲ್ಲಿಯೂ ಲೋಕದ ಆತ್ಮದಲ್ಲಿಯೂ ದೆವ್ವಗಳಲ್ಲಿಯೂ, ಕರ್ತನ ಭೋದನೆಗಳಲ್ಲಿಯೂ ದೆವ್ವಗಳ ಭೋದನೆಗಳಲ್ಲಿಯೂ ಸ್ವಲ್ಪ ಮಟ್ಟಿಗೆ ಪಾಲುಗಾರರಾಗಲು ತಮ್ಮ ಮನಸ್ಸಿನ ಒಪ್ಪಿಗೆಯನ್ನು ನೀಡಿದರೆ, ಅವನು ಉದ್ದೇಶಪೂರ್ವಕವಾಗಿ ತನ್ನ ಒಡಂಬಡಿಕೆಯನ್ನು ತಿರಸ್ಕರಿಸುತ್ತಾನೆ ಮತ್ತು ಕೃಪೆಯ ಆತ್ಮಕ್ಕೆ ವಿರುದ್ಧವಾಗಿ ವರ್ತಿಸುತ್ತಾನೆ.

*“ಕರ್ತನ ಮೇಜು”* ಏನೆಂದು ಈಗ ಪರಿಗಣಿಸೋಣ. ಅದು ದೈವಿಕ ಸತ್ಯದ ಹೇರಳವಾದ ಪೂರೈಕೆಯಿಂದ ಸಮೃದ್ಧವಾಗಿ ಹರಡಿರುವ ಮೇಜಾಗಿದೆ - ಜೀವದ ರೊಟ್ಟಿ ಮತ್ತು ತಕ್ಕ ಕಾಲದ ಆಹಾರ, ಜೇನುಗೂಡಿನಲ್ಲಿ ಜೇನುತುಪ್ಪ, ಹಾಲು ಮತ್ತು ದ್ರಾಕ್ಷಾರಸದ ಅತ್ಯುತ್ತಮ ಪಾನೀಯಗಳು ಮತ್ತು ಸ್ಫಟಿಕದಂತೆ ಸ್ಪಷ್ಟವಾದ ಜೀವದ ಶುದ್ಧ ನೀರು. ***(ಯೋಹಾನ 6:32-35; ಮತ್ತಾಯ 24:45; ಕೀರ್ತನೆ 19:10; ಯೆಶಾಯ 55:1; ಪ್ರಕಟನೆ 21:6; 22:1.)*** ನೀತಿಗಾಗಿ ಹಸಿದು ಬಾಯಾರಿಕೆಯಿಂದ ಬಳಲುತ್ತಿರುವ ಪ್ರತಿಯೊಬ್ಬರಿಗೂ ಇದು ಹರಡಲ್ಪಟ್ಟಿದೆ ಮತ್ತು ಅದರ ಬಳಿಗೆ ಬರುವವರು ಧನ್ಯರು. ಏಕೆಂದರೆ ಅವರು ತುಂಬಲ್ಪಡುತ್ತಾರೆ. ಅವರು ಸಮೃದ್ಧವಾಗಿ ಉಣ್ಣಲ್ಪಡುತ್ತಾರೆ ಮತ್ತು ಸಮೃದ್ಧವಾಗಿ ತೃಪ್ತರಾಗುತ್ತಾರೆ ಮತ್ತು ಅವರ ಆತ್ಮಗಳು ಕೊಬ್ಬಿನಿಂದ ಆನಂದಿಸುತ್ತವೆ. ***(ಯೆಶಾಯ 55:1,2; ಮತ್ತಾಯ 5:6; ಕೀರ್ತನೆ 22:26.)***

ಈ ಕರ್ತನ ಮೇಜನ್ನು ಸುವಾರ್ತಾ ಯುಗದ ಆರಂಭದಿಂದಲೂ ಆತನ ಪರಿಶುದ್ಧರಿಗೆ, ಆತನ ಸಭೆಗಾಗಿ ಹರಡಿಸಲಾಗಿದೆ ಮತ್ತು ಯಾವಾಗಲೂ ಕಾಲಕ್ಕೆ ತಕ್ಕ ಆಹಾರ ಸಿಗುತ್ತಲೇ ಇದೆ ಮತ್ತು ಕರ್ತನ ಜನರಲ್ಲಿ ಕೆಲವರನ್ನು ಸೇವೆ ಮಾಡಲು ನೇಮಿಸಲಾಗಿದೆ. ಉದಾಹರಣೆಗೆ, ಅಪೋಸ್ತಲರು ಯುಗದ ಆರಂಭದಲ್ಲಿ ಸೇವೆ ಸಲ್ಲಿಸಿದರು. ಅವರು ಆ ಕಾಲದ ಕರ್ತನ ಜನರಿಗೆ ಕಾಲಕ್ಕೆ ತಕ್ಕ ಆಹಾರವನ್ನು ನೀಡಿದಷ್ಟೇ ಅಲ್ಲದೆ, ಮುಂದಿನ ದಿನಗಳಲ್ಲಿ ಸಭೆಗೆ ಉಪಯೋಗವಾಗುವ ಆಹಾರವನ್ನು ಕೂಡ ಸಂಗ್ರಹಿಸಿ ಇಡಲು ಸಹಾಯಮಾಡಿದರು. ***(2 ಪೇತ್ರ 1:15,19)***. ಅವರ ಸೇವೆ ಇಡೀ ಸಭೆಗೆ, ಇಂದಿನವರೆಗೂ ಅಮೂಲ್ಯವಾಗಿದೆ. ಇಡೀ ಯುಗದಲ್ಲಿಯೂ ದೇವಭಕ್ತರಾಗಿ, ಶುದ್ಧ ಮನಸ್ಸಿನ ಪುರುಷರು ಕರ್ತನ ಜನರನ್ನು ಆತನ ಮೇಜಿನ ಬಳಿಗೆ ಕರೆದು, ಅದರ ಸಮೃದ್ಧಿಯಿಂದ ಅವರನ್ನು ಪಾಲಿಸಿಕೊಂಡು ಹೋಗಿದ್ದಾರೆ. ಹಸಿವಾಗಿದ್ದವರು ಆಹಾರಪೂರಿತರಾದರು ಮತ್ತು ಆಶೀರ್ವದಿತರಾದರು.

ಆದರೆ, ಈಗ ಯುಗದ ಅಂತ್ಯವು, ಅಂದರೆ ಸುಗ್ಗಿಯ ಕಾಲ ಬಂದಿದೆ. ಇದು ಎಲ್ಲಾ ಕಾಲಗಳಲ್ಲಿಯೂ ಅತ್ಯಂತ ಶ್ರೀಮಂತ ಕಾಲ. ಪ್ರವಾದನೆಯೂ ವಾಗ್ದಾನಗಳೂ ಮೊಳಕೆಯೊಡೆದು ಬೆಳೆದು, ಈಗ ತಮ್ಮ ಬಂಗಾರದ ಫಲವನ್ನು ಕೊಡುವ ಕಾಲವಾಗಿದೆ. ಕರ್ತನ ಮೇಜು ಅದರ ಸಮೃದ್ಧಿಯಿಂದ ತುಂಬಿ ಬಾಗುತ್ತಿದೆ. ಮತ್ತು ಅಷ್ಟೇ ಅಲ್ಲ, ಸುಗ್ಗಿಯ ಕರ್ತನು ತನ್ನ ವಾಗ್ದಾನದ ಪ್ರಕಾರ ಈಗ ಪ್ರತ್ಯಕ್ಷನಾಗಿ, ಹೊರಬಂದು ತನ್ನ ಜನರಿಗೆ ಸೇವೆ ಸಲ್ಲಿಸುತ್ತಾನೆ. ***(ಲೂಕ 12:37)*** ಇಲ್ಲಿ, ಹಿಂದೆಂದೂ ಇಲ್ಲದ ರೀತಿಯಲ್ಲಿ, ದೇವರ ಉದ್ದೇಶಗಳು ಮತ್ತು ವಾಗ್ದಾನಗಳ ಶ್ರೀಮಂತಿಕೆ ಮತ್ತು ಸಮೃದ್ಧತೆಯು ಅವುಗಳ ಸಂಪೂರ್ಣತೆಯಲ್ಲಿ ವ್ಯಕ್ತವಾಗುತ್ತದೆ. ಸಭೆ ಹಿಂದೆಂದೂ ನೋಡಿರದ ಒಂದು ವ್ಯವಸ್ಥಿತ ದೇವತಾಶಾಸ್ತ್ರ ಇಲ್ಲಿದೆ - ರಕ್ಷಣೆಯ ಯೋಜನೆ ನಮ್ಮ ಮುಂದಿಡಲ್ಪಟ್ಟಿದ್ದು, ಅದರ ಕ್ರಮಬದ್ಧತೆ ಮತ್ತು ಸೌಂದರ್ಯದಲ್ಲಿ ಅದು ನಮ್ಮ ಪ್ರಕಾಶಮಾನವಾದ ನಿರೀಕ್ಷೆಗಳನ್ನೇ ಮೀರಿಸುತ್ತದೆ. ಇದು ಪ್ರತಿಯೊಂದು ಭಾಗದಲ್ಲಿಯೂ ಸ್ಥಿರವಾಗಿಯೂ ಸಾಮರಸ್ಯದಿಂದಲೂ ಇರುವ ಯೋಜನೆಯಾಗಿದ್ದು,

ಹಿಂದಿನ ಎಲ್ಲಾ ಯುಗಗಳಲ್ಲಿ ಮೌನವಾಗಿಯೂ ಭವ್ಯವಾಗಿಯೂ, ಅತ್ಯಂತ ಆಳವಾದ ನೈತಿಕ ತತ್ತ್ವಗಳ ಆಧಾರದ ಮೇಲೆ ರೂಪಿತವಾಗಿದೆ. ಇದರ ಸಮಯ ಮತ್ತು ಕ್ರಮದ ನಿಖರತೆ ಮಹಾನ್ ವಿನ್ಯಾಸಕ, ಕಾರ್ಯನಿರ್ವಾಹಕ ಮತ್ತು ಪ್ರಕಟಿಸುವವರ ಗಣಿತೀಯ ನಿಖರತೆಯನ್ನು ಸೂಚಿಸುತ್ತದೆ. ಅದರ ಸಂಪೂರ್ಣತೆಯಲ್ಲಿಯೂ, ಸಮ್ಮಿತಿಯಲ್ಲಿಯೂ ಮತ್ತು ಸೌಂದರ್ಯದಲ್ಲಿಯೂ ಅದು ಎಷ್ಟು ಅದ್ಭುತವಾಗಿದೆಯೆಂದರೆ, ತೃಪ್ತಿಗೊಂಡ ಆತ್ಮವು ಇದಕ್ಕೆ ಯಾವುದನ್ನಾದರೂ ಸೇರಿಸಿದರೆ ಅದರ ಶ್ರೇಷ್ಠತೆಯೇ ಹಾಳಾಗುತ್ತದೆ ಎಂದು ಗ್ರಹಿಸುತ್ತದೆ ಮತ್ತು ಸಂತೋಷದಿಂದ ಉದ್ಗರಿಸುತ್ತದೆ: *"ಇದು ಕರ್ತನ ಕೆಲಸವೂ ಕರ್ತನ ಪ್ರಕಟನೆಯೂ ಆಗಿದೆ, ಮತ್ತು ಅದು ನಮ್ಮ ದೃಷ್ಟಿಯಲ್ಲಿ ಅದ್ಭುತವಾಗಿದೆ;"* ಹಾಗೆಯೇ ಆತನ ಜ್ಞಾನ, ಪ್ರೀತಿ ಮತ್ತು ಕೃಪೆಯ ವಿಷಯದಲ್ಲಿ, *"ಆತನು ಈಗಾಗಲೇ ನಮಗೆ ಹೇಳಿರುವದಕ್ಕಿಂತ ಇನ್ನೇನು ಹೆಚ್ಚಾಗಿ ಹೇಳಬಲ್ಲನು?"* ಎಂದು ಹೇಳುತ್ತದೆ. ಕರ್ತನು ಮಾನವ ಸಂಸ್ಥೆಯನ್ನು ಬಳಸಿಕೊಂಡು ದೇವರ ಪುತ್ರರು ಮತ್ತು ಸಹಬಾಧ್ಯಸ್ಥರಾಗಿ ತನ್ನ ಕೃಪೆ ಮತ್ತು ಅವನ ಪ್ರೀತಿಯ ದಯೆಯ ಸಂಪತ್ತನ್ನು ಚಿತ್ರಿಸಲು ಮತ್ತು ಘೋಷಿಸಲು ಬಳಸಿದ್ದರು ಮತ್ತು ಮೇಜಿನ ಬಳಿ ಇರುವ ಎಲ್ಲರೂ ಹಬ್ಬದಲ್ಲಿ ಪರಸ್ಪರ ಸೇವೆ ಸಲ್ಲಿಸುವಲ್ಲಿ ತನ್ನೊಂದಿಗೆ ಸಹೋದ್ಯೋಗಿಗಳಾಗಿರಲು ಅವನು ಅನುಮತಿಸಿದ್ದರು, ಯೋಜನೆ ಮತ್ತು ಕಾರ್ಯಗತಗೊಳಿಸುವಿಕೆಯ ಎಲ್ಲಾ ಮಹಿಮೆ ದೇವರಿಗೆ ಸೇರಿದೆ. ಈ ಪ್ರಕಟನೆಯ ಸೇವೆಯನ್ನು ಸ್ವೀಕರಿಸಲು ನಮ್ಮ ಹೃದಯಗಳನ್ನು ಅಭಿಷೇಕಿಸಿದವನೂ, ಅದನ್ನು ನೋಡಲು ನಮ್ಮ ಕಣ್ಣುಗಳನ್ನು, ಅದನ್ನು ಕೇಳಲು ನಮ್ಮ ಕಿವಿಗಳನ್ನು, ಹಾಗೂ ಅದನ್ನು ಸಾರಲು ನಮ್ಮ ನಾಲಿಗೆಯನ್ನು ಅಭಿಷೇಕಗೊಳಿಸಿದವನೂ ಆದ ನಮ್ಮ ಕರ್ತನಿಗೂ ಮುಖ್ಯಸ್ಥನಿಗೂ ಸ್ತೋತ್ರ ಸಲ್ಲುತ್ತದೆ. ಮಹೋನ್ನತದಲ್ಲಿರುವ ದೇವರಿಗೆ ಮತ್ತು ಕುರಿಮರಿಗೆ ಎಂದೆಂದಿಗೂ ಮಹಿಮೆ! ಇಡೀ ಭೂಮಿಯು ಆತನ ಮಹಿಮೆಯಿಂದ ತುಂಬಿರಲಿ!.

ಹೀಗೆ ನೀತಿಗಾಗಿ ಮತ್ತು ದೇವರ ಜ್ಞಾನಕ್ಕಾಗಿ ಹಸಿದು ಬಾಯಾರಿರುವ ಎಲ್ಲರಿಗೂ ತೃಪ್ತಿಕರವಾದ ಭಾಗವು ಕರ್ತನ ಮೇಜನ್ನು ಹೇರಳವಾಗಿ ಹರಡುತ್ತದೆ, ದೇವರನ್ನು ತಿಳಿದುಕೊಳ್ಳುವುದು ಜೀವನವೂ ಶಾಂತಿಯೂ ಆಗಿದೆ. ಆದರೆ ದೇವರ ಜನರು ಆಹ್ವಾನಿಸಲ್ಪಡುವ ಇನ್ನೂ ಅನೇಕ ಮೇಜುಗಳಿವೆ. ಪಾಪಸಿಯು (ಪೋಪ್ ಅಧಿಕಾರ) ತನ್ನ ಮೇಜಿನ ಮೇಲೆ ಕೆಲವು ಸತ್ಯದ ತುಣುಕುಗಳೊಂದಿಗೆ ಬಲಿ ಪೂಜೆ(mass), ಶಾಶ್ವತವಾದ ಹಿಂಸೆ, ಶುದ್ದೀಕರಣದ ಸ್ಥಳ(purgatory), ಮರಿಯಾಳ ವಿಗ್ರಹಾರಾಧನೆ, ಭಾವಿಸಲಾದ ಸಂತರ ಆರಾಧನೆ, ಪಾಪಗಳನ್ನು ಕಿವಿಯಲ್ಲಿ ಒಪ್ಪಿಕೊಳ್ಳುವ ಪದ್ಧತಿ ಮತ್ತು ಕುತಂತ್ರಗಳನ್ನು ರೂಪಿಸುವ ಯಾಜಕರಿಗೆ ಬುದ್ಧಿಹೀನವಾಗಿ ವಿಧೇಯರಾಗುವಂತೆ ಮಾಡುವ ಅನೇಕ ಬೋಧನೆಗಳು ಅವರ ಮೇಜಿನಲ್ಲಿ ಹೇರಳವಾಗಿ ಕಂಡುಬರುತ್ತವೆ. ಪ್ರೊಟೆಸ್ಟಂಟ್‌ಗಳು ಸಹ ತಮ್ಮ ಹಲವಾರು ಮೇಜುಗಳನ್ನು ಹೊಂದಿದ್ದಾರೆ, ಅವುಗಳ ಮೇಲೆ ಕ್ರಿಸ್ತನ ಅಮೂಲ್ಯ ರಕ್ತದ ಮೂಲಕ ವಿಮೋಚನೆ, ದೀಕ್ಷಾಸ್ನಾನ, ದೇವರಲ್ಲಿ ಮತ್ತು ಆತನ ಪ್ರೇರಿತ ವಾಕ್ಯದಲ್ಲಿ ನಂಬಿಕೆಗಳಂತಹ ಇತ್ಯಾದಿ ಕೆಲವು ಸತ್ಯವನ್ನು ಕಾಣಬಹುದು. ಆದರೆ ಅಯ್ಯೋ! ಅವರ ಬಳಿ ಇರುವ ಸತ್ಯದ ತುಣುಕುಗಳೆಲ್ಲವೂ ಕಲುಷಿತವಾಗಿವೆ. ಏಕೆಂದರೆ, ಪ್ರವಾದಿಯಾದ ಯೆಶಾಯನು ***(ಯೆಶಾಯ 28:8)*** ನಿಜವಾಗಿ ಹೇಳುವಂತೆ, *"ಅವರ ಮೇಜುಗಳ ಮೇಲೆಲ್ಲಾ ವಾಂತಿಯೂ ಎಂಜಲೂ ತುಂಬಿವೆ, ಶುದ್ಧಸ್ಥಳವೇ ಇಲ್ಲ."* ಅವು ತಿರಸ್ಕರಿಸಿದ ವಸ್ತುಗಳಿಂದ ತುಂಬಿವೆ. ಅಂದರೆ, ಹಿಂದಿನ ಕಾಲದಲ್ಲಿ ಇದ್ದ ತಪ್ಪು ಬೋಧನೆಗಳನ್ನು ಅಜಾಗರೂಕ ನಿರ್ಲಕ್ಷ್ಯದಿಂದ ಸ್ವೀಕರಿಸಲಾಯಿತು. ಆದರೆ, ಈ ನ್ಯಾಯತೀರ್ಪಿನ ಕಾಲದ ಕದಲಿಕೆಗಳು ***(ಇಬ್ರಿಯರಿಗೆ 12:26,27)*** ಜನರನ್ನು ಅಸ್ವಸ್ಥಗೊಳಿಸುತ್ತಿವೆ, ಆದ್ದರಿಂದ ಅವರು ಶಾಶ್ವತ ಹಿಂಸೆ, ಬಹುಪಾಲು ಮಾನವಕುಲ ಹುಟ್ಟುವ ಮುಂಚಿತವಾಗಿ ಅವರು ಶಾಶ್ವತ ಕೇಡಿಗೆ ನೇಮಿಸಲ್ಪಟ್ಟಿದ್ದಾರೆ ಎಂಬ ಮುಂತಾದವುಗಳ ಭಯಾನಕ ಬೋಧನೆಗಳನ್ನು ಉಳಿಸಿಕೊಳ್ಳಲು ಸಾಧ್ಯವಿಲ್ಲ. ಆದರೂ, ಅವುಗಳನ್ನು ಬಹಿರಂಗವಾಗಿ

ನಿರಾಕರಿಸುವ ಮತ್ತು ತ್ಯಜಿಸುವ ನೈತಿಕ ಧೈರ್ಯದ ಕೊರತೆಯಿಂದಾಗಿ, ಅವರ ಮೇಜುಗಳು ಅಸಹ್ಯಕರವಾದ, ತಿರಸ್ಕರಿಸಿದ ವಸ್ತುಗಳಿಂದ ಕಲುಷಿತಗೊಂಡಿವೆ ಮತ್ತು ಅವರ ಮೇಜುಗಳೆಲ್ಲವೂ ಅಶುದ್ಧವಾಗಿವೆ.

ಈ ಪ್ರಸ್ತುತ ಕಾಲದ *"ಕದಲಿಕೆಗಳು"* ಆ ಮೇಜುಗಳನ್ನು ಕಲುಷಿತಗೊಳಿಸಿದ ವಾಂತಿಯ ತಾಳುವಂತಾದ ಸ್ಥಿತಿಯನ್ನು ಉಂಟುಮಾಡುವ ಮೊದಲು, ಕರ್ತನ ಅನೇಕ ಪ್ರಿಯ ಜನರಿಗೆ ಅಲ್ಲಿ ಕುಳಿತು ಉತ್ತಮ ಆಹಾರವನ್ನು ಆರಿಸಿಕೊಳ್ಳಲು ಹಾಗೂ ದೇವರ ವಾಕ್ಯದ ಬುಗ್ಗೆಯಿಂದ ಜೀವಜಲದ ದೊಡ್ಡ ಹನಿಗಳೊಂದಿಗೆ ದೋಷಗಳ ವಿಷವನ್ನು ನಿವಾರಿಸಲು ಅನುಮತಿಸಲಾಯಿತು. ಆದರೆ ಈಗ, ಸುಗ್ಗಿಯ ಕಾಲವು ಬಂದಿದೆ ಮತ್ತು ಬೇರ್ಪಡಿಸುವ ಕೆಲಸವು ಬಾಕಿ ಇರುವುದರಿಂದ *(ಮತ್ತಾಯ 13:30)*, ದೇವರ ಎಲ್ಲಾ ನಿಜವಾದ ಜನರನ್ನು ಆ ಮೇಜುಗಳಿಂದ ಕರ್ತನು ಈಗ ಸೇವೆ ಸಲ್ಲಿಸುತ್ತಿರುವ ಸಮೃದ್ಧ ಸುಗ್ಗಿಯ ಮೇಜಿಗೆ ಕರೆಯಲಾಗಿದೆ. ಕರ್ತನ ಧ್ವನಿಗೆ ವಿಧೇಯರಾಗುವುದರಿಂದ ಮತ್ತು ಅಶುದ್ಧವಾದ ಮೇಜುಗಳನ್ನು ತ್ಯಜಿಸುವುದರಿಂದ **[R1899 : ಪುಟ 275]** ಅನೇಕ ಶತ್ರುಗಳು ಉಂಟಾಗುತ್ತಾರೆ, ಆದರೆ ನಂಬಿಕೆಯ ಮೂಲಕ ಆಲಿಸುವವರು ಮತ್ತು ಕರ್ತನ ಮೇಜಿಗೆ ಕರೆಯನ್ನು ಪಾಲಿಸುವವರು ಧನ್ಯರು. ಕೀರ್ತನೆಗಾರನು ಇದನ್ನು ಹಾಡುತ್ತಾ, *"ನನ್ನ ವೈರಿಗಳ ಎದುರಿನಲ್ಲಿ ನನ್ನ ಮುಂದೆ ಮೇಜನ್ನು ಸಿದ್ಧಮಾಡುತ್ತೀ; ನೀನು ನನ್ನ ತಲೆಯನ್ನು ಎಣ್ಣೆಯಿಂದ ಅಭಿಷೇಕಿಸುತ್ತೀ; ನನ್ನ ಪಾತ್ರೆಯು[ಆಶೀರ್ವಾದದ ಪಾತ್ರೆ] ತುಂಬಿ ಹೊರಸೂಸುತ್ತದೆ."* *(ಕೀರ್ತನೆಗಳು 23:5)* ಎಂದು ಹೇಳಿದನು.

ಆದರೆ, ಬ್ಯಾಬಿಲೋನಿನ ಅಶುದ್ಧ ಮೇಜುಗಳಲ್ಲದೆ ಇತರ ಮೇಜುಗಳೂ ಇವೆ. ದೆವ್ವಗಳ ಮೇಜುಗಳೂ ಇವೆ; ಅವು ಎಲ್ಲಾ ವಿಧದ ಸೂಕ್ಷ್ಮವೂ ಕುತಂತ್ರವೂ ಆದ ದುಷ್ಟ ಬೋಧನೆಗಳಿಂದ ತುಂಬಿವೆ. ಇವು *"ನಾಶಕರವಾದ ಮತಭೇದಗಳನ್ನು ಕಳ್ಳತನದಿಂದ ಹುಟ್ಟಿಸುವವರೂ ತಮ್ಮನ್ನು ಕೊಂಡುಕೊಂಡ ಒಡೆಯನನ್ನು ಕೂಡ ತಾವು ಅರಿಯೆವು"* *(2 ಪೇತ್ರನು 2:1)* ಎಂಬ ವಾಕ್ಯಕ್ಕೆ ಅನುಸಾರವಾಗಿ, ಸತ್ಯವಾಕ್ಯಗಳನ್ನು ತಿರುಗಿಸಿ ಬಳಸುತ್ತವೆ, ಅವುಗಳನ್ನು ಅಶುದ್ಧಗೊಳಿಸುತ್ತವೆ, ಅವರ ಸತ್ಯ ಬೋಧನೆಗಳನ್ನು ದುರ್ಬಲಗೊಳಿಸುತ್ತವೆ ಮತ್ತು ಮಾನವ ತತ್ತ್ವಶಾಸ್ತ್ರಗಳನ್ನು ಬದಲಿಸುತ್ತವೆ. ಇವುಗಳಲ್ಲಿ ಪಾಪಸಿ (ಪೋಪ್ ಅಧಿಕಾರ) ಎಂಬುದೂ ಸೇರಿದೆ—ಅದು *"ಸೈತಾನನ ಕುತಂತ್ರದ ಶ್ರೇಷ್ಠಕೃತಿ"* ಎಂದು ಕರೆಯಲ್ಪಡುವದು; ಜೊತೆಗೆ ಥಿಯೊಸೊಫಿ (Theosophy), ಆತ್ಮವಾದ (Spiritism), ಕ್ರಿಶ್ಚಿಯನ್ ವಿಜ್ಞಾನ (ತಪ್ಪಾಗಿ ಕರೆಯಲ್ಪಡುವ), ವಿಕಸನವಾದ (Evolution), ಮತ್ತು ನಮ್ಮ ಕರ್ತನ ಪ್ರತಿನಿಧಿ ತ್ಯಾಗದ(vicarious sacrifice) ಮೂಲಕ ದೊರೆಯುವ ವಿಮೋಚನೆಯ ಬೋಧನೆಯನ್ನು ನಿರ್ಲಕ್ಷಿಸುತ್ತವೆ; ಮತ್ತು ಬೇರೆ ಮಾರ್ಗಗಳ ಮೂಲಕ ಶಾಶ್ವತ ಜೀವನಕ್ಕೆ ಏರಿ ಹೋಗುವುದು ಹೇಗೆ ಎಂಬುದನ್ನು ಜನರಿಗೆ ಬೋಧಿಸುವ ಗುರಿಯನ್ನು ಹೊಂದಿರುವ ಮಾನವ ತತ್ತ್ವಶಾಸ್ತ್ರಗಳ ಎಲ್ಲಾ ವಿವಿಧ ಹಂತಗಳು ಸೇರಿವೆ. ಇವೆಲ್ಲವೂ ದೆವ್ವಗಳ ಮೇಜುಗಳಾಗಿವೆ, ಇವುಗಳ ಕುರಿತು ಅಪೋಸ್ತಲನು ನಮಗೆ ಎಚ್ಚರಿಕೆ ನೀಡುತ್ತಾನೆ: *"ನೀವು ಕರ್ತನ ಮೇಜಿನಲ್ಲಿಯೂ ದೆವ್ವಗಳ ಮೇಜಿನಲ್ಲಿಯೂ ಪಾಲುಗಾರರಾಗಲಾರಿರಿ."* *( 1 ಕೊರಿಂಥದವರಿಗೆ 10:21)*

ಕೆಲವರು, ಅಯ್ಯೋ! ಕರ್ತನ ಮೇಜಿನ ಆಹ್ವಾನವನ್ನು ಸ್ವೀಕರಿಸಿ, ಕರ್ತನು ಒಳ್ಳೆಯವನು ಎಂಬುದನ್ನು ರುಚಿಸಿ ನೋಡಿದ ನಂತರವೂ, ಕರ್ತನ ಮೇಜಿನಿಂದ ದೂರ ಸರಿದು ದೆವ್ವಗಳ ಮೇಜಿನ ಕಡೆಗೆ ಹೋಗುತ್ತಾರೆ. ಅವರು ತಾವು ಇಚ್ಛೆಸಿದಾಗ ಮತ್ತೆ ತಿರುಗಿ ಬಂದು, ಕರ್ತನ ಮೇಜಿನಲ್ಲಿ ಪುನಃ ಪಾಲುಗೊಳ್ಳಬಹುದು ಎಂಬ ಭ್ರಮೆಯಲ್ಲಿ ಇರುತ್ತಾರೆ; ಹೀಗೆ, ಬಂದು ಹೋಗುತ್ತಾ, ತಮ್ಮ ಇಚ್ಛೆಯಂತೆ ಎರಡೂ ಮೇಜುಗಳಲ್ಲಿ ಪಾಲುಗೊಳ್ಳಬಹುದು ಎಂದು ಭಾವಿಸುತ್ತಾರೆ. *"ಓಹ್ ಹೌದು,"* ಎಂದು ಅವರು ಹೇಳುತ್ತಾರೆ, *"ನಾವು ಕಿರಿದಾದ ಮನಸ್ಸಿನವರಲ್ಲ, ದುರ್ಬಲರೂ ಅಲ್ಲ; ಒಂದೇ ಮೇಜಿನ ಮೇಲಿರುವುದನ್ನಷ್ಟೇ ರುಚಿಸಬೇಕು, ಇತರ*

*ಮೇಜುಗಳನ್ನು ರುಚಿಸಬಾರದೆಂದು ಭಯಪಡುವವರೂ ಅಲ್ಲ. ನಿಜ, ಕರ್ತನ ಮೇಜು ತುಂಬಾ ಒಳ್ಳೆಯದು; ಆದರೆ ಇತರ ಮೇಜುಗಳ ಮೇಲೂ ಒಳ್ಳೆಯವುಗಳಿವೆ ಮತ್ತು ನಾವು ಎಲ್ಲವನ್ನೂ ರುಚಿ ನೋಡುತ್ತೇವೆ; ಹೌದು, ನಾವು 'ಎಲ್ಲವನ್ನು ಪರಿಶೋಧಿಸಿ ಒಳ್ಳೇದನ್ನೇ ಭದ್ರವಾಗಿ ಹಿಡಿದು'ಕೊಳ್ಳುತ್ತೇವೆ, ನಾವು ಅದನ್ನು ಎಲ್ಲಿ ಕಂಡುಕೊಂಡರೂ ಪರವಾಗಿಲ್ಲ."*

*"ನಾಶನಕ್ಕೆ ಮುಂದಾಗಿ ಗರ್ವ ಹೋಗುತ್ತದೆ; ಬೀಳುವಿಕೆಯ ಮುಂಚೆ ಜಂಬದ ಮನಸ್ಸು."* ಎಂಬ ಸತ್ಯವನ್ನು ಮರೆತುಬಿಡುವ ಅನೇಕರ ಮನೋಭಾವ ಹೀಗೆಯೇ ಇರುತ್ತದೆ. ನಂಬಿಗಸ್ತ ಸಹೋದರರ ಪ್ರಯತ್ನಗಳು ಅವರ ಮಾರ್ಗದ ತಪ್ಪನ್ನು ಅವರಿಗೆ ಮನವರಿಕೆ ಮಾಡಿಸಲು ವಿಫಲವಾದಾಗ, ಕರ್ತನ ಮೇಜಿನಲ್ಲಿ ಒದಗಿಸಲ್ಪಡುವ ಆಹಾರದ ಮೇಲೆ ಅವರು ಅಸಹ್ಯತೆಯನ್ನು ತೋರಿಸಲು ಪ್ರಾರಂಭಿಸುತ್ತಾರೆ; ಮತ್ತು ಶೀಘ್ರದಲ್ಲೇ ಅವರು ಆ ಮೇಜನ್ನೇ ಸಂಪೂರ್ಣವಾಗಿ ತ್ಯಜಿಸುವರು ಎಂಬುದು ಇನ್ನೂ ಹೆಚ್ಚು ಸ್ಪಷ್ಟವಾಗುತ್ತದೆ. ಸೈತಾನನ ಮೇಜಿನ ಮೇಲಿರುವ ಅನಾರೋಗ್ಯಕರ ಮತ್ತು ವಿಷಕಾರಿಯಾದ ಆಹಾರಗಳು ಶೀಘ್ರದಲ್ಲೇ ರುಚಿಯನ್ನು ಹಾಳುಮಾಡುತ್ತವೆ; ಆತ್ಮೀಯ ಆರೋಗ್ಯವನ್ನು ದುರ್ಬಲಗೊಳಿಸುತ್ತವೆ; ಮತ್ತು ಒಳ್ಳೆಯದಲ್ಲದ ವಿಷಯಗಳ ಕಡೆಗೆ ಅಸಹಜವಾದ ಹಂಬಲಗಳನ್ನು ಹುಟ್ಟಿಸುತ್ತವೆ. ಹೀಗಾಗಿ ಆತ್ಮೀಯವಾಗಿ ಅಸ್ವಸ್ಥಗೊಂಡ ಆತ್ಮಕ್ಕೆ ಇನ್ನು ಮುಂದೆ ಕರ್ತನ ಮೇಜಿನಲ್ಲಿ ಭೋಜನ ಮಾಡುವ ಮನೋಭಾವವೇ ಉಳಿಯುವುದಿಲ್ಲ. ಕರ್ತನು ಸಹ ಅವನು ಹಾಗೆ ಮಾಡಬೇಕೆಂದು ಬಯಸುವುದಿಲ್ಲ; ಯಾಕಂದರೆ ಅವನು ಕರ್ತನ ಮೇಜನ್ನು ಬಿಟ್ಟುಹೋದದರಿಂದ ದಯೆಯ ಆತ್ಮಕ್ಕೆ ಅವಮಾನಿಸಿದ್ದಾನೆ ಮತ್ತು ಅವನು ಹಾಗೆ ಮುಂದುವರಿದರೆ, ಸಂಪೂರ್ಣವಾಗಿ ಹೊರಟು ಹೋಗಬೇಕು; ಯಾಕಂದರೆ *"ನೀವು ಕರ್ತನ ಮೇಜಿನಲ್ಲಿಯೂ ದೆವ್ವಗಳ ಮೇಜಿನಲ್ಲಿಯೂ ಪಾಲುಗಾರರಾಗಲಾರಿರಿ." "ಯಾವ ಮನುಷ್ಯನೂ ಇಬ್ಬರು ಯಜಮಾನರಿಗೆ ಸೇವೆ ಮಾಡಲಾರನು."*

ಕರ್ತನ ಮೇಜಿನಿಂದ ದೆವ್ವಗಳ ಮೇಜಿನ ಬಳಿಗೆ ಹೋಗುವವನು, ದೈವಿಕ ಪರಿಪಾಲನೆಯ ಸಮೃದ್ಧಿಯಿಂದ ತಾನು ತೃಪ್ತನಾಗಿಲ್ಲವೆಂದು ವಾಸ್ತವವಾಗಿ ಘೋಷಿಸುತ್ತಾನೆ; ಮತ್ತು ದೇವರ ಮಹಾ ಶತ್ರುವಾದ ಸೈತಾನನ ಕುರಿತು ಅವನಿಗೆ ಇನ್ನೂ ಸ್ವಲ್ಪ ಗೌರವವಿದೆ ಎಂಬುದನ್ನು ತೋರಿಸಿಕೊಳ್ಳುತ್ತಾನೆ.**[R1900: ಪುಟ 275]** ಈ ರೀತಿಯಾಗಿ ಅವನು ಅನೀತಿಯೊಂದಿಗಿನ ಸಹವಾಸದಿಂದ ದೇವರ ಮೇಲೆ ತನ್ನ ನಿಷ್ಠೆಯಿಲ್ಲದ ಮನೋಭಾವವನ್ನು ಸಾಬೀತುಪಡಿಸುತ್ತಾನೆ. ಆದರೆ, *"ಎಲ್ಲವನ್ನೂ ಪರಿಶೋಧಿಸಿ ಒಳ್ಳೇದನ್ನೇ ಭದ್ರವಾಗಿ ಹಿಡಿದುಕೊಳ್ಳಿರಿ"* ಎಂಬ ವಾಕ್ಯವನ್ನು ಉಲ್ಲೇಖಿಸುವಾಗ, ಅದರ ಜೊತೆಗೆ ಬಂದಿರುವ *"ಸಕಲವಿಧವಾದ ಕೆಟ್ಟತನಕ್ಕೆ ದೂರವಾಗಿರಿ"* ಎಂಬ ಮಾರ್ಪಾಡನ್ನು ಅವನು ಮರೆತುಬಿಡುತ್ತಾನೆ.*(1 ಥೆಸಲೋನಿಕದವರಿಗೆ 5:19-22.)* ನಮಗೆ ಮಾಡುವುದಕ್ಕೆ ಬಹಳ ಕೆಲಸವಿದೆ; ಮತ್ತು ನಾವು ಅದನ್ನು ಚೆನ್ನಾಗಿ ಮಾಡುವುದಾದರೆ, ಕರ್ತನ ಮೇಜಿನ ಮೇಲಿರುವ ಆಹಾರದ ಹೇರಳವಾದ ಅರ್ಹತೆಗಳನ್ನು(abundant merits) ಪರೀಕ್ಷಿಸುವುದಲ್ಲಿಯೂ, ಅದನ್ನು ನಮ್ಮ ಆತ್ಮಿಕ ಜೀವನಕ್ಕೂ ಆರೋಗ್ಯಕ್ಕೂ ಸ್ವಾಧೀನಪಡಿಸುಕೊಳ್ಳುವಲ್ಲಿಯೂ, ಹಾಗೆಯೇ ಅದನ್ನೇ ಇತರರಿಗೆ ಬಡಿಸುವಲ್ಲಿಯೂ ಸಂಪೂರ್ಣವಾಗಿ ನಿರತರಾಗಿರಬೇಕು. ನಾವು ಕರ್ತನು ಒಳ್ಳೆಯವನು ಎಂಬುದನ್ನು ರುಚಿಸಿ ನೋಡುತ್ತೇವೆ ಮತ್ತು ಆತನ ಬೋಧನೆಗಳು ಆರೋಗ್ಯಕರವೆಂಬುದನ್ನು ಅನುಭವದಿಂದ ಸಾಬೀತುಪಡಿಸುತ್ತೇವೆ. ಆದರೆ ದೆವ್ವಗಳ ಬೋಧನೆಗಳೊಂದಿಗೆ ನಮಗೆ ಯಾವುದೇ ಸಂಬಂಧವಿಲ್ಲ; ಅವುಗಳಿಂದ ದೂರವಿರುವುದು ಮತ್ತು ಅವುಗಳೊಂದಿಗೆ ಕೈ ಹಾಕಿದವರಲ್ಲಿ ಕಾಣಿಸಿಕೊಂಡ ದುಷ್ಪರಿಣಾಮಗಳನ್ನು ಉದಾಹರಣೆಯಾಗಿ ತೋರಿಸಿ, ಇತರರನ್ನು ಎಚ್ಚರಿಸುವುದೂ ನಮ್ಮ ಕರ್ತವ್ಯವಾಗಿದೆ.

ದೇವರ ಮಕ್ಕಳಾಗಿರುವಂತವರು, ವಿಶೇಷವಾಗಿ ಕರ್ತನ ಮೇಜಿನಲ್ಲಿ ಆಹಾರವನ್ನು ಸ್ವೀಕರಿಸಿದ ನಂತರ,

ದೈವ್ವದ ಮೇಜು ಮತ್ತು ಕರ್ತನ ಮೇಜುಗಳ ನಡುವಿನ ವ್ಯತ್ಯಾಸವನ್ನು ಒಂದೇ ನೋಟದಲ್ಲೇ ಗುರುತಿಸಲು ಶಕ್ತರಾಗಿರಬೇಕು. ಯಾವುದೇ ವ್ಯವಸ್ಥೆಯ ಅಸ್ತಿವಾರವನ್ನು ಸುಲಭವಾಗಿ ಕಂಡುಹಿಡಿಯಬಹುದು; ಆದರೆ ನಿಜವಾದ ಅಸ್ತಿವಾರ ಒಂದೇ ಇದೆ - ಅದು ಕ್ರಿಸ್ತನ ಈಡುಬಲಿ. *"ಆ ಅಸ್ತಿವಾರವನ್ನಲ್ಲದೆ ಮತ್ತೊಂದು ಅಸ್ತಿವಾರವನ್ನು ಯಾರೂ ಹಾಕಲಾರರಷ್ಟೆ." (1 ಕೊರಿಂಥ. 3:11; 15:3.)* ಮತ್ತು ಯಾರ ಆತ್ಮವು ಸತ್ಯದಿಂದ ತೃಪ್ತವಾಗಿದೆಯೋ ಅವರು ಸುಳ್ಳು ಬೋಧನೆಯನ್ನು ತಕ್ಷಣವೇ ಗ್ರಹಿಸಬೇಕು. ಧ್ವನಿಯ ಸುಂದರವಾದ ಸಾಮರಸ್ಯಗಳಿಗೆ ತರಬೇತಿ ಪಡೆದ ಸಂಗೀತಗಾರನ ಕಿವಿಯು ತಪ್ಪಾದ ಸ್ವರವನ್ನು ತಕ್ಷಣ ಕಂಡುಹಿಡಿಯುವಂತೆ; ಅಥವಾ ರೂಪ, ಬಣ್ಣ ಮತ್ತು ಕ್ರಮದ ಸೂಕ್ಷ್ಮ ಭೇದಗಳಿಗೆ ತರಬೇತಿ ಪಡೆದ ಕಲಾವಿದನ ಕಣ್ಣು, ಹವ್ಯಾಸಿಯ ದೋಷಪೂರ್ಣ ಕೆಲಸವನ್ನು ತಕ್ಷಣ ಗುರುತಿಸುವಂತೆ; ಹಾಗೆಯೇ ದೈವಿಕ ಯೋಜನೆಯ ಸುಂದರ ಸಾಮರಸ್ಯಗಳು, ಪರಿಪೂರ್ಣತೆ, ಕಲಾತ್ಮಕ ಕ್ರಮ ಮತ್ತು ವ್ಯವಸ್ಥೆಯಲ್ಲಿ ಶಿಕ್ಷಣ ಪಡೆದ ಮನಸ್ಸು ಮತ್ತು ಹೃದಯವು ತಪ್ಪಿನ ಆಲೋಚನೆಗಳನ್ನು ತಕ್ಷಣವೇ ಗುರುತಿಸುತ್ತದೆ. ಇಂಥವರಿಗೆ ಬೇರೆ ಯಾವುದೇ ತೃಪ್ತಿಯೂ ಅಗತ್ಯವಿಲ್ಲ; ಇದಕ್ಕಿಂತ ಉನ್ನತವಾದ ಆನಂದವನ್ನೂ ಅವರು ಕಂಡುಕೊಳ್ಳಲಾರರು. ಮತ್ತು ಈ ರೀತಿಯಾಗಿ *"ದೇವರ ಸರ್ವಾಯುಧ"ವನ್ನು* ಧರಿಸಿರುವ ಆತ್ಮವು, ಸೂಕ್ಷ್ಮ ಅಥವಾ ಬಹಿರಂಗ ನಾಚಿಕೆಗೆಟ್ಟ ದಾಳಿಗಳು ಮತ್ತು ಸುಳ್ಳು ಬೋಧನೆಗಳ ದಾಳಿಗಳನ್ನು ಎದುರಿಸಲು ಬೇರೆ ಯಾವುದೇ ಸಿದ್ಧತೆಯ ಅಗತ್ಯವಿಲ್ಲ. *"ಸೈತಾನನ ತಂತ್ರೋಪಾಯಗಳನ್ನು ನೀವು ಎದುರಿಸಿ ನಿಲ್ಲುವದಕ್ಕೆ ಶಕ್ತರಾಗುವಂತೆ ದೇವರು ದಯಪಾಲಿಸುವ ಸರ್ವಾಯುಧಗಳನ್ನು ಧರಿಸಿಕೊಳ್ಳಿರಿ."* ಈ ದುಷ್ಟ ದಿನಗಳಲ್ಲಿ ಉಂಟಾಗುವ ಎಲ್ಲಾ ಪಿಡುಗುಗಳಿಗೆ ವಿರುದ್ಧವಾಗಿ ಸಾಕ್ಷಿಯಾಗುವ ಆತ್ಮೀಕ ಆರೋಗ್ಯ ಮತ್ತು ಶಕ್ತಿಯನ್ನು ಹೊಂದಲು ಇಚ್ಛಿಸುತ್ತಿದ್ದರೆ, ಕರ್ತನಲ್ಲಿ ವಿಶ್ರಾಂತಿ ಪಡೆದು ತೃಪ್ತರಾಗಿರಿ; ಮತ್ತು ಕರ್ತನ ಮೇಜಿನಲ್ಲಿಯೇ ಆಹಾರ ಪಡೆಯಿರಿ.

ಕರ್ತನ ಮೇಜಿನಲ್ಲಿ ಊಟ ಮಾಡಿದರೂ ತೃಪ್ತರಾಗದವರ ಮೇಲೆ, ಪ್ರವಾದಿ ಯೆಶಾಯನ ಮೂಲಕ ನೀಡಲಾದ *(1:1-6)* ಕರ್ತನ ಮಾತುಗಳನ್ನು ಅನ್ವಯಿಸಿ, *"ಓ ಆಕಾಶ ಗಳೇ, ಕೇಳಿರಿ; ಓ ಭೂಮಿಯೇ, ಕಿವಿಗೊಡು; ಕರ್ತನು ಮಾತನಾಡುತ್ತಿದ್ದಾನೆ: ನಾನು ಸಾಕಿ ಸಲಹಿದ ಮಕ್ಕಳೇ, ನನಗೆ ವಿರೋಧವಾಗಿ ಎದುರುಬಿದ್ದಿದ್ದಾರೆ. ಎತ್ತು ತನ್ನ ಯಜಮಾನನನ್ನು ಮತ್ತು ಕತ್ತೆಯು ತನ್ನ ಒಡೆ ಯನ ಕೊಟ್ಟಿಗೆಯನ್ನು ತಿಳಿದಿರುವವು; ಆದರೆ ಇಸ್ರಾಯೇಲಿಗೆ ತಿಳಿದಿಲ್ಲ; ನನ್ನ ಜನರು ಆಲೋಚಿಸುವ ದಿಲ್ಲ."* ಎತ್ತು ಮತ್ತು ಕತ್ತೆ ಅವರು ಇಲ್ಲಿಯವರೆಗೆ ಚೆನ್ನಾಗಿ ಪೋಷಿಸಲ್ಪಟ್ಟ ಮಾಲೀಕರಿಗೆ ಮತ್ತು ಕೊಟ್ಟಿಗೆಗೆ ಮತ್ತೆ ಮತ್ತೆ ಹಿಂತಿರುಗಲು ಸಾಕಷ್ಟು ತಿಳಿದಿವೆ. ದೆವ್ವಗಳ ಮೇಜಿನ ಮೇಲಿರುವ ಆಹಾರವನ್ನು ಪರೀಕ್ಷಿಸಲು ಅಥವಾ ಅಶುದ್ಧವಾದುದರ ಸಹವಾಸದಿಂದ ಉತ್ತಮವಾದುದೆಲ್ಲವೂ ಅಶುದ್ಧವಾಗುವಂತಹ ಅಶುದ್ಧವಾದ ಮೇಜುಗಳ ಕಡೆಗೆ ತಿರುಗಲು ಕರ್ತನ ಮೇಜನ್ನು ತ್ಯಜಿಸುವ ದೈವಭಕ್ತರಿಗಿಂತಲೂ, ಇವರು ಈ ವಿಷಯದಲ್ಲಿ ಹೆಚ್ಚಿನ ವಿವೇಚನೆಯನ್ನು ತೋರಿಸುತ್ತಾರೆ.

ಆದ್ದರಿಂದ, ಅಂತಹವರು ಮತ್ತೆ ಕರ್ತನ ಮೇಜಿಗೆ ಹಿಂತಿರುಗಲು ಆತನು ಅನುಮತಿಸುವುದಿಲ್ಲ ಎಂಬುದು ಆಶ್ಚರ್ಯಕರವಲ್ಲ; *"ನೀವು ಕರ್ತನ ಮೇಜಿನಲ್ಲಿಯೂ ದೆವ್ವಗಳ ಮೇಜಿನಲ್ಲಿಯೂ ಪಾಲುಗಾರರಾಗಲಾರಿರಿ."* ಏಕೆಂದರೆ? ಅವರು ಕರ್ತನ ಮೇಜಿನಿಂದ ಹೇರಳವಾಗಿ ಪೋಷಿಸಲ್ಪಟ್ಟಿದ್ದರು, ಅಲ್ಲಿ ಕರ್ತನೇ ಸ್ವತಃ ಸೇವೆ ಮಾಡಲು ಸಿದ್ಧನಾಗಿದ್ದ ಸ್ಥಳದಿಂದ ತಿರುಗಿಕೊಂಡು ಹೋಗುವುದರ ಮೂಲಕ, ಅವರು ಆತನಿಗೆ ದ್ರೋಹವನ್ನು ತೋರಿಸಿದ್ದಾರೆ ಮತ್ತು ಆತನ ಕೃಪೆಯ ಐಶ್ವರ್ಯವನ್ನು ತಿರಸ್ಕರಿಸಿದ್ದಾರೆ, ಕೃಪೆಯ ಆತ್ಮನನ್ನು ಅವಹೇಳನ ಮಾಡಿದ್ದಾರೆ. ಒಮ್ಮೆ ಜ್ಞಾನೋದಯವಾದ ನಂತರವೂ ಉದ್ದೇಶಪೂರ್ವಕವಾಗಿ ಹಾಗೆ ಮಾಡುವವರು, ಅವಿಧೇಯರಾದ ಇಸ್ರೇಲ್‌ನಿಂದ ಸೂಚಿಸಲ್ಪಟ್ಟ ಆ ಪಾಪಿಷ್ಠ ಜನಾಂಗದವರಾಗಿದ್ದಾರೆ. ಪ್ರವಾದಿ ಅವರನ್ನು ಸ್ಪಷ್ಟವಾಗಿ ವಿವರಿಸುತ್ತಾ, *"ಹಾ, ಪಾಪಿಷ್ಠ ಜನಾಂಗವೇ, ದುಷ್ಟತನದ ಭಾರವನ್ನು*

*ಹೊತ್ತಿರುವ ಪ್ರಜೆಯೇ, ದುಷ್ಟಸಂತತಿಯೇ, ಭ್ರಷ್ಟರಾದ ಮಕ್ಕಳೇ, ಕರ್ತನನ್ನು ಅವರು ತೊರೆದುಬಿಟ್ಟಿದ್ದಾರೆ. ಇಸ್ರಾಯೇಲಿನ ಪರಿಶುದ್ಧನಾ ದಾತನಿಗೆ ಕೋಪವನ್ನೆಬ್ಬಿಸುವಂತೆ ಅವರು ಹಿಂದಕ್ಕೆ ಹೋಗಿದ್ದಾರೆ. ....ತಲೆಯೆಲ್ಲಾ ರೋಗ, ಹೃದಯವೆಲ್ಲಾ ದುರ್ಬಲ. ಅಂಗಾಲಿನಿಂದ ನಡುನೆತ್ತಿಯ ವರೆಗೂ ಬಾಸುಂಡೆ ಪೆಟ್ಟು, ಮಾಗದ ಗಾಯಗಳೇ ಹೊರತು ಏನೂ ಸೌಖ್ಯವಿಲ್ಲ"* ***(ಯೆಶಾಯ 1:4-6)*** ಎಂದು ಹೇಳುತ್ತಾನೆ.

ಎಲ್ಲಾ ವ್ಯರ್ಥ ತತ್ತ್ವಚಿಂತನೆಗಳು, ಮಾನವ ಸಂಪ್ರದಾಯಗಳು ಮತ್ತು ಊಹಾಪೋಹಗಳನ್ನು ಲೆಕ್ಕಿಸದೆ, ನಮ್ಮ ಅಧ್ಯಯನಗಳನ್ನು ದೈವಿಕ ಯೋಜನೆಗೆ ಸೀಮಿತಗೊಳಿಸುವಲ್ಲಿ ನಾವು ಸಂಕುಚಿತ ಮನಸ್ಸಿನವರಲ್ಲ; ಏಕೆಂದರೆ ಅದರ ವ್ಯಾಪ್ತಿಯು ವಿಮೋಚನೆಯಷ್ಟೇ ವಿಶಾಲವಾಗಿದೆ, ಅದರ ವಿಜ್ಞಾನವು ಅತ್ಯಂತ ನಿಖರವಾಗಿದೆ ಮತ್ತು ಅದರ ತತ್ವಶಾಸ್ತ್ರವು ಅತ್ಯಂತ ಆಳವಾಗಿದೆ. ಸತ್ಯ ವಾಕ್ಯಗಳಲ್ಲಿ ಬಹಿರಂಗಪಡಿಸಲಾದ ದೈವಿಕ ಯೋಜನೆಯನ್ನು ಕಲಿತ ನಂತರ, ಅದರ ಆತ್ಮದಿಂದ ಪ್ರೇರಿತರಾದ ಎಲ್ಲರಿಗೂ ಅದರ ಅಳತೆರೇಖೆಗಳನ್ನು ದೈವಿಕ ಪ್ರಕಟಣೆಯ ಸಂಪೂರ್ಣ ವಿಷಯದ ಮೇಲೆ ಅನ್ವಯಿಸುವ ಸವಲತ್ತು ದೊರೆತಿದೆ. ಹೀಗೆ, ಅದರ ಸಹಾಯದಿಂದ ಪ್ರಾರ್ಥನೆ ಮತ್ತು ದೇವರೊಂದಿಗಿನ ಸಂಪರ್ಕದ ಪವಿತ್ರ ಪ್ರಭಾವಗಳೊಂದಿಗೆ, ನಾವು ಆತ್ಮೀಯ ವಿಷಯಗಳಲ್ಲಿ ಆ ಶಿಕ್ಷಣವನ್ನು ಸ್ವೀಕರಿಸುತ್ತೇವೆ, ಅದು ಸಂಗೀತಗಾರನ ಕಿವಿಯಿಂದ ಸ್ವರ್ಗೀಯ ಮಧುರ ಸೂಕ್ಷ್ಮವಾದ ರಾಗಗಳನ್ನು, ಅವುಗಳ ಲಯ ಮತ್ತು ಕ್ರಮದ ನಿಖರತೆಯನ್ನು ಮತ್ತು ಕಲಾವಿದನ ಕಣ್ಣಿನಿಂದ ದೈವಿಕ ಬುದ್ಧಿವಂತಿಕೆ ಮತ್ತು ಅನುಗ್ರಹದ ಸೂಕ್ಷ್ಮ ಹಾಗೂ ಸುಂದರವಾದ ಛಾಯೆಗಳನ್ನು ಗುರುತಿಸಲು ಸಹಾಯ ಮಾಡುತ್ತದೆ.

ಓಹ್, ಇಲ್ಲ! *"ದೇವರ ಅಗಾಧವಾದ ವಿಷಯಗ"ಳು* ಎಂಬ ಕರ್ತನ ಮಾರ್ಗದರ್ಶನವನ್ನು ಅನುಸರಿಸುವಲ್ಲಿ ನಾವು ಸಂಕುಚಿತ ಮನಸ್ಸಿನವರಾಗಿರುವುದಿಲ್ಲ. ಅದು ಈಗ ಆತನ ಸರಿಯಾದ ಸಮಯದಲ್ಲಿ ಬಹಿರಂಗಗೊಂಡಿದೆ; *"ದೇವದೂತರಿಗೂ ಈ ಸಂಗತಿಗಳನ್ನು ಲಕ್ಷ್ಯವಿಟ್ಟು ನೋಡಬೇಕೆಂಬ ಅಪೇಕ್ಷೆ ಉಂಟು"* ಮತ್ತು ಅದು ಸಂತರಿಗೆ ಶಾಶ್ವತವಾಗಿ ಆನಂದವನ್ನು ನೀಡುತ್ತದೆ. ನೀವು ಏನು ಯೋಚಿಸುತ್ತೀರಿ? ಸೈತಾನ ಮತ್ತು ಅವನ ಮೇಜುಗಳು ನಾಶವಾದಾಗ, ಸಂತರು ಮತ್ತು ದೇವದೂತರು ಸಂಕುಚಿತ ಮನಸ್ಸಿನವರಾಗುತ್ತಾರೆಯೇ? ನಾವು ಪ್ರತಿಯೊಂದು ಕೆಟ್ಟದ್ದನ್ನು ದೂರವಿಟ್ಟು ದೇವರಲ್ಲಿ ನಮ್ಮ ಆನಂದವನ್ನು ಕಂಡುಕೊಳ್ಳೋಣ ಮತ್ತು ಆತನ ಹೇರಳವಾದ ಕೃಪೆಯ ಸಮಾಧಾನಗಳಲ್ಲಿ ತೃಪ್ತರಾಗೋಣ.

ನಮ್ಮ ಹೃದಯಗಳ **[ಪುಟ 276]** ಭಾಷೆ ಸದಾ ಹೀಗಿರಲಿ:

"ಇನ್ನು ಮುಂದೆ ನಾನು ವಿಶ್ರಾಂತಿಯಿಂದ
ದೂರವಾಗುವುದಿಲ್ಲ,
ಮತ್ತು ವ್ಯರ್ಥವಾಗಿ ಆನಂದವನ್ನು ಹುಡುಕುವುದಿಲ್ಲ;
ನನ್ನ ಆತ್ಮವು ಮನೆಯಲ್ಲೇ ತೃಪ್ತಿಗೊಂಡಿದೆ,
ಕರ್ತನೇ ನನ್ನ ಪಾಲು."

[R4153: ಪುಟ 86]

# "ಕರ್ತನ ಸ್ಮರಣೆ"

## *THE MEMORIAL, APRIL 14*

ಏಪ್ರಿಲ್ 14, ಮಂಗಳವಾರ ಸಂಜೆ ಆರು ಗಂಟೆಯ ನಂತರ, ಪ್ರಪಂಚದ ಎಲ್ಲಾ ಭಾಗಗಳಲ್ಲಿರುವ ಈ ಪತ್ರಿಕೆಯ ಓದುಗರು ಕ್ರಿಸ್ತನ ಸಭೆಗಳಾಗಿ ಒಟ್ಟುಗೂಡುತ್ತಾರೆ, ಆತನ ಮರಣವನ್ನು ಸ್ಮರಿಸಲು "ಹುಳಿಯಿಲ್ಲದ ರೊಟ್ಟಿ" ಮತ್ತು "ದ್ರಾಕ್ಷಾರಸ"ವನ್ನು, ಆತನ ಮುರಿದ ದೇಹ ಮತ್ತು ಸುರಿಸಿದ ರಕ್ತದ ಸಂಕೇತಗಳಾಗಿ ಬಳಸುತ್ತಾರೆ. ಇವುಗಳಲ್ಲಿ ದೊಡ್ಡ ಸಭೆ ಬಹುಶಃ ಅಲ್ಲೆಘೆನಿ ಕಾರ್ನೆಗಿ ಹಾಲ್‌ನಲ್ಲಿ ಒಟ್ಟುಗೂಡುತ್ತದೆ - ಬೇರೆ ಎಲ್ಲಿಯೂ ಸಭೆ ಸೇರುವ ದೊಡ್ಡ ಜನಸಮೂಹವಲ್ಲ. ಆದರೆ, ಸಣ್ಣ ಸಭೆಗಳು ಹಲವಾರು ಇರುತ್ತವೆ. ಏಕೆಂದರೆ ಕರ್ತನು ಹೇಳಿದಂತೆ, *"ಇಬ್ಬರು ಮೂವರು ನನ್ನ ಹೆಸರಿನಲ್ಲಿ ಎಲ್ಲಿ ಕೂಡಿ ಬಂದಿರುತ್ತಾರೋ ಅಲ್ಲಿ ಅವರ ನಡುವೆ ನಾನು ಇದ್ದೇನೆ." ಮತ್ತಾಯ 18:20.*

ಈ ವಾರ್ಷಿಕ ಸವಲತ್ತನ್ನು ಯಾರೂ ಯಾವುದೇ ಕಾರಣಕ್ಕೂ ನಿರ್ಲಕ್ಷಿಸಬಾರದು ಎಂದು ನಾವು ಒತ್ತಾಯಿಸುತ್ತೇವೆ. ಇದರ ಆಚರಣೆಯಲ್ಲಿ ಒಂದು ವಿಶೇಷ ಆಶೀರ್ವಾದವಿದೆ. ನೀವು ನಿರುತ್ಸಾಹಗೊಂಡರೆ, ಮುರಿದ ರೊಟ್ಟಿಯನ್ನು ಸ್ವೀಕರಿಸಿ, ಕರ್ತನ ಬಳಿ ಪ್ರಾರ್ಥಿಸಿ ನಿಮ್ಮ ನೀತಿವಂತಿಕೆಯ ಹೊಸ ಅರಿವು ಮತ್ತು ಆತನೊಂದಿಗೆ ಸಮರ್ಪಣೆಯಾಗಿ (ತ್ಯಾಗ ಮಾಡಲು) ಮುರಿಯುವ ಹೊಸ ಮೆಚ್ಚುಗೆಯನ್ನು ಪಡೆಯಿರಿ. ಅಂದರೆ ಆತನ ಸಭೆಯಾಗಿ, ಆತನ ದೇಹವಾಗಿ ಇದನ್ನು ನೀವು ಒಂದೇ ರೊಟ್ಟಿಯ ಸದಸ್ಯರಾಗಿ ಪರಿಗಣಿಸಿ. ನಂತರ ನೀವು "ಈ ಪಾತ್ರೆಯನ್ನು" ಪಾನ ಮಾಡುವಾಗ, ಇದು ನಮ್ಮ ಪರವಾಗಿ ನಮ್ಮ ಕರ್ತನು ಅನುಭವಿಸಿದ ಬಾಧೆಗಳು ಮತ್ತು ಪ್ರತಿಯೊಬ್ಬ ಮನುಷ್ಯನಿಗಾಗಿ ಆತನು ಸ್ವೀಕರಿಸಿದ ಮರಣವನ್ನು ನೆನಪಿಗೆ ತರುತ್ತದೆ ಎಂದು ನೆನಸಿಕೊಳ್ಳಿ. "ನಾವು ಬಾಧೆಪಡುವವರಾಗಿದ್ದರೆ ಆತನೊಂದಿಗೆ ನಾವು ಸಹ ಆಳುವೆವು" - ಇದು "ನಮ್ಮ ಉನ್ನತ ಕರೆ" ಎಂಬುದನ್ನು ಸಹ ನೆನಪಿಡಿ. "ನೀವೆಲ್ಲರೂ ಇದರಲ್ಲಿರುವದನ್ನು ಕುಡಿಯಿರಿ" ಎಂಬ ಆತನ ಮಾತುಗಳ ಮಹತ್ವವಿದು. ಅಪೋಸ್ತಲರು ಘೋಷಿಸಿದಂತೆ, **[R4153 : ಪುಟ 87]** ಇದು ಆತನ ಭಾದೆಗಳಲ್ಲಿ ಅನ್ಯೋನ್ಯತೆಯಾಗಿದೆ. - *1 ಕೊರಿಂಥದವರಿಗೆ 10:16*.

ಕರ್ತನ ಸ್ಮರಣೆಯನ್ನು ಈ ರೀತಿಯಾಗಿ ಸ್ವೀಕರಿಸಿ, ಅದರ ಮಹತ್ವವನ್ನು ಅರಿತಿಲ್ಲದಿದ್ದರೆ, ಅದು ಅರ್ಥವಿಲ್ಲದದ್ದು ಅಥವಾ ಹೀನವಾಗಿರುತ್ತದೆ ಎಂಬುದನ್ನು ನಾವು ಮರೆಯಬಾರದು. ಆದರೆ ಪಾಪಗಳು, ಶೀತಲತೆ ಅಥವಾ ಅನರ್ಹತೆಯ ಭಾವನೆಗಳು ನಮ್ಮನ್ನು ಯಾವುದೂ ತಡೆಯಬಾರದು. ಕರ್ತನ ಬಳಿಗೆ ಹೋಗಿ ನಿಮ್ಮ ಎಲ್ಲಾ ಕೊರತೆಗಳನ್ನು ಬಹಿರಂಗಪಡಿಸಿ. ನಿಮ್ಮ ಸಹೋದರರ ಬಳಿಗೆ ಅಥವಾ ನೀವು ಯಾರ ಮೇಲೆ ತಪ್ಪು ಮಾಡಿದ್ದೀರಿ ಎಂಬುವವರ ಬಳಿಗೆ ಹೋಗಿ, ಅವರು ನಿಮ್ಮ ಕಡೆಗೆ ತಪ್ಪುಗಳನ್ನು ಒಪ್ಪಿಕೊಂಡರೂ ಅಥವಾ ಒಪ್ಪಿಕೊಳ್ಳದಿದ್ದರೂ ನೀವು ನಿಮ್ಮ ತಪ್ಪುಗಳನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳಿರಿ. ನಿಮ್ಮನ್ನು ಕರ್ತನ ಮುಂದೆ ಸರಿಪಡಿಸಿಕೊಳ್ಳಿ ಮತ್ತು ಸಾಧ್ಯವಾದಷ್ಟು ಪ್ರತಿ ವ್ಯಕ್ತಿಯೊಂದಿಗೆ ಸರಿಯಾದ ಸಂಬಂಧವನ್ನು ಕಾಪಾಡಿ. ನಂತರ ಭೋಜನ ಮಾಡಿ, ಈಗ ಅಥವಾ ಮುಂದಿನ

"ತಕ್ಕ ಸಮಯದಲ್ಲಿ" ಸ್ವೀಕರಿಸುವ ಪ್ರತಿಯೊಬ್ಬರಿಗೂ ಕರ್ತನು ತಯಾರಿಸಿದ ಸಮೃದ್ಧ ಆಹಾರವನ್ನು ಸಂತೋಷದಿಂದ ಸ್ವೀಕರಿಸಿ.

ನಮ್ಮ ಹೃದಯದ ಪರಿಶೀಲನೆ ಮತ್ತು ಶುದ್ಧೀಕರಣವು, ನಾವು ನೆನಪಿಸಿಕೊಳ್ಳುವಂತೆ, ಯಹೂದ್ಯರಿಗೆ ನೀಡಲ್ಪಟ್ಟ ಪಸ್ಕದ ಛಾಯೆಯಲ್ಲಿ ಸ್ಪಷ್ಟವಾಗಿ ತೋರಿಸಲಾಗಿದೆ. ಅವರು ತಮ್ಮ ಪಸ್ಕದ ಕುರಿಮರಿಯನ್ನು ತಿನ್ನಲು ಒಟ್ಟುಗೂಡುವ ಮೊದಲು, ಹುಳಿ ಅಥವಾ ಕೊಳೆತವಾದದ್ದು, ಮೂಳೆಗಳು, ಹೊರಪದರಗಳು ಹೊಂದಿದ್ದ ಎಲ್ಲವನ್ನೂ ತಮ್ಮ ವಾಸಸ್ಥಳಗಳಲ್ಲಿ ಹುಡುಕಿದರು. ಇವೆಲ್ಲವನ್ನೂ ಅವರು ಸುಟ್ಟುಹಾಕಿ ಸಂಪೂರ್ಣವಾಗಿ ನಾಶಮಾಡಿದರು. ಅದೇ ರೀತಿ, ನಾವು ಸಹ ಅದರ ನಿಜಸ್ವರೂಪವನ್ನು ಪೂರೈಸಬೇಕಾಗಿದೆ. ಅಂದರೆ, ಕೋಪ, ದುರುದ್ದೇಶ, ದ್ವೇಷ, ಜಗಳಗಳು ಎಂಬ "ಹಳೆಯ ಹುಳಿಯನ್ನು *ತೆಗೆದುಹಾ"ಕಬೇಕು.* - ***1 ಕೊರಿಂಥ 5:7,8***.

ಆದರೆ ಈ ರೀತಿಯ ಪಾಪದ ಹುಳಿಯನ್ನು ಸುಡದ ಹೊರತು ಸಂಪೂರ್ಣವಾಗಿ ತೆಗೆದುಹಾಕಲಾಗುವುದಿಲ್ಲ ಎಂಬುದನ್ನು ನೆನಪಿಡಿ ಮತ್ತು ಪ್ರೀತಿ ಮಾತ್ರ ಅದನ್ನು ಸುಡಬಲ್ಲದು ಅದು ಪರಲೋಕದ ಪ್ರೀತಿ, ದೇವರ ಪ್ರೀತಿ. ನಮ್ಮ ಹೃದಯದಲ್ಲಿ ಆ ಪ್ರೀತಿಯನ್ನು ಹರಡಿದರೆ, ಅದು ವಿರುದ್ಧ ಸ್ವಭಾವದ ಎಲ್ಲವನ್ನೂ ಅಂದರೆ ಅಸೂಯೆ, ದ್ವೇಷ, ಕೆಟ್ಟ ಮಾತು ಮುಂತಾದವುಗಳನ್ನು ನುಂಗಿಬಿಡುತ್ತದೆ. ಇದೆಲ್ಲವನ್ನೂ ತೆಗೆದುಹಾಕಿ, ಕ್ರಿಸ್ತನನ್ನು ಧರಿಸಿಕೊಳ್ಳಿರಿ ಮತ್ತು ಆತನ ಆತ್ಮನಿಂದ ತುಂಬಿರಿ ಎಂದು ಅಪೋಸ್ತಲನು ಒತ್ತಾಯಿಸುತ್ತಾನೆ. ನಿರುತ್ಸಾಹಗೊಳಿಸಬೇಡಿ. ನಿಜ, ಸದ್ಯಕ್ಕೆ ನೀವು ಇನ್ನೂ ಮುಂದೆ ಹೋಗಿ ಪರಿಪೂರ್ಣ ಪ್ರೀತಿಗೆ ಹತ್ತಿರವಾಗಬೇಕು. ಆದರೆ ಪಾಠವನ್ನು ಕಲಿಯಿರಿ ಮತ್ತು ಹೊಸ ನಿರ್ಧಾರಗಳೊಂದಿಗೆ, ಯಜಮಾನನ ಸಹಾಯವಿಲ್ಲದೆ ನೀವು ಎಂದಿಗೂ ಬಹುಮಾನವನ್ನು ಪಡೆಯಲು ಸಾಧ್ಯವಿಲ್ಲ ಎಂಬುದರ ಬಗ್ಗೆ ಹೆಚ್ಚಿದ ಮೆಚ್ಚುಗೆಯೊಂದಿಗೆ ಹೊಸದಾಗಿ ಪ್ರಾರಂಭಿಸಿ. ಇದು ನಮಗಿಂತ ಅವರು ಚೆನ್ನಾಗಿ ಅರಿತುಕೊಂಡಿದ್ದಾರೆ ಮತ್ತು *"ನೀವು ನನ್ನನ್ನು ಬಿಟ್ಟು ಏನೂ ಮಾಡಲಾರಿರಿ"* ಎಂದು ಹೇಳುತ್ತಾರೆ. ನಮ್ಮ ಅಗತ್ಯದ ಕಾರಣದಿಂದಾಗಿ ತಂದೆಯು ನಮಗಾಗಿ ಹೀಗೆ ವ್ಯವಸ್ಥೆ ಮಾಡಿದರು. *"ಧೈರ್ಯವಾಗಿರಿ!"* ಎಂಬುದು *"ಜಯಶಾಲಿಗಳು"* ಎಂದು ಕರೆಯಲ್ಪಡುವ ವರ್ಗದವರಾಗಿರಲು ಮತ್ತು ಶ್ರಮಿಸುತ್ತಿರುವ ಎಲ್ಲರಿಗೂ ಯಜಮಾನನ ಮಾತು.

## YOUR ADVERSARY THE DEVIL
## ನಿಮ್ಮ ವಿರೋಧಿಯಾಗಿರುವ ಸೈತಾನನು

ವರ್ಷದ ಈ ಸಮಯದಲ್ಲಿ ಶೋಧನೆಗಳು ವಿಶೇಷವಾಗಿ ಅನುಮತಿಸಲಾಗುತ್ತದೆ ಎಂದು ತೋರುತ್ತದೆ. *"ವಿಷವುಳ್ಳ ಬೇರೂ ಗಳು"* ಯಾವಾಗಲೂ ಮೊಳಕೆಯೊಡೆಯುತ್ತಾ ಬೆಳೆಯುತ್ತವೆ ಎಂದು ಕಾಣುತ್ತದೆ, ಆದರೆ ಈ ಸಮಯದಲ್ಲಿ ಅವು ಹತ್ತು ಪಟ್ಟು ಹೆಚ್ಚು ಶಕ್ತಿಯಿಂದ ಬೆಳೆಯುತ್ತವೆ. ಜ್ಞಾನವಲ್ಲ, ಪ್ರೀತಿಯೇ ನಮ್ಮ ಶಿಷ್ಯತ್ವದ ಅಂತಿಮ ಪರೀಕ್ಷೆ ಎಂಬುದನ್ನು ನೆನಪಿನಲ್ಲಿಡೋಣ. *"ನಾನು ನಿಮಗೆ ಒಂದು ಹೊಸ ಆಜ್ಞೆಯನ್ನು ಕೊಡುತ್ತೇನೆ; ಏನಂದರೆ ನೀವು ಒಬ್ಬರನ್ನೊಬ್ಬರು ಪ್ರೀತಿಸಬೇಕು."* ಅಪೋಸ್ತಲರಲ್ಲಿ ಒಬ್ಬರಿಗೊಬ್ಬರು ಸಾಕಷ್ಟು ಪ್ರೀತಿ ಇಲ್ಲದ ಕಾರಣ, ರಾಜ್ಯದಲ್ಲಿ ಯಾರು ಶ್ರೇಷ್ಠರಾಗಿರಬೇಕು ಎಂಬುದರ ಕುರಿತು ಅವರು ವಾದಿಸಿದರು, ಮತ್ತು ಒಬ್ಬರಿಗೊಬ್ಬರು ತಗ್ಗಲು ಒಪ್ಪಿಕೊಳ್ಳಬಾರದು ಎಂಬ ದೃಢ ನಂಬಿಕೆಯಲ್ಲಿದ್ದರು, ಅವರು ಯಜಮಾನನ ಪಾದಗಳನ್ನು ತೊಳೆಯುವುದನ್ನು ಸಹ ನಿರ್ಲಕ್ಷಿಸಿದರು ಮತ್ತು ಸಣ್ಣ ವಿಷಯಗಳಲ್ಲಿಯೂ ಕೂಡ ಸೇವಕನಾಗಲು ಅವರಿಗೆ ಅವಕಾಶ ನೀಡಿದರು. ಈ ತಪ್ಪಾದ ಮನೋಭಾವ, ಅಂದರೆ ಕರ್ತನ ಆತ್ಮದ ಕೊರತೆ, ಅವರನ್ನು ಶತ್ರುವಿನ ಶಕ್ತಿಗೆ ಗುರಿಯಾಗುವಂತೆ ಮಾಡಿತು. ಅದರ ಪರಿಣಾಮವಾಗಿ ಯೂದನು ಕರ್ತನಿಗೆ ದ್ರೋಹ ಮಾಡಿದನು, ಮತ್ತು ಪೇತ್ರನು ಕರ್ತನ ಅಭಿಷಕ್ತನನ್ನು ನಿರಾಕರಿಸುವ ಸ್ಥಿತಿಗೆ ಬಿದ್ದನು.

ಹಾಗಾದರೆ ನಾವು ಶೋಧನೆಗೆ ಒಳಗಾಗದಂತೆ ನಮ್ಮ ಬಗ್ಗೆ ಎಚ್ಚರಿಕೆ ವಹಿಸೋಣ, ಎಚ್ಚರವಾಗಿರೋಣ, ಪ್ರಾರ್ಥಿಸೋಣ ಮತ್ತು ಬಹಳ ದೀನರೂ ಪ್ರೀತಿಯುಳ್ಳವರೂ ಆಗಿರೋಣ. ಆ ಸಮಯದಿಂದ ನಮ್ಮ ಮಹಾ ವಿರೋಧಿಯು, ಯೇಸುವಿನ ಅನುಯಾಯಿಗಳಿಗೆ ಹಾನಿ ಮಾಡಲು, ಅವರನ್ನು ಸಿಕ್ಕಿಹಾಕಿಸಲು ಅಥವಾ ಎಡವಿ ಬೀಳಿಸಲು ಈಗ ಹೆಚ್ಚು ಜೀವಂತವಾಗಿದ್ದಾನೆ ಎಂಬುದು ಸ್ಪಷ್ಟವಾಗಿದೆ.

*"ಲೋಕದ ಅಂತ್ಯದಲ್ಲಿರುವ"* ಓದುಗರ ಅನುಕೂಲಕ್ಕಾಗಿ, ನಾವು ಫೆಬ್ರವರಿ 1ರ ಸಂಚಿಕೆಯಲ್ಲಿ ಈ ಸ್ಮರಣೆಯ ವಿಷಯದ ಕುರಿತು ಒಂದು ವಿವರಣೆಯನ್ನು ಪ್ರಕಟಿಸಿದ್ದೇವೆ; ಮತ್ತೆ ಮಾರ್ಚ್ 1 ರ ಸಂಚಿಕೆಯಲ್ಲಿ ನಾವು ಜೀವನದ ರೊಟ್ಟಿಯ ಕುರಿತು ಚರ್ಚಿಸಿದ್ದೇವೆ. ಈ ಪ್ರಸ್ತುತಿಗಳನ್ನೂ ಮತ್ತು DAWN-STUDIES, **Vol. VI, ಪುಟ 457** ರಲ್ಲಿ ಈ ವಿಷಯದ ಮೇಲೆ ನಮ್ಮ ನಿರೂಪಣೆಯನ್ನು ಪುನಃ ಪರಿಶೀಲಿಸಲು ನಾವು ಶಿಫಾರಸ್ಸು ಮಾಡುತ್ತೇವೆ.

[R2282: ಪುಟ 101]

# "ಸ್ಮರಣಾರ್ಥಕ ಭೋಜನ"

## *THE MEMORIAL SUPPER*

ಜಾರ್ಜಿಯಾದಲ್ಲಿ ಸತ್ಯದಲ್ಲಿರುವ ಕೆಲ ಸ್ನೇಹಿತರು ಬ್ಯಾಬಿಲೋನ್‌ನಿಂದ ಹೊರಬಂದಾಗಿನಿಂದ ಸ್ಮರಣಾರ್ಥಕ ಭೋಜನವನ್ನು ಆಚರಿಸಿಲ್ಲ ಎಂದು ಬರೆಯುತ್ತಾರೆ. ಅದಕ್ಕೆ ಈ ಕಾರಣವನ್ನು ನೀಡುತ್ತಾರೆ: "ನಮ್ಮ ಮನಸ್ಸುಗಳು ಸಮರ್ಪಣೆಯಾಗಿವೆ ಎಂದು ನಾವು ಭಾವಿಸುತ್ತೇವೆ, ಆದರೆ ನಮ್ಮ ಶರೀರವು ಸಮರ್ಪಣೆಯಾಗಿಲ್ಲ ಅಥವಾ ಸುತ್ತಮುತ್ತಲಿನ ಸಂದರ್ಭಗಳಲ್ಲಿಯೂ ನಮ್ಮ ಶರೀರವು ಪರಿಶುದ್ಧವಾಗಿ ಇರಲು ಸಾಧ್ಯವಿಲ್ಲ. ನಾವು ಬಡವರು ಮತ್ತು ಅವಲಂಬಿತ ದೊಡ್ಡ ಕುಟುಂಬಗಳನ್ನು ಹೊಂದಿದ್ದೇವೆ ಮತ್ತು ಅವುಗಳನ್ನು ನಿರಾಕರಿಸಲು ಸಾಧ್ಯವಿಲ್ಲ. ಆದ್ದರಿಂದ ನಾವು ಈ ಬಹುನಿರೀಕ್ಷಿತ ಆಶೀರ್ವಾದದಿಂದ ದೂರವಿದ್ದೇವೆ."

ನಾವು ಸಹೋದರರನ್ನು ಸರಿಯಾಗಿ ಅರ್ಥಮಾಡಿಕೊಂಡರೆ, ಅವರು ಯಾವುದೋ ತಪ್ಪಾದ ತಿಳುವಳಿಕೆಯಲ್ಲಿ ಬಳಲುತ್ತಿರುವಂತೆ ತೋರುತ್ತದೆ. ನಮ್ಮ ಶರೀರವು ಪರಿಪೂರ್ಣವಾಗುವವರೆಗೆ ನಾವು ಕಾಯಬೇಕಾದರೆ, ನಮ್ಮಲ್ಲಿ ಯಾರೂ ಸ್ಮರಣಾರ್ಥಕ ಭೋಜನದಲ್ಲಿ ಪಾಲ್ಗೊಳ್ಳಲು ಸಾಧ್ಯವಿಲ್ಲ, ಏಕೆಂದರೆ ಈ ಯುಗದ ಸಭೆ, ಶರೀರದ ಪರಿಪೂರ್ಣತೆಯನ್ನು ನಿರೀಕ್ಷಿಸುವುದಿಲ್ಲ. ನಾವು ನಂಬಿಗಸ್ತರಾಗಿದ್ದರೆ, ನಮ್ಮ ಪರಿಪೂರ್ಣತೆಯು ಮೊದಲ ಪುನರುತ್ಥಾನದಲ್ಲಿ ಆತ್ಮ ಜೀವಿಗಳಂತೆ ಇರುತ್ತದೆ. ಈಗ ನಾವು ಹೊಸ ಸ್ವಭಾವದ ನಿಧಿಯನ್ನು ಹೊಂದಿದ್ದೇವೆ. ಹೊಸ ಮನಸ್ಸು ಅಥವಾ ಚಿತ್ತವು ನಮ್ಮ ಮಣ್ಣಿನ ಘಟಕಗಳಲ್ಲಿ ಇದೆ; ಅವು ಹೆಚ್ಚು ಕಡಿಮೆ ಹಾಳಾಗಿದ್ದು, ಪಾಪದಿಂದ ಕಲುಷಿತವಾಗಿವೆ. ಆದರೆ **[R2283 : ಪುಟ 101]** ಇಲ್ಲಿ ನಮಗೆ ಹೊಸ ಒಡಂಬಡಿಕೆಯಡಿಯಲ್ಲಿ ಪ್ರಯೋಜನವಿದೆ, ಅದರ ನಿಯಮಗಳ ಮೂಲಕ ದೇವರು ನಮ್ಮ ಪರಿಪೂರ್ಣ ಚಿತ್ತಗಳನ್ನು (ನಮ್ಮ ಅತ್ಯುತ್ತಮ ಪ್ರಯತ್ನಗಳಿಂದ ಬೆಂಬಲಿತವಾಗಿದೆ) ನಮ್ಮ ಸಂಪೂರ್ಣ ಪರಿಪೂರ್ಣತೆಯಾಗಿ ಸ್ವೀಕರಿಸಲು ಒಪ್ಪಿಕೊಂಡಿದ್ದಾನೆ. ಅಂತಹವರೆಲ್ಲರೂ ಅಪೋಸ್ತಲನೊಂದಿಗೆ "ನಮ್ಮಲ್ಲಿ ಧರ್ಮಶಾಸ್ತ್ರದ ನಿಯಮವು ನೆರವೇರುತ್ತದೆ", ನಾವು "ಶರೀರಭಾವಕ್ಕೆ ಅನುಸಾರವಾಗಿ ನಡೆಯದೆ ಪವಿತ್ರಾತ್ಮಾನುಸಾರವಾಗಿ ನಡೆಯುತ್ತೇವೆ", ಮತ್ತು ಸಾಧ್ಯವಾದಷ್ಟು ಅದಕ್ಕೆ ಹತ್ತಿರವಾಗುತ್ತೇವೆ ಎಂದು ಹೇಳಬಹುದು.

ಸಮರ್ಪಣೆ ಎಂದರೆ ನಾವು ನಮ್ಮ ಕುಟುಂಬಗಳನ್ನು ನಿರ್ಲಕ್ಷಿಸಬೇಕು ಅಥವಾ ತ್ಯಜಿಸಬೇಕು ಎಂದಲ್ಲ, ದೇವರ ಅನುಗ್ರಹದಲ್ಲಿ, ಆತನ ಶತ್ರುಗಳು ಮತ್ತು ನಮ್ಮವರು ನಮ್ಮನ್ನು ಕೊಲ್ಲಲು, ಬಂಧಿಸಲು ಅಥವಾ ಬೇರ್ಪಡಿಸಲು ಅನುಮತಿಸಲಾದ ಸಂದರ್ಭಗಳಲ್ಲಿ ಹೊರತುಪಡಿಸಿ, ಹೀಗೆ ಬಲವಂತವಾಗಿ ಅವರನ್ನು ನೋಡಿಕೊಳ್ಳದಂತೆ ತಡೆಯುತ್ತದೆ. ಕತ್ತಲೆಯ ಯುಗಗಳಲ್ಲಿ ಇದು ಹೆಚ್ಚಾಗಿ ಸಂಭವಿಸಿತು. ಅಂತಹ ಸಂದರ್ಭಗಳ ಹೊರತಾಗಿ, ನಮ್ಮ ಕುಟುಂಬಗಳನ್ನು ವಿವೇಕಪೂರ್ವಕವಾಗಿ ನೋಡಿಕೊಳ್ಳುವುದು ಆತನ ಚಿತ್ತ ಮತ್ತು ಅದು ನಮ್ಮ ಜವಾಬ್ದಾರಿ ಎಂದು ದೇವರು ಕಲಿಸುತ್ತಾನೆ.

ದೇವರಿಗೆ ಸಂಪೂರ್ಣವಾದ ಸಮರ್ಪಣೆ ಎನ್ನುವುದು ನಮ್ಮ ಚಿತ್ತವನ್ನು ದೇವರ ಚಿತ್ತಕ್ಕೆ ಮತ್ತು ನಮ್ಮ ದೇಹಗಳನ್ನು ನಮ್ಮ ಹೊಸ ಚಿತ್ತಕ್ಕೆ ಸಂಪೂರ್ಣವಾಗಿ ಅರ್ಪಿಸುವುದು. ಇದರ ಪರಿಣಾಮವಾಗಿ, ದೇವರ ವಾಕ್ಯದ ಮಾರ್ಗದರ್ಶನದ ಅಡಿಯಲ್ಲಿ ನಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಪಾಪಗಳನ್ನು ತೆಗೆದುಹಾಕುವುದು, ಪ್ರತಿದಿನವು ಮತ್ತು ಪ್ರತಿ ಗಂಟೆಯೂ ಪವಿತ್ರಾತ್ಮವನ್ನು ಅದರ ಫಲಗಳು ಮತ್ತು ಹೂವುಗಳಾದ ಸೌಮ್ಯತೆ, ಸದ್ಗುಣ, ಶುದ್ಧತೆ, ದಯೆ, ಪ್ರೀತಿಯೊಂದಿಗೆ ಬೆಳೆಸುವುದು ಇದರ ಅರ್ಥವಾಗಿದೆ.

ಆದುದ್ದರಿಂದ ಪ್ರಿಯ ಸಹೋದರರರೇ, ನಂಬಿಕೆಯಿಂದ ದೇವರ ಕುರಿಮರಿಯು ನಮ್ಮ ಪಾಪಗಳಿಗಾಗಿ ಕೊಯ್ಯಲ್ಪಟ್ಟಿತು ಮತ್ತು ಆತನ ಬಲಿಯ ಪುಣ್ಯವು ದೇವರ ದೃಷ್ಟಿಯಲ್ಲಿ ಪಾಪದಿಂದ ನಮ್ಮನ್ನು ಮುಚ್ಚುತ್ತದೆ ಮತ್ತು ಶುದ್ಧೀಕರಿಸುತ್ತದೆ ಎಂಬುದನ್ನು ತಿಳಿದುಕೊಳ್ಳಿರಿ. ಆದ್ದರಿಂದ ಹೃದಯದಿಂದ ನಂಬಿ, ಚಿತ್ತದಿಂದ, ಕರ್ತನಿಗೆ ಸಂಪೂರ್ಣವಾಗಿ ಶರಣಾಗಿ, ಆತನ ಮೇಜಿನ ಬಳಿಗೆ ಬಂದು ಆತನ ಸಂಕೇತಗಳಲ್ಲಿ ಸೌಮ್ಯತೆ ಮತ್ತು ಧೈರ್ಯದೊಂದಿಗೆ ಪಾಲ್ಗೊಳ್ಳಿರಿ.

*　　　*　　　*

ನೀಸಾನ್ ಹದಿನಾಲ್ಕನೆಯ ದಿನದ ಬಗ್ಗೆ ನಮಗಿರುವ ಅನೇಕ ಪ್ರಶ್ನೆಗಳು ತಪ್ಪು ತಿಳುವಳಿಕೆಯಿಂದ ಹುಟ್ಟಿಕೊಂಡಿವೆ. ಅಂದರೆ, ಯಹೂದ್ಯರು ಬಳಸುವ "ಪಸ್ಕ" ಎಂಬ ಪದವು ಪಸ್ಕ ಹಬ್ಬವನ್ನು (ಹುಳಿ ಇಲ್ಲದ ರೊಟ್ಟಿಯ ಹಬ್ಬ) ಸೂಚಿಸುತ್ತದೆಯೇ ಹೊರತು 14 ರಂದು ಕುರಿಮರಿಯ ಕೊಲ್ಲುವುದರ ಬಗ್ಗೆ ಸೂಚಿಸುವುದಿಲ್ಲ ಎಂಬುದನ್ನು ಅರಿತುಕೊಳ್ಳುವಲ್ಲಿ ವಿಫಲರಾಗಿದ್ದೇವೆ. ಆದರೆ ನಾವು ಸ್ಮರಿಸುವುದು ಆ ಕುರಿಮರಿಯ ವಧೆಯನ್ನೇ (14 ನೇ ದಿನ). ಯೆಹೂದ್ಯರಿಗೆ, 14ನೇ ತಾರೀಖು ಎನ್ನುವುದು ಪಸ್ಕದ ಸಿದ್ಧತೆಯ ದಿನವಾಗಿತ್ತು ಮತ್ತು ಕುರಿಮರಿಯನ್ನು ತಿನ್ನುವುದು, ವಿಶೇಷವಾಗಿ ಅದು ಕೊಲ್ಲಲ್ಪಡುವುದು, ಆ ಸಿದ್ಧತೆಯ ಒಂದು ಭಾಗ ಮಾತ್ರವಾಗಿತ್ತು. ನ್ಯಾಯಪ್ರಮಾಣದ ಪ್ರಕಾರ, ಕುರಿಮರಿಯನ್ನು ಮೊದಲನೆಯ ತಿಂಗಳಿನ 14ನೇ ದಿನದ ಸಂಜೆಯಲ್ಲಿ, ಅಂದರೆ "ಎರಡು ಸಂಜೆಗಳ ನಡುವೆ", ಕೊಲ್ಲಬೇಕಾಗಿತ್ತು. ಆದ್ದರಿಂದ, ನ್ಯಾಯಪ್ರಮಾಣದ ನಿಯಮದ ವ್ಯಾಪ್ತಿಯಲ್ಲಿ, ಕುರಿಮರಿಯನ್ನು 13ನೇ ದಿನದ ಸಂಜೆ ಆರು ಗಂಟೆಯ ನಂತರದಿಂದ ಆರಂಭಿಸಿ, 14ನೇ ದಿನದ ಯಾವ ಸಮಯದಲ್ಲಾದರೂ ಕೊಲ್ಲಬಹುದು ಮತ್ತು ತಿನ್ನಬಹುದು.

ಪಸ್ಕದ ಊಟಕ್ಕೆ ಸಿದ್ಧತೆಯಾಗಿ ನಮ್ಮಲ್ಲಿ ಯಾರೂ "ಹಳೆ ಹುಳಿಯನ್ನು(ಪಾಪವನ್ನು) ತೆಗೆದು" ಹಾಕಲು ಮರೆಯಬಾರದು. *"ನಾವು ಶರೀರಾತ್ಮಗಳ ಕಲ್ಮಶವನ್ನು ತೊಲಗಿಸಿ ನಮ್ಮನ್ನು ಶುಚಿಮಾಡಿಕೊಂಡು ದೇವರ ಭಯದಿಂದ ಕೂಡಿದವರಾಗಿ ಪವಿತ್ರತ್ವವನ್ನು ಸಿದ್ಧಿಗೆ ತರುವದಕ್ಕೆ ಪ್ರಯತ್ನಿಸೋಣ."* ***(2 ಕೊರಿಂಥ. 7:1; 1 ಯೋಹಾನ 1:7)*** ಹೀಗೆ ಉಳಿದ ಜೀವನವು ಹುಳಿಯಿಲ್ಲದ ರೊಟ್ಟಿಯ ಹಬ್ಬವಾಗಿರುತ್ತದೆ.

ಹುಳಿಯು ಕೇವಲ ಸುಳ್ಳು ಭೋದನೆಯನ್ನು ಮಾತ್ರವೇ ಸಂಕೇತಿಸುತ್ತದೆ ಎಂಬ ಗಂಭೀರವಾದ ತಪ್ಪನ್ನು ಮಾಡಬೇಡಿ ***(ಮತ್ತಾಯ 16:6-12)***. ಅಪೊಸ್ತಲರು ಇದನ್ನು ದುಷ್ಟ ಸ್ವಭಾವವನ್ನು ಸೂಚಿಸುವುದಾಗಿ ಸಹ ಹೇಳಿದ್ದಾರೆ ಎಂಬುದನ್ನು ನೆನಪಿಡಿ. ಕಳ್ಳತನ, ಸುಳ್ಳು ಹೇಳುವುದು ಮತ್ತು ಕೊಲೆ ಮಾಡುವುದು (ದುಷ್ಟತನದ ಘೋರ ರೂಪಗಳು) ಮಾತ್ರವೇ ದುಷ್ಟತನವಲ್ಲ, ಬದಲಾಗಿ ಕ್ರಿಸ್ತನನ್ನು ನಾಮಮಾತ್ರವಾಗಿ ಸ್ವೀಕರಿಸಿದವರ ಮೇಲೆ ದಾಳಿ ಮಾಡುವ ಸಾಧ್ಯತೆ ಹೆಚ್ಚು; ಅಂದರೆ, ದ್ವೇಷಗಳು, ಅಸೂಯೆಗಳು, ಜಗಳಗಳು, ಚಾಡಿಮಾತುಗಳು, ದುಷ್ಟ ಊಹೆಗಳು ಹಾಗೂ ಮಾಂಸ ಮತ್ತು ಸೈತಾನನ ಇತರ ಕೆಲಸಗಳನ್ನು ಉಂಟುಮಾಡುವ "ದುರ್ಮಾರ್ಗತ್ವ". ಪ್ರೀತಿಯ ಆತ್ಮವು ನಮ್ಮ ಹೃದಯದೊಳಗೆ ಪ್ರವೇಶಿಸಿ ದುರ್ಮಾರ್ಗತ್ವ ಎಂಬ ಹುಳಿಹಿಟ್ಟನ್ನು ತೆಗೆದುಬಿಡೋಣ. ***(1 ಕೊರಿಂಥದವರಿಗೆ 5:6-8, ಎಫೆಸದವರಿಗೆ 4:31, ಕೊಲೊಸ್ಸೆಯವರಿಗೆ 3:8, ತೀತನಿಗೆ 3:3 ವಚನವನ್ನು***

*ನೋಡಿರಿ)*.

ಪ್ರತಿಮನುಷ್ಯನು ತನ್ನನ್ನು ಪರೀಕ್ಷಿಸಿಕೊಂಡವನಾಗಿ ಆ ರೊಟ್ಟಿಯಲ್ಲಿ ತಕ್ಕೊಂಡು ತಿನ್ನಲಿ, ಆ ಪಾತ್ರೆಯಲ್ಲಿ ಕುಡಿಯಲಿ. ಪ್ರತಿಯೊಬ್ಬರೂ ತಮ್ಮ ಸ್ವಂತ ಆತ್ಮೀಕ ಕ್ಷೇಮದ ಹಿತದೃಷ್ಟಿಯಿಂದ ಈ ಸಂದರ್ಭವನ್ನು ಸದುಪಯೋಗಪಡಿಸಿಕೊಳ್ಳಲು ಪ್ರಯತ್ನಿಸಬೇಕು. ಪ್ರತಿಯೊಬ್ಬರೂ ಶುದ್ಧೀಕರಣ ರಕ್ತವನ್ನು ಹೊಸದಾಗಿ ಹಚ್ಚಿಕೊಳ್ಳಲಿ, ಮತ್ತು ಮರಣದವರೆಗೂ ಯಜಮಾನನಿಗೆ ನಂಬಿಗಸ್ತರಾಗಿರಲು ತಮ್ಮ ಒಡಂಬಡಿಕೆಯನ್ನು ನವೀಕರಿಸಿಕೊಳ್ಳಲಿ. *"ನೀವು ಶೋಧನೆಗೆ ಒಳಗಾಗದಂತೆ ಎಚ್ಚರವಾಗಿದ್ದು ಪ್ರಾರ್ಥಿಸಿರಿ"* ಎಂಬ ಕರ್ತನ ವಾಕ್ಯಗಳನ್ನು ಸಹ ನೆನಪಿಡಿ. *"ಸಹೋದರರೇ, ನಮಗೋಸ್ಕರ ಪ್ರಾರ್ಥನೆಮಾಡಿರಿ!"*.

[R1636: ಪುಟ 99]

# “ಸಂಕೇತಗಳ ಮಹತ್ವ”

## *THE IMPORT OF THE EMBLEMS*

ಮಾರ್ಚ್ 1 ರ ನಮ್ಮ ಸಂಚಿಕೆಯಲ್ಲಿ, ಕ್ರಿಸ್ತನ ಸ್ಮರಣೆಯ ಭೋಜನದ ದಿನಾಂಕವನ್ನು ಪ್ರಕಟಿಸುವಾಗ ಮತ್ತು ಅದರ ವಾರ್ಷಿಕ ಆಚರಣೆಗೆ ಕಾರಣಗಳನ್ನು ತಿಳಿಸುವಾಗ, ನಮ್ಮ ವಿಮೋಚಕನ ದೇಹ ಮತ್ತು ರಕ್ತವನ್ನು ಪ್ರತಿನಿಧಿಸಲು ಬಳಸಲಾಗುವ ಸಂಕೇತಗಳ ಮಹತ್ವವನ್ನು ಈ ಸಂಚಿಕೆಯಲ್ಲಿ ಸಂಕ್ಷಿಪ್ತವಾಗಿ ಪರಿಶೀಲಿಸುತ್ತೇವೆ ಎಂದು ನಾವು ಭರವಸೆ ನೀಡಿದ್ದೇವೆ.

ರೊಟ್ಟಿಯ ಬಗ್ಗೆ ಯೇಸು ಹೀಗೆ ಹೇಳಿದನು, “ಇದು ನನ್ನ ಮಾಂಸ”, ಅಂದರೆ ಹುಳಿಯಿಲ್ಲದ ರೊಟ್ಟಿಯು ಆತನ ಮಾಂಸವನ್ನು, ನಮಗಾಗಿ ಮುರಿಯಲ್ಪಟ್ಟ ಅಥವಾ ತ್ಯಾಗ ಮಾಡಿದ ಆತನ ಮಾನವೀಯತೆಯನ್ನು ಪ್ರತಿನಿಧಿಸುತ್ತದೆ. ಆತನು ನಮಗೋಸ್ಕರ ತನ್ನ ಮಾಂಸಿಕ ಶರೀರವನ್ನು ತ್ಯಾಗ ಮಾಡಿರದಿದ್ದರೆ, ನಾವು ಎಂದಿಗೂ ಶಾಶ್ವತ ಜೀವನವನ್ನು ಹೊಂದಲು ಸಾಧ್ಯವಿರುತ್ತಿರಲಿಲ್ಲ. ಹಾಗಾಗಿ, ಆತನು ಹೇಳಿದಂತೆ, *“ನೀವು ಮನುಷ್ಯಕುಮಾರನ ಮಾಂಸವನ್ನು ತಿಂದು ಆತನ ರಕ್ತವನ್ನು ಕುಡಿಯದ ಹೊರತು ನಿಮ್ಮಳಗೆ ಜೀವವಿಲ್ಲ.”* ***(ಯೋಹಾನ 6:53)***

ಹೀಗೆ ಯೇಸುವಿನ ದೇಹವನ್ನು ಮುರಿಯುವುದು ಜೀವದ ರೊಟ್ಟಿಯನ್ನು ಒದಗಿಸುವುದಷ್ಟೇ ಅಲ್ಲ, ಅದನ್ನು ತಿಂದರೆ ಮನುಷ್ಯನು ಎಂದಿಗೂ ಸಾಯುವುದಿಲ್ಲ. ಆದರೆ ಇದು ಜೀವನಕ್ಕೆ ಕರೆದೊಯ್ಯುವ “ಇಕ್ಕಟ್ಟಾದ ದಾರಿಯನ್ನು” ತೆರೆಯಿತು, ಮುರಿದು ಸತ್ಯವನ್ನು ತೆರೆದಿಟ್ಟಿತು ಮತ್ತು ಆತ್ಮಿಕ ಆಹಾರಕ್ಕೆ ಪ್ರವೇಶವನ್ನು ನೀಡಿತು. ಇದು ಜೀವನಕ್ಕೆ ನಡೆಸುವ ಇಕ್ಕಟ್ಟಾದ ದಾರಿಯಲ್ಲಿ ನಡೆಯಲು ಸಹಾಯ ಮಾಡುತ್ತದೆ. ಹೀಗೆ ಮುರಿದ ರೊಟ್ಟಿಯು, *“ನಾನೇ ಮಾರ್ಗವೂ ಸತ್ಯವೂ ಜೀವವೂ ಆಗಿದ್ದೇನೆ; ನನ್ನ ಮೂಲಕವಾಗಿ ಹೊರತು ಯಾರೂ ತಂದೆಯ ಬಳಿಗೆ ಬರುವದಿಲ್ಲ”* ***(ಯೋಹಾನ 14:6)*** ಎಂದು ಹೇಳಿದಾತನ ಮುರಿಯುವಿಕೆಯನ್ನು ಸೂಕ್ತವಾಗಿ ಪ್ರತಿನಿಧಿಸುತ್ತದೆ ಎಂದು ನಾವು ನೋಡುತ್ತೇವೆ.

ಆದ್ದರಿಂದ, ಆತನು ಸಾಯದಿದ್ದರೆ, ಮುರಿಯಲ್ಪಟ್ಟಿರದಿದ್ದರೆ ನಾವು ಎಂದಿಗೂ ತಂದೆಯ ಬಳಿಗೆ ಬರಲು ಸಾಧ್ಯವಾಗುತ್ತಿರಲಿಲ್ಲ ಮತ್ತು ಆದಾಮನ ಪಾಪದ ಶಾಪದಲ್ಲಿ ಮತ್ತು ಮರಣದ ಬಂಧನದಲ್ಲಿ ಶಾಶ್ವತವಾಗಿ ಉಳಿಯುತ್ತಿದ್ದೆವು ಎಂದು ನಾವು ಮುರಿದ ರೊಟ್ಟಿಯನ್ನು ತಿನ್ನುವಾಗ ಅರಿತುಕೊಳ್ಳಬೇಕು.

ಮತ್ತೊಂದು ಆಲೋಚನೆಯೆಂದರೆ, ಬಳಸಿದ ಆ ರೊಟ್ಟಿಯೂ ಹುಳಿಯಿಲ್ಲದದ್ದಾಗಿತ್ತು. ಹುಳಿ ಎಂದರೆ ಭ್ರಷ್ಟಾಚಾರ, ಕೊಳೆಯುವಿಕೆಯ ಒಂದು ಅಂಶ; ಆದ್ದರಿಂದ ಪಾಪದ ಒಂದು ಛಾಯೆಯಾಗಿದೆ ಮತ್ತು ಪಾಪವು ಕೊಳೆತ ಮತ್ತು ಮರಣವು ಸಂಭವಿಸುವ ರೀತಿಯಲ್ಲಿ ಇಡೀ ಮಾನವಕುಲದಲ್ಲಿ ಕೆಲಸ ಮಾಡುತ್ತದೆ. ಆದ್ದರಿಂದ, ನಮ್ಮ ಕರ್ತನಾದ ಯೇಸು ಪಾಪದಿಂದ ಮುಕ್ತನಾಗಿದ್ದನು, ಕಳಂಕ ಅಥವಾ ದೋಷವಿಲ್ಲದ ಕುರಿಮರಿ, “ಪರಿಶುದ್ಧನು, ಕೆಡಕುತನವಿಲ್ಲದ, ನಿಷ್ಕಳಂಕನು” ಎಂದು ಈ ಸಂಕೇತವು ಘೋಷಿಸುತ್ತದೆ.

ಯೇಸು ಆದಾಮನ ಸಂತತಿಯವನಾಗಿದ್ದರೆ, ಆತನು ಲೋಕದ ತಂದೆಯಿಂದ ಸಾಮಾನ್ಯ ರೀತಿಯಲ್ಲಿ ಜೀವನವನ್ನು ಪಡೆದಿದ್ದರೆ, ಆತನು ಸಹ ಇತರ ಎಲ್ಲಾ ಮನುಷ್ಯರಂತೆ ಆದಾಮನ ಪಾಪದಿಂದ ಹುಳಿಯಾಗುತ್ತಿದ್ದನು. ಆದರೆ ಆತನ ಜೀವನವು ಉನ್ನತವಾದ, ಪರಲೋಕದ ಸ್ವಭಾವದಿಂದ ಕಳಂಕವಿಲ್ಲದೆ ಬಂದು, ಭೂಮಿಯ ಪರಿಸ್ಥಿತಿಗಳಿಗೆ ಬದಲಾಯಿತು. ಆದ್ದರಿಂದ ಯೇಸುವನ್ನು *"ಪರಲೋಕದಿಂದ ಇಳಿದು ಬಂದ ರೊಟ್ಟಿ"* ಎಂದು ಕರೆಯಲಾಗುತ್ತದೆ. *(ಯೋಹಾನ 6:41)* ಹಾಗಾಗಿ, ದೇವರು ಒದಗಿಸಿರುವ ಶುದ್ಧ, ಹುಳಿಯಿಲ್ಲದ, ನಿಷ್ಕಳಂಕವಾದ ರೊಟ್ಟಿಯನ್ನು ನಾವು ಮೆಚ್ಚೋಣ ಮತ್ತು ಆತನನ್ನು ತಿನ್ನೋಣ. ಆತನನ್ನು ತಿನ್ನುವುದು ಎಂದರೆ ಸತ್ಯವನ್ನು ತಿಂದು ಅದನ್ನು ಜೀರ್ಣಿಸಿಕೊಳ್ಳುವುದು ಮತ್ತು ವಿಶೇಷವಾಗಿ ನಂಬಿಕೆಯ ಮೂಲಕ ಆತನ ನೀತಿವಂತಿಕೆಯನ್ನು ನಮಗಾಗಿ ಸ್ವಾಧೀನಪಡಿಸಿಕೊಳ್ಳುವುದು. **[R1637: ಪುಟ 99]** ಅದರ ಮೂಲಕ ನಾವು ಯೇಸುವೇ ಮಾರ್ಗ ಮತ್ತು ಜೀವನವೆಂದು ಅರಿತುಕೊಳ್ಳುತ್ತೇವೆ.

ದೈವಿಕ ಪ್ರಕಟಣೆಯ ಮೂಲಕ, ಅಪೋಸ್ತಲನು ನಮಗೆ ರೊಟ್ಟಿಯ ಮತ್ತಷ್ಟು ಅರ್ಥವನ್ನು ತಿಳಿಸುತ್ತಾನೆ. ಆ ರೊಟ್ಟಿಯು ನಮ್ಮ ಕರ್ತನಾದ ಯೇಸುವನ್ನು ವೈಯಕ್ತಿಕವಾಗಿ ಪ್ರತಿನಿಧಿಸುವುದಲ್ಲದೆ, ನಾವು ಆತನಲ್ಲಿ ಪಾಲುಗಾರರಾದ ನಂತರ (ಆತನ ನೀತಿಯನ್ನು ಹೊಂದುವ ಮೂಲಕ ನಾವು ನೀತಿವಂತರೆಂದು ನಿರ್ಣಯಿಸಲ್ಪಟ್ಟ ನಂತರ), ಒಡಂಬಡಿಕೆಯ ಮೂಲಕ, ಮುರಿದ ಆ ಒಂದೇ ರೊಟ್ಟಿಯ ಭಾಗವಾಗಿ ಆತನೊಂದಿಗೆ ಒಂದಾಗುತ್ತೇವೆ. ಆದ್ದರಿಂದ ಲೋಕಕ್ಕೆ ಆಹಾರವಾಗುತ್ತೇವೆ. *(1 ಕೊರಿಂಥ 10:16)* ಸಮರ್ಥಿಸಲ್ಪಟ್ಟ ವಿಶ್ವಾಸಿಗಳಾಗಿ ನಾವು ಕ್ರಿಸ್ತನ ಬಾಧೆಗಳು ಮತ್ತು ಮರಣದಲ್ಲಿ ಈಗ ಹಂಚಿಕೊಳ್ಳಲು ನಮಗೆ ಸವಲತ್ತು ದೊರೆತಿದೆ ಎಂಬ ಚಿಂತನೆಯನ್ನು ಸೂಚಿಸುತ್ತದೆ. ಈ ಸ್ಥಿತಿಯ ಮೇಲೆ ನಾವು ಭವಿಷ್ಯದ ಮಹಿಮೆಗಳ ಸಹ ಬಾಧ್ಯರುಗಳಾಗಿ ಮತ್ತು ಭೂಮಿಯ ಎಲ್ಲಾ ಕುಟುಂಬಗಳಿಗೆ ಆಶೀರ್ವಾದ ಮತ್ತು ಜೀವ ನೀಡುವ ಮಹಾ ಕೆಲಸದಲ್ಲಿ ಸಹಚರರಾಗಬಹುದು. **[R1637: ಪುಟ 100]**

ಇದೇ ಆಲೋಚನೆಯನ್ನು ಅಪೋಸ್ತಲರು ಅನೇಕ ಬಾರಿ ವಿವಿಧ ಚಿತ್ರಣಗಳ ಮೂಲಕ ವ್ಯಕ್ತಪಡಿಸಿದ್ದಾರೆ. ಆದರೆ ಅವುಗಳಲ್ಲಿ ಯಾವುದೂ ಇದಕ್ಕಿಂತ ಹೆಚ್ಚು ಶಕ್ತಿದಾಯಕವಾಗಿಲ್ಲ. ಅದು ಏನೆಂದರೆ, ಸಭೆ ಒಟ್ಟಾರೆಯಾಗಿ ಈಗ ಮುರಿದುಹೋಗುತ್ತಿರುವ "*ಒಂದು ರೊಟ್ಟಿ*". ಇದು ನಮ್ಮ ತಲೆಯಾದ ಕ್ರಿಸ್ತನೊಂದಿಗೆ ನಮ್ಮ ಏಕತೆ ಮತ್ತು ಅನ್ಯೋನ್ಯತೆಯ ಅತ್ಯಂತ ಸ್ಪಷ್ಟ ಮತ್ತು ಬಲವಾದ ವಿವರಣೆಯನ್ನು ಒದಗಿಸುತ್ತದೆ.

ನಾವು ಉಲ್ಲೇಖಿಸುತ್ತೇವೆ, *"ರೊಟ್ಟಿಯು ಒಂದೇ ಆಗಿರುವುದರಿಂದ ಅನೇಕರಾಗಿರುವ ನಾವು ಒಂದೇ ದೇಹದಂತಿದ್ದೇವೆ; ಯಾಕೆಂದರೆ ನಾವೆಲ್ಲರೂ ಆ ಒಂದೇ ರೊಟ್ಟಿಯಲ್ಲಿ ಪಾಲು ತೆಗೆದುಕೊಂಡು ತಿನ್ನುತ್ತೇವೆ." "ನಾವು ರೊಟ್ಟಿಯನ್ನು ಮುರಿದು ತಿನ್ನುವುದು ಕ್ರಿಸ್ತನ ದೇಹದಲ್ಲಿ ಪಾಲುಗಾರರಾಗಿದ್ದೇವೆ ಎಂಬುದನ್ನು ಸೂಚಿಸುತ್ತದಲ್ಲವೇ ?"* *(1 ಕೊರಿಂಥ 10:16,17 – ಡೈಗ್ಲಾಟ್ ಅನುವಾದದಲ್ಲಿ ನೋಡಿ).*

"ದ್ರಾಕ್ಷಾರಸವು" ನಮ್ಮ ಕರ್ತನು ನೀಡಿದ ತ್ಯಾಗದ ಜೀವನವನ್ನು ಪ್ರತಿನಿಧಿಸುತ್ತದೆ. *"ಇದು ನನ್ನ ರಕ್ತ(ಮರಣದಲ್ಲಿ ತ್ಯಜಿಸಲ್ಪಟ್ಟ ಜೀವನದ ಸಂಕೇತ), ಇದು ಒಡಂಬಡಿಕೆಯ ರಕ್ತ, ಇದು ಪಾಪಗಳ ಕ್ಷಮೆಗಾಗಿ ಬಹುಜನರಿಗೋಸ್ಕರ ಸುರಿಸಲ್ಪಡುವ ರಕ್ತ". "ನೀವೆಲ್ಲರೂ ಇದರಲ್ಲಿರುವದನ್ನು ಕುಡಿಯಿರಿ"* *(ಮತ್ತಾಯ. 26:27,28).*

ಪಾಪದಿಂದ ಜೀವನವನ್ನು ಕಳೆದುಕೊಂಡ ಆದಾಮನ ಸಂತತಿಯವರಿಗೆ ತನ್ನ ಜೀವನವನ್ನು ಈಡುಬಲಿಯಾಗಿ ಕೊಡುವುದರ ಮೂಲಕ, ಹೊಸ ಒಡಂಬಡಿಕೆಯ ಅಡಿಯಲ್ಲಿ ನಂಬಿಕೆ ಮತ್ತು ವಿಧೇಯತೆಯ ಮೂಲಕ ಮನುಷ್ಯರಿಗೆ ಜೀವಿಸುವ ಹಕ್ಕು ದೊರೆಯಿತು *(ರೋಮ. 5:18,19)*. ಯೇಸು ಸುರಿಸಿದ

ರಕ್ತವು *"ಎಲ್ಲರಿಗೋಸ್ಕರ ವಿಮೋಚನಯ ಕ್ರಯವಾಗಿತ್ತು"* (ಎಲ್ಲರಿಗೂ ಈಡುಬಲಿಯಾಗಿತ್ತು). ಅದನ್ನು ನಮ್ಮ ವಿಮೋಚಕನೇ ಸ್ವತಃ ಎಲ್ಲರಿಗೂ ಕೊಟ್ಟನು. ಆದರೆ ಶಿಷ್ಯರಿಗೆ ಪಾತ್ರೆಯನ್ನು ಕೊಟ್ಟು, ಅದನ್ನು ಕುಡಿಯಲು ಹೇಳುವ ಆತನ ಕ್ರಿಯೆಯು, ಆತನು ಅನುಭವಿಸಿದ ಬಾಧೆಗಳಲ್ಲಿ ಪಾಲುಗಾರರಾಗಲು ಅಥವಾ ಪೌಲನು ವ್ಯಕ್ತಪಡಿಸಿದಂತೆ, *"ಕ್ರಿಸ್ತನ ಸಂಕಟಗಳಲ್ಲಿ ಇನ್ನು ಉಳಿದಿದ್ದನ್ನು ಅನುಭವಿಸಲು"* ಆಹ್ವಾನವಾಗಿತ್ತು. ***(ಕೊಲೊ. 1:24.)*** ನಾವು ನಂಬಿಕೆಯಿಂದ ನೀತಿವಂತರೆಂದು ನಿರ್ಣಯಿಸಲ್ಪಟ್ಟ ನಂತರ, ಸ್ವಇಚ್ಛೆಯಿಂದ ಕ್ರಿಸ್ತನ ಬಾಧೆಗಳಲ್ಲಿ ಪಾಲುಗಾರರಾದರೆ, ಆತನಲ್ಲಿ ಸಮರ್ಥಿಸಿಕೊಳ್ಳುವುದರ ಮೂಲಕ, ನಾವು ಆತನ ತ್ಯಾಗದಲ್ಲಿ ಭಾಗವಹಿಸಿದ್ದೇವೆ ಎಂದು ನಮಗೆ ಎಣಿಸಲ್ಪಡುತ್ತದೆ ಎಂಬುದು ನಮಗೆ ನೀಡಲಾದ ಕೊಡುಗೆಯಾಗಿತ್ತು. *"ನಾವು ದೇವರ ಸ್ತೋತ್ರಮಾಡಿ ಪಾತ್ರೆಯಲ್ಲಿ ಪಾನಮಾಡುವುದು ಕ್ರಿಸ್ತನ ರಕ್ತದಲ್ಲಿ ಪಾಲುಗಾರರಾಗಿದ್ದೇವೆ ಎಂಬುದನ್ನು ಸೂಚಿಸುತ್ತದಲ್ಲವೇ?"* ***(1 ಕೊರಿಂಥ. 10:16 - ಡೈಗ್ಲಾಟ್ ಅನುವಾದದಲ್ಲಿ ನೋಡಿ).*** ನಾವೆಲ್ಲರೂ "ಪಾತ್ರೆ"ಯ ಮೌಲ್ಯವನ್ನು ಅರಿತುಕೊಂಡು, ಕ್ರಿಸ್ತನೊಂದಿಗೆ ಆತನ ಬಾಧೆಗಳು ಮತ್ತು ಅವಮಾನದ "ಪಾತ್ರೆ"ಯನ್ನು ಹಂಚಿಕೊಳ್ಳುವ ಅವಕಾಶಕ್ಕಾಗಿ ದೇವರಿಗೆ ಕೃತಜ್ಞತೆಯೊಂದಿಗೆ ಸ್ತೋತ್ರ ಸಲ್ಲಿಸುವವರು ಯಾರು ಆಗಿರಲಿ, ಅಂತಹವರೆಲ್ಲರೂ ಆತನೊಂದಿಗೆ ಮಹಿಮೆಯನ್ನು ಹಂಚಿಕೊಳ್ಳುವರು ಎಂಬ ಭರವಸೆಯನ್ನು ಪಡೆಯಬಹುದು. ***(ರೋಮ. 8:17).***

ನಮ್ಮ ಕರ್ತನು ಈ ಮಹತ್ವವನ್ನು "ಪಾತ್ರೆಗೆ" ಸೂಚಿಸುತ್ತಾ, ಇದು ಆತನ ಅವಮಾನದಲ್ಲಿ ನಮ್ಮ ಭಾಗವಹಿಸುವಿಕೆ , ಆತನ ತ್ಯಾಗದಲ್ಲಿ ನಮ್ಮ ಪಾಲು ಮತ್ತು ನಮ್ಮ ಮಾನವೀಯತೆಯ ಮರಣವನ್ನು ಸೂಚಿಸುತ್ತದೆ. ಉದಾಹರಣೆಗೆ, ಇಬ್ಬರು ಶಿಷ್ಯರು ಆತನ ಸಿಂಹಾಸನದಲ್ಲಿ ಭವಿಷ್ಯದ ಮಹಿಮೆಯ ವಾಗ್ದಾನವನ್ನು ಕೇಳಿದಾಗ, ಆತನು ಅವರಿಗೆ ಹೀಗೆ ಉತ್ತರಿಸಿದನು, *"ನೀವು ಬೇಡಿಕೊಂಡದ್ದು ಏನೆಂದು ನಿಮಗೆ ತಿಳಿಯದು. ನಾನು ಕುಡಿಯಬೇಕಾಗಿರುವ ಪಾತ್ರೆಯಲ್ಲಿ ನೀವು ಕುಡಿಯುವದು ನಿಮ್ಮಿಂದಾದೀತೇ?"*. ಅವರ ಹೃದಯ ಪೂರ್ವಕ ಹೇಳಿಕೆಗೆ ಆತನು, *"ನೀವು ಖಂಡಿತವಾಗಿಯೂ ನನ್ನ ಪಾತ್ರೆಯಲ್ಲಿ ಕುಡಿಯುತ್ತೀರಿ"* ಎಂದು ಉತ್ತರಿಸಿದನು. ದ್ರಾಕ್ಷಾರಸವು, ರಕ್ತ ಬರುವವರೆಗೆ ದ್ರಾಕ್ಷಿಯನ್ನು ಜಜ್ಜಲ್ಪಡುವುದರ ಬಗ್ಗೆ ಮಾತ್ರ ಮಾತನಾಡುವುದಿಲ್ಲ, ಬದಲಿಗೆ ನಂತರದ ವಿಶ್ರಾಂತಿಯ ಬಗ್ಗೆಯೂ ಹೇಳುತ್ತದೆ. ಆದ್ದರಿಂದ ಈಗ "ಕ್ರಿಸ್ತನ ಸಂಕಟಗಳನ್ನು" ಹಂಚಿಕೊಳ್ಳುವ ನಾವು, ಶೀಘ್ರದಲ್ಲೇ ಆತನೊಂದಿಗೆ ರಾಜ್ಯದಲ್ಲಿ ಹೊಸ ದ್ರಾಕ್ಷಾರಸವನ್ನು ಕುಡಿಯುವಾಗ ಆತನ ಮಹಿಮೆ, ಗೌರವ ಮತ್ತು ಅಮರತ್ವವನ್ನು ಹಂಚಿಕೊಳ್ಳುತ್ತೇವೆ.

ಆದುದರಿಂದ ಪ್ರಿಯರೇ, ಈ ತಿಂಗಳ 19ನೇ ತಾರೀಖಿನ ಸಂಜೆ ನಮ್ಮ ಕರ್ತನ ಮರಣವನ್ನು ಸ್ಮರಿಸುವಾಗ, ನಾವು ಏನನ್ನು ಮಾಡುತ್ತಿರುವೆವು ಎಂಬುದರ ಅರ್ಥವನ್ನು ನೆನಪಿಸಿಕೊಳ್ಳೋಣ ಮತ್ತು ಆತನ ಜೀವನದಿಂದ ಉತ್ತೇಜಿತರಾಗಿ, ಜೀವವುಳ್ಳ ರೊಟ್ಟಿಯಿಂದ ಬಲಗೊಂಡಾಗ, ನಾವು ಆತನ ಮರಣದಲ್ಲಿ ಆತನೊಂದಿಗೆ ಕುಡಿಯೋಣ ಮತ್ತು ಇತರರ ಆಹಾರಕ್ಕಾಗಿ ಆತನೊಂದಿಗೆ ಮುರಿಯಲ್ಪಡಲು ಎಂದಿಗಿಂತಲೂ ಹೆಚ್ಚು ದೃಢನಿಶ್ಚಯದಿಂದ ಹೊರಡೋಣ. *"ನಾವು ಆತನೊಡನೆ ಸತ್ತಿದ್ದರೆ ಆತನೊಡನೆ ಸಹ ಜೀವಿಸುವೆವು, ನಾವು ಭಾದೆಪಡುವವರಾಗಿದ್ದರೆ ಆತನೊಂದಿಗೆ ನಾವು ಸಹ ಆಳುವೆವು"* ***(2 ತಿಮೊ. 2:11, 12).***

## WHO MAY PARTAKE
## ಯಾರು ಪಾಲುಗೊಳ್ಳಬಹುದು?

ಪ್ರತಿಯೊಬ್ಬನಿಗೂ ಈ ರೊಟ್ಟಿ ಮತ್ತು ಪಾತ್ರೆಯಲ್ಲಿ ಪಾಲುಗೊಳ್ಳುವ ಹಕ್ಕು ತನ್ನಿಗಿದೆಯೋ ಇಲ್ಲವೋ ಎಂಬುದನ್ನು ಸ್ವತಃ ನಿರ್ಧರಿಸಿಕೊಳ್ಳುವ ಸ್ವಾತಂತ್ರ್ಯವಿದೆ. ಅವನು ಶಿಷ್ಯನೆಂದು ಹೇಳಿಕೊಂಡು, ಪಾಪಗಳ ಕ್ಷಮೆಗಾಗಿ, ಹೊಸ ಒಡಂಬಡಿಕೆಯ ರಕ್ತದಲ್ಲಿ

ನಂಬಿಕೆಯಿಟ್ಟು ಮತ್ತು ಕರ್ತನ ಸೇವೆಗೆ ಅರ್ಪಿತನಾಗಿದ್ದರೆ, ಅವನ ಸಹ ಶಿಷ್ಯರು ಅವನ ಹೃದಯವನ್ನು ನಿರ್ಣಯಿಸಲು ಸಾಧ್ಯವಿಲ್ಲ. ಆ ಹೃದಯವನ್ನು ನಿಶ್ಚಿತವಾಗಿ ಓದಿ ತೀರ್ಮಾನಿಸಬಲ್ಲವರು ದೇವರೊಬ್ಬನೇ.

ಕ್ರಿಸ್ತನ ಮರಣದ ಸಂಕೇತವಾಗಿ ಇವುಗಳನ್ನು ಬಳಸಲಾಗುತ್ತಿರುವುದರಿಂದ, ಈ ಸಂಕೇತದಲ್ಲಿ ಅಜ್ಞಾನದಿಂದ, ಅಯೋಗ್ಯವಾಗಿ, ಅನುಚಿತವಾಗಿ ಅವುಗಳಲ್ಲಿ "ಕರ್ತನ ದೇಹ" ವನ್ನು ನಮ್ಮ ವಿಮೋಚನಾ ಮೌಲ್ಯವೆಂದು ಅರಿತುಕೊಳ್ಳದೆ ಪಾಲ್ಗೊಳ್ಳುವುದರ ಬಗ್ಗೆ ಎಲ್ಲರೂ ಎಚ್ಚರದಿಂದಿರಬೇಕು. ಏಕೆಂದರೆ ಅಂತಹ ಸಂದರ್ಭದಲ್ಲಿ ಪಾಲ್ಗೊಳ್ಳುವವರು ಕರ್ತನನ್ನು ಕೊಲೆ ಮಾಡಿದವರಲ್ಲಿ ಒಬ್ಬರಾಗಿರುತ್ತಾರೆ ಮತ್ತು ಸಂಕೇತವಾಗಿ, *"ಅವನು ಕರ್ತನ ದೇಹಕ್ಕೂ ರಕ್ತಕ್ಕೂ ದ್ರೋಹಮಾಡಿದವನಾಗಿರುವನು". (1 ಕೊರಿಂಥ 11:27)*

*"ಆದರೆ ಪ್ರತಿಮನುಷ್ಯನು ತನ್ನನ್ನು ಪರೀಕ್ಷಿಸಿಕೊಳ್ಳಲಿ".* ಸಂಕೇತಗಳಲ್ಲಿ ಪಾಲ್ಗೊಳ್ಳುವ ಮೂಲಕ ಅವುಗಳನ್ನು ತನ್ನ ಜೀವನ ಮತ್ತು ಸವಲತ್ತುಗಳ ವಿಮೋಚನಾ ಮೌಲ್ಯವೆಂದು ಅವನು ಅರಿತುಕೊಳ್ಳುವಂತೆ ನೋಡಿಕೊಳ್ಳಲಿ ಮತ್ತು ಇದಲ್ಲದೆ ಅವುಗಳಲ್ಲಿ ಪಾಲ್ಗೊಳ್ಳುವ ಮೂಲಕ ಅವನು ಕ್ರಿಸ್ತನ ಬಾಧೆಗಳಲ್ಲಿ ಪಾಲ್ಗೊಳ್ಳಲು ಮತ್ತು ಇತರರಿಗಾಗಿ ಮುರಿಯಲ್ಪಡಲು ತನ್ನನ್ನು ತಾನು ಪ್ರತಿಷ್ಠೆ ಮಾಡುತ್ತಿದ್ದಾನೆ ಎಂದು ಅವನು ನೋಡಿಕೊಳ್ಳಲಿ. ಇಲ್ಲದಿದ್ದರೆ, ಕ್ರಿಸ್ತನ ಸ್ಮರಣಾರ್ಥದ ಕ್ರಿಯೆಯು **[R1637: ಪುಟ 101]** ಅವನ ಸ್ವಂತ ಮನಸ್ಸಾಕ್ಷಿಯ ಮುಂದೆ ಅವನ ದೈನಂದಿನ ಜೀವನಕ್ಕೆ ನ್ಯಾಯತೀರ್ಪುವಾಗುತ್ತದೆ - *"ನ್ಯಾಯತೀರ್ಪಿಗೊಳಗಾಗುವನು." (1 ಕೊರಿಂ. 11:28,29)*.

ಈ ಸ್ಮರಣೆಯ ಸರಿಯಾದ ಮೆಚ್ಚುಗೆಯ ಕೊರತೆಯಿಂದಾಗಿ, ಇದು ನಮ್ಮ ನೀತಿವಂತಿಕೆ ಮಾತ್ರವಲ್ಲದೆ, ಕ್ರಿಸ್ತನ ಬಾಧೆಗಳು ಮತ್ತು ಮರಣದಲ್ಲಿ ಹಂಚಿಕೊಳ್ಳಲು ನಮ್ಮ ಒಡಂಬಡಿಕೆಯನ್ನು ಸೂಚಿಸುತ್ತದೆ. *"ನಿಮ್ಮಲ್ಲಿ ಬಹು ಮಂದಿ ಬಲಹೀನರೂ ರೋಗಿಗಳೂ ಆಗಿದ್ದಾರೆ; ಅನೇಕರು ನಿದ್ರಿಸುತ್ತಾರೆ." ಎಂದು ಅಪೊಸ್ತಲರು ಹೇಳುತ್ತಾರೆ. (1 ಕೊರಿಂಥ 11:30)* ಈ ಹೇಳಿಕೆಯ ಸತ್ಯತೆ ಸ್ಪಷ್ಟವಾಗಿದೆ. ಈ ಭೋಜನದಲ್ಲಿ ಪ್ರತಿನಿಧಿಸಲ್ಪಟ್ಟಿರುವ ಸತ್ಯಗಳನ್ನು ಮೆಚ್ಚಿಕೊಳ್ಳಲು ವಿಫಲರಾಗುವುದು, ಮತ್ತು ಅವುಗಳ ಅರ್ಥವನ್ನು ಕಳೆದುಕೊಳ್ಳುವುದು, ನಾಮಮಾತ್ರ ಸಭೆಯಲ್ಲಿ ಕಾಣುವ ಬಲಹೀನತೆ, ಆತ್ಮಿಕ ಅನಾರೋಗ್ಯ ಮತ್ತು ನಿದ್ರಾವಸ್ಥೆಗೆ ಕಾರಣವಾಗಿದೆ. ಈಡುಬಲಿಯ ತ್ಯಾಗದ ಸ್ಪಷ್ಟ ಮೆಚ್ಚುಗೆ ಮತ್ತು ಲೋಕಕ್ಕಾಗಿ ಅವರ ಕಷ್ಟಗಳು ಮತ್ತು ತ್ಯಾಗಗಳಲ್ಲಿ ಅವರ ಪಾಲನ್ನು ಹೊಂದಿರುವಷ್ಟು, ಪರಿಶುದ್ಧರನ್ನು ಸಂಪೂರ್ಣವಾಗಿ ಜಾಗೃತಗೊಳಿಸುವ ಮತ್ತು ಬಲಪಡಿಸುವ ಅಂಶ ಯಾವುದೂ ಇಲ್ಲ. *"ಪ್ರತಿಮನುಷ್ಯನು ತನ್ನನ್ನು ಪರೀಕ್ಷಿಸಿಕೊಂಡವನಾಗಿ ಆ ರೊಟ್ಟಿಯಲ್ಲಿ ತಕ್ಕೊಂಡು ತಿನ್ನಲಿ, ಆ ಪಾತ್ರೆಯಲ್ಲಿ ಕುಡಿಯಲಿ."*

[R5050: ಪುಟ 198]

# "ಹುಳಿಯ ಸಾಮ್ಯ"

***PARABLE OF THE LEAVEN***

---

ಇಡೀ ಸತ್ಯವೇದ ವಾಕ್ಯಗಳಲ್ಲಿ ಹುಳಿಯನ್ನು ಪಾಪದ ಸಂಕೇತವಾಗಿ ಬಳಸಲಾಗಿದೆ. ಹಾಗೆ ಯೇಸುವಿನ ಪರಿಶುದ್ಧತೆಯನ್ನು *"ಪರಲೋಕದಿಂದ ಇಳಿದುಬರುವ ರೊಟ್ಟಿ"* ಎಂದು ಸಂಕೇತಿಸಲಾಗಿದೆ; ಯೆಹೂದ್ಯರಿಗೆ ಹುಳಿಯಿಲ್ಲದ ರೊಟ್ಟಿಯನ್ನು ಬಳಸುವಂತೆ ನಿರ್ದೇಶಿಸಲಾಯಿತು. ಮತ್ತೊಮ್ಮೆ, ಅವರ ವಾರ್ಷಿಕ ಪಸ್ಕ ಹಬ್ಬದ ಸಮಯದಲ್ಲಿ, ಯೆಹೂದ್ಯರು ತಮ್ಮ ಮನೆಗಳಲ್ಲಿ ಇರುವ ಹುಳಿಯನ್ನು ಸಂಪೂರ್ಣವಾಗಿ ಶುದ್ಧೀಕರಿಸಿ, ಅದನ್ನು ಸುಟ್ಟುಹಾಕಿ ನಾಶಮಾಡಬೇಕೆಂದು ಅವರಿಗೆ ಆಜ್ಞಾಪಿಸಲಾಯಿತು. ಇಲ್ಲಿಯೂ ಸಹ, ಹುಳಿ ಎಂಬುದು ಪಾಪ ಮತ್ತು ಭ್ರಷ್ಟಾಚಾರದ ಸಂಕೇತವಾಗಿತ್ತು. ಅಪೋಸ್ತಲ ಪೌಲನು ಈ ವಿಷಯವನ್ನು ಉಲ್ಲೇಖಿಸಿ ಸಭೆಗೆ ಬರೆಯುತ್ತಾನೆ: *"ಆದದರಿಂದ ನೀವು ಹುಳಿ ಇಲ್ಲದವರಾದ ಕಾರಣ ಹೊಸ ಕಣಿಕವಾಗಿರುವಂತೆ ಆ ಹಳೇ ಹುಳಿಯನ್ನು [ಪಾಪ, ದುರ್ಮಾರ್ಗತ್ವ, ದ್ವೇಷ, ಜಗಳ, ಇತ್ಯಾದಿ.] ತೆಗೆದುಹಾಕಿರಿ"* ***(1 ಕೊರಿಂಥ 5:7)*** - ಇದರಿಂದ ನೀವು ಕ್ರಿಸ್ತನೊಂದಿಗೆ, ಹುಳಿಯಿಲ್ಲದ ಒಂದೇ ರೊಟ್ಟಿಯಾಗಬಹುದು. ಈ ರೊಟ್ಟಿಯನ್ನು ಕುರಿತು ಆತನು ಮತ್ತೊಮ್ಮೆ ಘೋಷಿಸುತ್ತಾನೆ: *"ರೊಟ್ಟಿಯು ಒಂದೇಯಾಗಿರುವದರಿಂದ ಅನೇಕರಾಗಿರುವ ನಾವು ಒಂದೇ ದೇಹದಂತಿದ್ದೇವೆ; ಯಾಕಂದರೆ ನಾವೆಲ್ಲರೂ ಆ ಒಂದೇ ರೊಟ್ಟಿಯಲ್ಲಿ ಪಾಲುತಕ್ಕೊಂಡು ತಿನ್ನುತ್ತೇವೆ."* - ***1 ಕೊರಿಂಥ 10:17***.

ಹಳೆಯ ಒಡಂಬಡಿಕೆಯ ಯಜ್ಞಗಳ ಒಂದರಲ್ಲಿ, ರೊಟ್ಟಿಯನ್ನು ಹುಳಿಯೊಡನೆ ಸುಡಬೇಕಾಗಿತ್ತು ಎಂಬುದು ನಿಜ ***(ಯಾಜಕಕಾಂಡ 23:17)***. ಆದರೆ, ಇದು ನಮ್ಮನ್ನು ಅಂದರೆ, ಸಭೆಯನ್ನು ಸಂಕೇತಿಸುವ ಅಥವಾ ಪ್ರತಿನಿಧಿಸುವ ಉದ್ದೇಶಕ್ಕಾಗಿ ನಾವು ಸಹ ಸ್ವಾಭಾವಿಕವಾಗಿ ಪಾಪಿಗಳು, ಇತರರಂತೆ ದೇವರ ಕೋಪದ ಮಕ್ಕಳು ಎಂಬ ಅಂಶಕ್ಕಾಗಿ, ಸುಡುವಿಕೆಯು ಹುಳಿಯ ಭ್ರಷ್ಟಗೊಳಿಸುವ ಪ್ರಭಾವವನ್ನು ಬಂಧಿಸುತ್ತದೆ ಎಂದು ನಾವು ನಂಬುತ್ತೇವೆ. ಈ ಸುಡುವಿಕೆಯು ನಮ್ಮಲ್ಲಿ ಪಾಪಮಯ ಮತ್ತು ಭ್ರಷ್ಟ ಸ್ವಭಾವಗಳು ಸಂಪೂರ್ಣವಾಗಿ ನಾಶವಾಗುವಂತೆ, ಸಭೆಯು ಅನುಭವಿಸಬೇಕಾದ ಅನುಭವಗಳನ್ನು ಸಾಂಕೇತಿಕವಾಗಿ ತಿಳಿಸಲಾಗಿದೆ.

ಈ ಸಾಮ್ಯದಲ್ಲಿ ನಮ್ಮ ಕರ್ತನು, ಕುಟುಂಬದೊಂದಿಗೆ ಹಿಟ್ಟಿನಲ್ಲಿ ಹುಳಿಯನ್ನು ಬೆರೆಸಿ ಬೇಯಿಸುವ ಒಬ್ಬ ಹೆಂಗಸನ್ನು ಪ್ರತಿನಿಧಿಸುತ್ತಾನೆ, ಇದರ ಪರಿಣಾಮವಾಗಿ ಇಡೀ ಹಿಟ್ಟು ಹುಳಿಯಾಯಿತು. ಆದುದರಿಂದ, ಕುಟುಂಬದ ಯಾರಾದರೂ ಶುದ್ಧವಾದ, ಹುಳಿಯಿಲ್ಲದ ರೊಟ್ಟಿಯನ್ನು ಬಯಸಿದರೂ, ಅದು ಸಿಗುವುದಿಲ್ಲ, ಏಕೆಂದರೆ ಹುಳಿ ಸಂಪೂರ್ಣ ರೊಟ್ಟಿಯನ್ನು ಆವರಿಸಿ ಕೊಂಡಿರುತ್ತದೆ. ಇದು ಏನನ್ನು ಪ್ರತಿನಿಧಿಸುತ್ತದೆ? ಸತ್ಯ ವಾಕ್ಯದ ಸಂಕೇತದಲ್ಲಿ ಹೆಂಗಸು ಸಭೆ ವ್ಯವಸ್ಥೆಯನ್ನು ಪ್ರತಿನಿಧಿಸುತ್ತಾಳೆ ಎಂದು ನಾವು ಉತ್ತರಿಸುತ್ತೇವೆ. ಈ ಸಾಮ್ಯದಲ್ಲಿರುವ ಹೆಂಗಸು ಆರಂಭಿಕ ದಿನಗಳಲ್ಲಿ ಅಧಿಕಾರದಲ್ಲಿದ್ದ ಒಂದು ವ್ಯವಸ್ಥೆಯನ್ನು ಪ್ರತಿನಿಧಿಸುತ್ತಾಳೆ. ಆ ವ್ಯವಸ್ಥೆ, ಒಂದೇ ಮನೆಯವರಂತಿರುವ ಕ್ರಿಸ್ತನಲ್ಲಿ ನಂಬಿಕೆ ಹೊಂದಿದವರಿಗೆ ಕರ್ತನು ಒದಗಿಸಿದ ಶುದ್ಧವಾದ

ಆಹಾರವನ್ನು ಹೊಂದಿದ್ದಳು.

ಆ ಹೆಂಗಸು ಹುಳಿ, ದೋಷ ಮತ್ತು ಸುಳ್ಳು ಬೋಧನೆಗಳನ್ನು ಕರ್ತನು ನೀಡಿದ ಪ್ರತಿಯೊಂದು ಆಹಾರದೊಂದಿಗೆ ಬೆರೆಸಿದಳು. ಅದರಲ್ಲಿ ಯಾವುದೇ ಭಾಗವೂ ಕಲುಷಿತವಾಗದೆ ಉಳಿಯಲಿಲ್ಲ. ಇದರ ಫಲವಾಗಿ ಅಜೀರ್ಣ ಉಂಟಾಗಿದೆ. ಮೂಲತಃ ಶುದ್ಧವಾಗಿದ್ದ ದೇವರ ವಾಕ್ಯವು ಇನ್ನು ಸ್ವೀಕರಿಸಲ್ಪಡುವುದಿಲ್ಲ. ಹುಳಿ ಹರಡಿರುವುದರಿಂದ **[R5050: ಪುಟ 199]** ಇಂದು ಸಂಪೂರ್ಣ ಧಾರ್ಮಿಕ ಬೋಧನೆ ಕೊಳೆತದ್ದಾಗಿ ಮತ್ತು ಅಸಹ್ಯಕರವಾಗಿಯೂ ಪರಿಣಮಿಸಿದೆ.

ಈ ಸಾಮ್ಯವು ನಡೆದಿರುವ ವಿಷಯಗಳ ಪ್ರವಾದನೆಯಾಗಿತ್ತು. ಎಲ್ಲಾ ನಿಜವಾದ ಕ್ರೈಸ್ತರು ಕತ್ತಲೆ ಯುಗದ ನಂಬಿಕೆಗಳಿಂದ ಹಿಂದಿರುಗಿ ಯೇಸು, ಅಪೋಸ್ತಲರು ಮತ್ತು ಪ್ರವಾದಿಗಳ ಮಾತುಗಳನ್ನು ಕೇಳುವ ಸಮಯ ಬಂದಿದೆ. ಸತ್ಯವೇದದ ಬೋಧನೆಗಳನ್ನು ಮತ್ತೆ ಕಲಬೆರಕೆಯಿಲ್ಲದ ದೇವರ ವಾಕ್ಯವೆಂದು ಸೂಚಿಸುವವರಲ್ಲಿ *"ಹಿಸ್ ಹೊಲಿನೆಸ್, ದಿ ಪೋಪ್"* ಪ್ರಮುಖರಾಗಿದ್ದಾರೆ ಎಂಬುದನ್ನು ಗಮನಿಸಲು ನಾವು ಸಂತೋಷಪಡುತ್ತೇವೆ, ಅದು *"ರಕ್ಷಣೆಹೊಂದಿಸುವ ಜ್ಞಾನವನ್ನು ಕೊಡುವದಕ್ಕೆ ಶಕ್ತವಾಗಿವೆ" ಮತ್ತು ಅದರ ಮೂಲಕ ಮಾತ್ರ "ದೇವರ ಮನುಷ್ಯನು ಪ್ರವೀಣನಾಗಿ ಸಕಲಸತ್ಕಾರ್ಯಕ್ಕೆ ಸನ್ನದ್ಧನಾಗುವನು." - 2 ತಿಮೊಥೆಯನಿಗೆ 3:15-17*.

# “ನಮ್ಮ ವಾರ್ಷಿಕೋತ್ಸವದ ಭೋಜನ”

## *OUR ANNIVERSARY SUPPER*

ಏಪ್ರಿಲ್ 7 ರ ಸಂಜೆ, ನಮ್ಮ ಕರ್ತನ ಮುರಿದ ದೇಹ ಮತ್ತು ಸುರಿಸುವ ರಕ್ತದ ಸಂಕೇತವಾಗಿ ರೊಟ್ಟಿ ಮತ್ತು ದ್ರಾಕ್ಷರಸವನ್ನು ಸ್ಥಾಪಿಸಿದ ವಾರ್ಷಿಕೋತ್ಸವವನ್ನು, ಲೋಕದ ಪಾಪವನ್ನು ತೆಗೆದುಹಾಕುವ ದೇವರ ಕುರಿಮರಿಯಾಗಿ, ಪಿಟ್ಸ್‌ಬರ್ಗ್‌ನಲ್ಲಿರುವ(Pittsburgh) ಸಭೆ ಅದನ್ನು ಆಚರಿಸಿತು. ಸಭೆಯು ಸುಮಾರು ನೂರ ಐವತ್ತು ಸಂಖ್ಯೆಯನ್ನು ಹೊಂದಿತ್ತು ಮತ್ತು ಅದರಲ್ಲಿ ನೆರೆಹೊರೆಯ ಪಟ್ಟಣಗಳಿಂದ ಬಹುಶಃ ನಲವತ್ತು ಜನರು ಹಾಗೂ ನ್ಯೂಯಾರ್ಕ್(New York), ಓಹಿಯೋ(Ohio) ಮತ್ತು ವಿಸ್ಕಾನ್ಸಿನ್(Wisconsin) ಎಂಬ ದೂರದ ಸ್ಥಳಗಳಿಂದ ಬಂದ ಕೆಲವರು ಸೇರಿದ್ದರು. ಇದು ಎಂದಿನಂತೆ ಬಹಳ ಪ್ರಭಾವಶಾಲಿ ಸಂದರ್ಭವಾಗಿತ್ತು.

ಸಂಕೇತಗಳಾಗಿ ರೊಟ್ಟಿ ಮತ್ತು ದ್ರಾಕ್ಷರಸದ ಮಹತ್ವವನ್ನು ಹಾಗೂ ಅವು ಸೂಚಿಸುವ ನಮ್ಮ ವಿಮೋಚಕನ ಮುರಿದ ದೇಹ ಮತ್ತು ಸುರಿಸಿದ ರಕ್ತದ ಪ್ರಾಮುಖ್ಯತೆ ಮತ್ತು ಮೌಲ್ಯವನ್ನು ನಾವು ಸಂಕ್ಷಿಪ್ತವಾಗಿ ಮರುಪರಿಶೀಲಿಸಿದೆವು. ಮಾಂಸವನ್ನು ತಿನ್ನುವುದು ಎಂಬುದು ಪರಿಪೂರ್ಣ ಮಾನವೀಯತೆಯನ್ನು ಮತ್ತು ಅದರ ಎಲ್ಲಾ ಹಕ್ಕುಗಳನ್ನು ನಾವು ಸ್ವೀಕರಿಸುವುದು ಹಾಗೂ ಸ್ವಾಧೀನಪಡಿಸುವುದನ್ನು ಸೂಚಿಸುತ್ತದೆ ಎಂಬುದನ್ನು ನಾವು ನೋಡಿದ್ದೇವೆ. ಅವುಗಳನ್ನು ನಮ್ಮ ಕರ್ತನು ಆದಾಮ ಮತ್ತು ಅವನ ಎಲ್ಲಾ ಸಂತತಿಗಾಗಿ ಬಲಿಯಾಗಿ ಅರ್ಪಿಸಿದ್ದನು. ನಮ್ಮ ಕರ್ತನು, *"ನನ್ನ ಮಾಂಸವೇ, ಅದನ್ನು ನಾನು ಲೋಕದ ಜೀವಕ್ಕಾಗಿ ಕೊಡುವೆನು"* ***(ಯೋಹಾನ 6:51)*** ಎಂದು ಹೇಳಿದಾಗ, ಆತನು, ನಾನು ನನ್ನ ಪರಿಪೂರ್ಣ (ಹುಳಿಯಿಲ್ಲದ) ಮಾನವ ಸ್ವಭಾವವನ್ನು ತ್ಯಜಿಸುತ್ತೇನೆ ಅಥವಾ ತ್ಯಾಗ ಮಾಡುತ್ತೇನೆ ಎಂದು ಅರ್ಥೈಸಿದನು. ಇದರಿಂದ, ನನ್ನ ತ್ಯಾಗವನ್ನು ಸ್ವೀಕರಿಸುವ ಮೂಲಕ ಮತ್ತು ಲೋಕದ ಪರವಾಗಿ ಉಚಿತವಾಗಿ ನೀಡಲಾದ ನನ್ನ ಹಕ್ಕುಗಳು ಮತ್ತು ಪರಿಪೂರ್ಣತೆಗಳನ್ನು ಸ್ವಾಧೀನಪಡಿಸಿಕೊಳ್ಳುವ(ತಿನ್ನುವುದರ) ಮೂಲಕ, ಲೋಕವು ಪರಿಪೂರ್ಣ ಮಾನವ ಸ್ವಭಾವವನ್ನು ("ಕಳೆದುಹೋದದ್ದು") ಹೊಂದಬಹುದು.

ಈ ರೊಟ್ಟಿ, ಸುವಾರ್ತೆ ಯುಗದಲ್ಲಾಗಲಿ ಅಥವಾ ಸಾವಿರವರ್ಷದ ಯುಗದಲ್ಲಾಗಲಿ, ಯಾರಿಗಾದರೂ ಪ್ರಯೋಜನವಾಗುವ ಮೊದಲು, ಅದನ್ನು ಮರುಸ್ಥಾಪನೆ ಹೊಂದಬೇಕಾದ ಎಲ್ಲರೂ ಸ್ವೀಕರಿಸಿ, ಜೀರ್ಣಿಸಿಕೊಳ್ಳಬೇಕು (ಅಥವಾ ಮೆಚ್ಚುಗೆ ನೀಡಬೇಕು) ಎಂಬುದನ್ನು ನಾವು ನೋಡಿದ್ದೇವೆ. ಕಳೆದುಹೋದದ್ದನ್ನು ಮರಳಿ ಪಡೆಯುವ ಎಲ್ಲರೂ ಈಡುಬಲಿಯನ್ನು ಸ್ವೀಕರಿಸಬೇಕು. ಹೀಗೆ, ಅದರ ಫಲವಾಗಿ, ಮರುಸ್ಥಾಪನೆಯನ್ನು (ನಿಜವಾಗಿ ಅಥವಾ ಎಣಿಸಲ್ಪಡುವ ರೀತಿಯಲ್ಲಿ) ಪಡೆಯುತ್ತಾರೆ. ಕುರಿಮರಿಯ ಮಾಂಸವನ್ನು ತಿನ್ನುವವರೆಲ್ಲರೂ ಆತನ ರಕ್ತವನ್ನು ಕುಡಿಯುವುದಿಲ್ಲ ಎಂದು ನಾವು ನೋಡಿದ್ದೇವೆ. ಛಾಯೆಯಾಗಿ, ಪಸ್ಕ ಹಬ್ಬದಲ್ಲಿ ಮನೆಯ ಬಾಗಿಲಿನ ಕಂಬಗಳು ಮತ್ತು ಮೇಲಿನ ಪಟ್ಟಿಗಳಿಗೆ ಕುರಿಮರಿಯ ರಕ್ತವನ್ನು

ಚಿಮುಕಿಸಲಾಯಿತು. ಅದೇ ರೀತಿ, *"ಮನುಷ್ಯಕುಮಾರನ ಮಾಂಸವನ್ನು ತಿನ್ನುವ"* ಎಲ್ಲರೂ (ಆತನ ಪುಣ್ಯಗಳು ಮತ್ತು ನೀತಿವಂತಿಕೆಯಲ್ಲಿ ಪಾಲುಗಾರರಾಗುವವರು), ಆ ರಕ್ತವನ್ನು ಗುರುತಿಸಬೇಕು ಮತ್ತು ಅದನ್ನು ತಮ್ಮದಾಗಿಸಿಕೊಳ್ಳಬೇಕು. ಅದು ಇಡೀ ಲೋಕದ ಪಾಪಗಳ ಕ್ಷಮೆಗಾಗಿ ಬಹುಜನರಿಗಾಗಿ ಸುರಿಸಲಾದ ಅಮೂಲ್ಯ ಜೀವವಾಗಿದೆ.

ಆದರೆ, *"ಪಾತ್ರೆ"ಯಲ್ಲಿ* ಕುಡಿಯುವ ಸವಲತ್ತು - *ಮಾರ್ಕ 10:38* - (ಜೀವನದ ತ್ಯಾಗದಲ್ಲಿ ಪಾಲುಗೊಳ್ಳುವ ಅವಕಾಶ), ಇದನ್ನು ಸುವಾರ್ತಾ ಯುಗದಲ್ಲಿ ಮಾತ್ರ ನೀಡಲಾಗಿದೆ. ಈ ಯುಗದಲ್ಲಿ ದೊರೆಯುವ ಕೃಪೆ ಅಥವಾ ಸವಲತ್ತು ಏನೆಂದರೆ, *"ಕ್ರಿಸ್ತನ ಸಂಕಟಗಳೊಳಗೆ ಇನ್ನೂ ಉಳಿದದ್ದನ್ನು... ಅನುಭವಿಸುವುದು"* ಹಾಗೂ ಆತನೊಂದಿಗೆ ಆತನ ಮಹಿಮೆಯನ್ನು ಹಂಚಿಕೊಳ್ಳುವ ಪ್ರತಿಫಲವನ್ನು ಪಡೆಯುವುದು. ಆದ್ದರಿಂದ, ಮಾಂಸವನ್ನು(ರೊಟ್ಟಿ) ತಿನ್ನುವುದು ಎಲ್ಲಾ ಮಾನವ ಹಕ್ಕುಗಳು ಮತ್ತು ಸವಲತ್ತುಗಳಿಗೆ ಸಮರ್ಥನೆಯನ್ನು ಸೂಚಿಸುವಂತೆಯೇ, ರಕ್ತವನ್ನು (ದ್ರಾಕ್ಷಾರಸ) ಕುಡಿಯುವುದು ನಮ್ಮ ಕರ್ತನ ತ್ಯಾಗದಲ್ಲಿ ಆತನೊಂದಿಗೆ ನಮ್ಮ ಪಾಲುಗಾರಿಕೆಯನ್ನು ಸೂಚಿಸುತ್ತದೆ. ಅಂದರೆ ನಾವು *"ಆತನೊಂದಿಗೆ ಸತ್ತಿದ್ದೇವೆ"*, ಆತನ ಕಷ್ಟಗಳಲ್ಲಿ ಪಾಲುಗಾರರಾಗುತ್ತೇವೆ, ಆತನೊಂದಿಗೆ ಶಿಲುಬೆಗೆ ಹಾಕಲ್ಪಡುವೆವು ಎಂಬ ಅರ್ಥವನ್ನು ಇದು ಸೂಚಿಸುತ್ತದೆ.

ಇದು ನಿಜವಾಗಿದ್ದರೂ, ರೊಟ್ಟಿಯನ್ನು ತಿಂದ ನಂತರ ಮತ್ತು ಅದನ್ನು ತಿಂದವರಿಗೆ ಮಾತ್ರ ದ್ರಾಕ್ಷಾರಸವನ್ನು ಕೊಡುವುದು ಎಷ್ಟು ಸೂಕ್ತವಾಗಿದೆ. ಇದು ಎಲ್ಲಾ ಸತ್ಯವಾಕ್ಯಗಳಿಗೂ ಅನುಗುಣವಾಗಿ ನಮಗೆ ಬೋಧಿಸುವುದೇನೆಂದರೆ, ದೇವರ ಕುರಿಮರಿಯಾದ ಕ್ರಿಸ್ತನ ತ್ಯಾಗ ಮತ್ತು ಪುಣ್ಯದ ಮೇಲಿನ ನಂಬಿಕೆಯಿಂದ ಎಲ್ಲಾ ಪಾಪಗಳಿಂದ ಸಮರ್ಥಿಸಲ್ಪಟ್ಟವರು ಮಾತ್ರ (ಬೇರೆಯವರಲ್ಲ) ತಮ್ಮ (ಸಮರ್ಥಿಸಲ್ಪಟ್ಟ) ಮಾನವೀಯತೆಯನ್ನು ಶಿಲುಬೆಗೆ ಹಾಕಿ, ಈ ಯುಗದಲ್ಲಿ ಕ್ರಿಸ್ತನ ಸಂಕಟಗಳಲ್ಲಿ ಪಾಲುಗೊಳ್ಳಲು ಹಾಗೂ ಸಾವಿರವರ್ಷದ ಯುಗದಲ್ಲಿಯೂ ನಂತರ ಬರುವ ಆತನ ಮಹಿಮೆಯಲ್ಲಿ ಭಾಗಿಯಾಗಲು ಆಹ್ವಾನಿಸಲ್ಪಡುತ್ತಾರೆ.

ಆತನ ಮಾಂಸವನ್ನು ತಿನ್ನುವವರು (ಆತನ ಪುಣ್ಯಗಳನ್ನು, ನೀತಿವಂತಿಕೆಯನ್ನು ಸ್ವಾಧೀನಪಡಿಸುಕೊಳ್ಳುವುದು) ಮತ್ತು ಆತನ ರಕ್ತವನ್ನು ಕುಡಿಯುವವರು (ತಮ್ಮ ಸಮರ್ಥಿಸಲ್ಪಟ್ಟ ಮಾನವೀಯತೆಯನ್ನು ಆತನ ಸೇವೆಗೆ ತ್ಯಾಗ ಮಾಡುವ ಮೂಲಕ ಆತನ ತ್ಯಾಗದಲ್ಲಿ ಆತನೊಂದಿಗೆ ಹಂಚಿಕೊಳ್ಳುವವರು) ಮಾತ್ರ ಆತನಲ್ಲಿ ವಾಸಿಸುತ್ತಾರೆ ಮತ್ತು ಆತನು ಅವರಲ್ಲಿ, *ಒಂದೇ "ಕ್ರಿಸ್ತನ ದೇಹ"ದ ಸದಸ್ಯರಾಗಿ, "ನಿಜವಾದ ದ್ರಾಕ್ಷೇಬಳ್ಳಿ" ಸದಸ್ಯರಾಗಿ ವಾಸಿಸುತ್ತಾನೆ.(ಯೋಹಾನ 6:56)* ಅಂತಹವರು (ವಚನ 53) ಮಾತ್ರ ಸ್ವತಃ ಜೀವನವನ್ನು ಹೊಂದಬಹುದು. ಅಂದರೆ, ಎಲ್ಲಾ ಸ್ಥಿತಿಗಳಿಂದ ಸ್ವತಂತ್ರವಾದ ಜೀವನ - ಅಮರತ್ವ. *(Millennial Dawn, Volume I, ಅಧ್ಯಾಯ 10. ನೋಡಿ.)*

ಆದಾಗ್ಯೂ, ಮಾನವಕುಲದ ಸಮತೋಲನವು "ಮನುಷ್ಯನಾಗಿರುವ ಕ್ರಿಸ್ತ ಯೇಸು"ವಿನ ತ್ಯಾಗ ಮಾಡಿದ ಹಕ್ಕುಗಳನ್ನು ತಿನ್ನುವ ಮೂಲಕ (ಸ್ವಾಧೀನಪಡಿಸಿಕೊಳ್ಳುವ ಮೂಲಕ) ಅವಲಂಬಿತ ಜೀವನವನ್ನು ಪಡೆಯಬಹುದು, ಅದನ್ನು ಚಿತ್ತವುಳ್ಳ ಹಾಗೂ ವಿಧೇಯರಾದವರಿಗೆ ಶಾಶ್ವತವಾಗಿ ಒದಗಿಸಲಾಗುತ್ತದೆ.

ಇವರೆಲ್ಲರೂ ಮೊದಲು ಕರ್ತನ ಜ್ಞಾನಕ್ಕೆ, ಆತನು ನೀಡಿದ ತ್ಯಾಗದ ಬಗ್ಗೆ ಮತ್ತು ಅದರಲ್ಲಿ ಒದಗಿಸಲಾದ ನೀತಿವಂತಿಕೆ ಹಾಗೂ ಮರುಸ್ಥಾಪನೆ ಬಗ್ಗೆ ತಿಳಿದುಕೊಳ್ಳಬೇಕು. ನಂತರ ಅದರಲ್ಲಿ ಉಚಿತವಾಗಿ ಪಾಲ್ಗೊಂಡು ಬದುಕಬಹುದು. ಅಂತಹವರ ಬಗ್ಗೆ ಹೀಗೆ ಬರೆಯಲಾಗಿದೆ, *"ಈ ರೊಟ್ಟಿಯನ್ನು ಯಾವನಾದರೂ ತಿಂದರೆ ("ಪಾತ್ರೆ" ಯನ್ನು ಹಂಚಿಕೊಳ್ಳದೆ) ಅವನು ಸದಾಕಾಲ ಬದುಕುವನು"* ಮತ್ತು "ನನ್ನನ್ನು

ತಿನ್ನುವವನೇ ನನ್ನಿಂದ ಜೀವಿಸುವನು" - ಅವಲಂಬಿತ ಜೀವನ, ಆದರೆ ಜೀವದಾತನಾದ ಕ್ರಿಸ್ತನ ಮೇಲೆ ಅವಲಂಬಿತರಾಗಿರುವ ಎಲ್ಲರಿಗೂ ಖಂಡಿತವಾಗಿಯೂ ಒದಗಿಸಲಾಗುತ್ತದೆ. ವ್ಯತ್ಯಾಸವೆಂದರೆ, ಈಗ ಆಯ್ಕೆಗೊಳ್ಳುತ್ತಿರುವ ಸುವಾರ್ತೆಯ ಸಭೆ ಅಂದರೆ ಕ್ರಿಸ್ತನ ದೇಹ, ತಲೆಯೊಂದಿಗೆ ಅಮರತ್ವವನ್ನು ಹೊಂದಿರುತ್ತದೆ, ಸ್ವತಃ ಜೀವನವನ್ನು ಹೊಂದಿರುತ್ತದೆ ಮತ್ತು ಜಗತ್ತಿಗೆ ಪೂರೈಕೆಯ ಮೂಲವಾಗಿರುತ್ತದೆ, ಅವರು ನಿರಂತರವಾಗಿ ಜೀವಕ್ಕಾಗಿ ಬುಗ್ಗೆಗೆ ಬರುತ್ತಾರೆ, ಬಂದು ಅದರ ಮೂಲಕ ಬದುಕುತ್ತಾರೆ.

*"ಹೀಗಿರುವದರಿಂದ ಯಾವನಾದರೂ ಅಯೋಗ್ಯವಾಗಿ ಈ ರೊಟ್ಟಿಯನ್ನು ತಿಂದು ಕರ್ತನ ಪಾತ್ರೆಯಲ್ಲಿ ಪಾನಮಾಡಿದರೆ ಅವನು ಕರ್ತನ ದೇಹಕ್ಕೂ ರಕ್ತಕ್ಕೂ ಅಪರಾಧ ಮಾಡಿದವನಾಗಿರುವನು."* ಎಂಬ ಅಪೊಸ್ತಲನ ಹೇಳಿಕೆಯನ್ನು ನಾವು ವಿಶೇಷವಾಗಿ ಗಮನಿಸಿದ್ದೇವೆ. ***(1 ಕೊರಿಂಥ 11:27-29.)*** ಇದರ ಅರ್ಥವೆಂದರೆ, ತಮ್ಮ ಪಾಪಗಳಿಗಾಗಿ ಕ್ರಿಸ್ತನ ತ್ಯಾಗವನ್ನು ಗುರುತಿಸಲು ವಿಫಲರಾದ ಎಲ್ಲರಿಗೂ ಆ ಸಂಕೇತಗಳನ್ನು ತಿನ್ನುವುದು ಅವರೇ ಕ್ರಿಸ್ತನ ಕೊಲೆಗಾರರಾದಂತೆ, ಅವರ ಅಪರಾಧವನ್ನು ಸೂಚಿಸುತ್ತದೆ. ಯಹೂದ್ಯರು *"ಆತನ ರಕ್ತವು ನಮ್ಮ ಮೇಲೆ ಮತ್ತು ನಮ್ಮ ಮಕ್ಕಳ ಮೇಲೆ ಇರಲಿ"* ಎಂದು ಕೂಗಿದ ಅದೇ ಅರ್ಥದಲ್ಲಿ. ಯಹೂದಿಗಳು ತಮ್ಮನ್ನು ನಿರಪರಾಧಿ ರಕ್ತದ (ಸಾವಿನ) ಅಪರಾಧಿಗಳನ್ನಾಗಿ ಮಾಡಿಕೊಂಡಂತೆ, ಈಗ ಸಂಕೇತಗಳನ್ನು ತಿನ್ನುವ ಎಲ್ಲರೂ, ಕರ್ತನ ದೇಹ ಮತ್ತು ರಕ್ತವನ್ನು ತಮ್ಮ ಈಡುಬಲಿ ಎಂದು ಗುರುತಿಸದಿದ್ದರೆ, ಆತನ ರಕ್ತ ನಮ್ಮ ಮೇಲಿದೆ ಎಂಬ ಘೋಷಣೆಯೊಂದಿಗೆ ತಮಗೇ ಅಪರಾಧವನ್ನು ಹೊಂದಿಸುತ್ತಾರೆ. ಇದನ್ನು ತಮ್ಮ ಈಡುಬಲಿ ಎಂದು ಗುರುತಿಸದ ಎಲ್ಲರಿಗೂ, ಇದು ಆತನ ದೇಹವನ್ನು ಮುರಿಯುವ ಮತ್ತು ಆತನ ರಕ್ತವನ್ನು ಚೆಲ್ಲುವ ಅಪರಾಧದ ಪಾಲುದಾರರಾಗಿ ಆತನ ಅಪರಾಧನಿರ್ಣಯದ ಹೆಚ್ಚಳವನ್ನು ಸೂಚಿಸುತ್ತದೆ. ಏಕೆಂದರೆ ಇದು ಅವರಿಗೆ ಕ್ಷಮೆಯನ್ನು ಹಾಗೂ ಪಾಪಗಳ ಪರಿಹಾರವನ್ನು ತಿಳಿಸುವುದಿಲ್ಲ.

ನಂತರದ ನಾಲ್ಕು ದಿನಗಳನ್ನು ಸಂಪೂರ್ಣವಾಗಿ ಸಭೆ ಕೂಟಗಳಿಗೆ ಬಿಟ್ಟುಕೊಡಲಾಯಿತು. ನಾವು ಇಲ್ಲಿ ಮರುರೂಪಿಸಲು ಸಾಧ್ಯವಾಗದ ವಿವಿಧ ಆಸಕ್ತಿಯ ವಿಷಯಗಳನ್ನು ಅಲ್ಲಿ ಚರ್ಚಿಸಲಾಯಿತು. ಈ ಸಭೆ ಕೂಟಗಳಿಗೆ ಭೇಟಿ ನೀಡಿದ ಸ್ನೇಹಿತರಿಗೆ ವಿಶೇಷವಾಗಿ ಮತ್ತು ಆಳವಾಗಿ ಆಸಕ್ತಿದಾಯಕವೆಂದು ತೋರುತ್ತಿತ್ತು, ದೇವರ ವಾಕ್ಯದ ಬಲವಾದ ಆಹಾರದಿಂದ ಮತ್ತು ಪರೀಕ್ಷಿಸಲ್ಪಟ್ಟ ಅತ್ಯಂತ ಶ್ರೇಷ್ಠ ಮತ್ತು ಅಮೂಲ್ಯವಾದ ವಾಗ್ದಾನಗಳಿಂದ ತೆಗೆಯಲ್ಪಟ್ಟ ಆನಂದ ಮತ್ತು ಭರವಸೆಯ ಹೊಸ ದ್ರಾಕ್ಷಾರಸದಿಂದ ಉಲ್ಲಾಸ ಮತ್ತು ಬಲಗೊಂಡು ತಮ್ಮ ಸೇವಾ ಕ್ಷೇತ್ರಗಳಿಗೆ ಹಿಂತಿರುಗಿದರು ಎಂದು ನಾವು ನಂಬುತ್ತೇವೆ.

ಅವರ ಭೇಟಿಯ ಸಮಯದಲ್ಲಿ, ಮುಂದಿನ ಒಂಬತ್ತು ಸಹೋದರ ಸಹೋದರಿಯರು *"ಮರಣದವರೆಗೂ"* ***(ರೋಮಾಪುರದವರಿಗೆ 6:3,4)*** ತಮ್ಮ ಒಡಂಬಡಿಕೆಯನ್ನು ಸಂಕೇತಿಸುವ ಅವಕಾಶವನ್ನು ಸ್ವೀಕರಿಸಿದರು, ನಮ್ಮ ಕರ್ತನ ಕೋರಿಕೆಯಂತೆ ***(ಮಾರ್ಕ 16:16)*** ಮತ್ತು ಅಪೊಸ್ತಲರ ಆಜ್ಞೆಯಂತೆ ***(ಅಪೊಸ್ತಲರ ಕೃತ್ಯಗಳು 10:48)*** ಮರಣದಲ್ಲಿ ನಿಜವಾದ ಮುಳುಗುವಿಕೆಯ ಹೋಲಿಕೆಯಲ್ಲಿ ನೀರಿನಲ್ಲಿ ಮುಳುಗಿಸಲ್ಪಟ್ಟರು. ಅವರ ಹೆಸರುಗಳು ಈ ಕೆಳಗಿನಂತಿವೆ. ಸಹೋದರ ಮತ್ತು ಸಹೋದರಿ ಎ. ಬೋವೆನ್, ಸಹೋದರ. ಜೆ. ಡಬ್ಲ್ಯೂ. ಮೇಸನ್, ಸಹೋದರ. ಥಾಸ್. ಆರ್. ಜಾಕ್ಸನ್, ಸಹೋದರಿ ಜೆ. ವೆರೋ, ಸಹೋದರಿ ಎಂ. ಜೆ. ವ್ಯಾಗ್ನರ್, ಸಹೋದರಿ ಎಂ. ಥಾಂಪ್ಸನ್, ಮತ್ತು ಸಹೋದರಿಯರಾದ ಕಾರ್ಸನ್ ಮತ್ತು ಮಿಚೆಲ್.

*"ನನ್ನನ್ನು ನೆನಸಿಕೊಳ್ಳುವದಕ್ಕೋಸ್ಕರ ಹೀಗೆ ಮಾಡಿರಿ"* ಎಂಬ ಯಜಮಾನನ ಮಾತುಗಳನ್ನು ಎಲ್ಲಾ ದಿಕ್ಕುಗಳಲ್ಲಿರುವ ಸಹೋದರರು ಮತ್ತು

ಸಹೋದರಿಯರು ನೆನಪಿಸಿಕೊಂಡಿದ್ದಾರೆ ಎಂದು ಬಂದ ಅನೇಕ ಪತ್ರಗಳು ತೋರಿಸುತ್ತವೆ. ಕೆಲವು ಸ್ಥಳಗಳಲ್ಲಿ ಕೂಟಗಳು ಗಣನೀಯ ಸಂಖ್ಯೆಯಲ್ಲಿ ನಡೆದವು, ಆದರೆ ಇತರ ಸ್ಥಳಗಳಲ್ಲಿ ಕೇವಲ ಒಂದು ಅಥವಾ ಎರಡು. ಸರಿಯಾದ ಉದ್ದೇಶಗಳಿಂದ *"ಇದನ್ನು"* ಮಾಡಿದವರೆಲ್ಲರೂ, ತಮ್ಮ ಪಾಪಗಳಿಗಾಗಿ ಕರ್ತನ ತ್ಯಾಗ ಮತ್ತು ಆತನೊಂದಿಗೆ ಅವರ ಒಡಂಬಡಿಕೆಯನ್ನು ವಿವೇಚಿಸುವ ಮೂಲಕ ಖಂಡಿತವಾಗಿಯೂ ಬಹಳವಾಗಿ ಆಶೀರ್ವದಿಸಲ್ಪಟ್ಟರು ಎಂದು ನಮಗೆ ತಿಳಿದಿದೆ. ಸ್ವೀಕರಿಸಿದ ಅನೇಕ ಪತ್ರಗಳು ಇದೇ ರೀತಿಯ ಸಾಕ್ಷಿಯನ್ನು ಹೊಂದಿವೆ. ನಾವು ಇಲ್ಲಿ ಒಟ್ಟುಗೂಡಿದಂತೆ ನಿಮ್ಮನ್ನು ನಾವು ಮರೆತಿಲ್ಲ, ಮತ್ತು ನಿಮ್ಮ ಪತ್ರಗಳು ನಮ್ಮನ್ನು ನೀವು ಮರೆತಿಲ್ಲ ಎಂದು ನಮಗೆ ಭರವಸೆ ನೀಡುತ್ತವೆ. *"ದೇಹ"*ವು ತನ್ನ ಎಲ್ಲಾ ಸದಸ್ಯರಲ್ಲಿ ಹೊಂದಿರುವ ಈ ಪರಸ್ಪರ ಆಸಕ್ತಿ ಸರಿಯಾಗಿದೆ ಮತ್ತು ಅದು ನಮ್ಮ ಹೃದಯಗಳನ್ನು ಆಗಾಗ್ಗೆ ಸಂತೋಷಪಡಿಸುತ್ತದೆ.

[R899 : ಪುಟ 2]

# "ಕರ್ತನ ಭೋಜನ"

## *THE LORD'S SUPPER*

ಕರ್ತನ ಭೋಜನದ ವಾರ್ಷಿಕೋತ್ಸವವು ಈ ವರ್ಷ ಏಪ್ರಿಲ್ 7 ರ ಗುರುವಾರ ಸಂಜೆ ಬರುತ್ತದೆ ಮತ್ತು ಪ್ರಾರಂಭಿಕ ಕ್ರೈಸ್ತರು ಆಚರಿಸಿದ್ದ ಆಚಾರವನ್ನು ಅನುಸರಿಸಿ, ನಾವು ಸಹ ಅವರಂತೆ, ನಮ್ಮ ಕರ್ತನು ನಮಗೆ ತಿಳಿಸಿದ ರೀತಿಯಲ್ಲಿ ಮತ್ತು ಆತನು ಆಚರಿಸಿದ ಸಮಯದಲ್ಲಿ, ಅವರ ಮರಣವನ್ನು ಸ್ಮರಿಸುವುದು ಒಂದು ಆಶೀರ್ವಾದದ ಸವಲತ್ತು ಎಂದು ನಾವು ಪರಿಗಣಿಸುತ್ತೇವೆ. ಆತನು ನ್ಯಾಯಪ್ರಮಾಣದ ಅಡಿಯಲ್ಲಿದ್ದ ಎಲ್ಲಾ ವಿಶ್ವಾಸಿಗಳನ್ನು (ಇಸ್ರಾಯೇಲ್ಯರನ್ನು) ಬಿಡುಗಡೆ ಮಾಡಿದ್ದರೂ ಸಹಾ, ಆತನು "ನ್ಯಾಯಪ್ರಮಾಣದಡಿಯಲ್ಲಿ" ಇದ್ದನು ಮತ್ತು ಅದರಿಂದ ಸೀಮಿತನಾಗಿದ್ದನು. ಅದರಂತೆ, ಆತನನ್ನು ಯಹೂದಿ ತಿಂಗಳ ನಿಸಾನ್ ಹದಿನಾಲ್ಕನೇ ದಿನದಂದು ಮಾತ್ರ ಶಿಲುಬೆಗೇರಿಸಬಹುದಿತ್ತು. (ಅದು ಈ ವರ್ಷ ಏಪ್ರಿಲ್ 7 ರ ಗುರುವಾರ ಸಂಜೆ ಪ್ರಾರಂಭವಾಗಿ ಏಪ್ರಿಲ್ 8 ರಂದು ಶುಕ್ರವಾರ ಸಂಜೆ 6 ಗಂಟೆಗೆ ಕೊನೆಗೊಳ್ಳುತ್ತದೆ), ಏಕೆಂದರೆ ಆತನ ಮರಣವು ಕುರಿಮರಿಯ ರಕ್ತವನ್ನು ಬಾಗಿಲಿನ ಕಂಬಗಳ ಮೇಲೆ ಚಿಮುಕಿಸಿ ಇಸ್ರೇಲಿನ ಚೊಚ್ಚಲ ಮಕ್ಕಳನ್ನು ಕಾಪಾಡಿದ ಅಥವಾ ರಕ್ಷಿಸಿದ ಕುರಿಮರಿಯ ಮರಣದ ನಿಜಸ್ವರೂಪವಾಗಿತ್ತು ಮತ್ತು ಈ ಚೊಚ್ಚಲ ಮಕ್ಕಳನ್ನು ಲೇವಿಯ ಕುಲಕ್ಕೆ ಬದಲಾಯಿಸಲಾಯಿತು *(ಅರಣ್ಯಕಾಂಡ 3:12, 13)*, ಮುಂದೆ ಅವರೇ ಯಾಜಕರಾದರು, ಅವರ ತ್ಯಾಗದ ಸೇವೆಗಳ ಮೂಲಕ ಎಲ್ಲಾ ಜನರು ನೀತಿವಂತರೆಂದು ಎಣಿಸಲ್ಪಟ್ಟರು **[R900 : ಪುಟ 2]**.

ಆ ಕುರಿಮರಿಯು ನಮ್ಮ ಕರ್ತನಾದ ಕ್ರಿಸ್ತ ಯೇಸುವನ್ನು ಪ್ರತಿನಿಧಿಸುತ್ತದೆ; ಅದರ ಮರಣವು ಆತನ ಮರಣವನ್ನು ಪ್ರತಿನಿಧಿಸುತ್ತದೆ ಮತ್ತು ಆ ಛಾಯೆಗೆ ನಿಖರವಾಗಿ ಹೊಂದಿಕೆಯಾಗುವಂತೆ, ಆತನ ತ್ಯಾಗದ ಮರಣವು, ಅದೇ ದಿನಾಂಕದಂದು ಸಂಭವಿಸಬೇಕಿತ್ತು ಮತ್ತು ಸಂಭವಿಸಿತು. ಛಾಯೆಯಾದ ಕುರಿಮರಿಯ ರಕ್ತದಿಂದ ರಕ್ಷಿಸಲ್ಪಟ್ಟ ಚೊಚ್ಚಲ ಮಕ್ಕಳು "ಯೇಸು ತನ್ನ ಸ್ವಂತ ರಕ್ತದಿಂದ ಖರೀದಿಸಿದ ಚೊಚ್ಚಲ ಮಕ್ಕಳ ಸಭೆಯನ್ನು" ಸೂಚಿಸುತ್ತದೆ. ಆ ಚೊಚ್ಚಲ ಮಕ್ಕಳಾದ ಇಸ್ರಾಯೇಲ್ಯರು, ನಂತರ ಯಾಜಕರನ್ನು ಹಾಗೂ ಕರ್ತನು ಸ್ವತಃ ಮಹಾಯಾಜಕನಾಗಿರುವ "ರಾಜಮನೆತನದ ಯಾಜಕತ್ವ"ವನ್ನು ಸೂಚಿಸುತ್ತಾರೆ ಮತ್ತು ಈ ಅಭಿಷಕ್ತ ಸಮೂಹ ದೇವರೊಂದಿಗೆ ಸಾಮರಸ್ಯಕ್ಕೆ ಬರುವ ಎಲ್ಲಾ ಜನರನ್ನು ಆಶೀರ್ವದಿಸಲು ಆತನ ಸಾಧನವಾಗಿರಬೇಕು ಎಂಬುದನ್ನು ಎಲ್ಲಾ ಇಸ್ರಾಯೇಲ್ಯರು ಸೂಚಿಸುತ್ತಾರೆ. ಹೀಗೆ ನೋಡಿದಾಗ, ಛಾಯೆಯಾದ ಕುರಿಮರಿಯ ರಕ್ತವು ಮೊದಲು ಮತ್ತು ನೇರವಾಗಿ ಚೊಚ್ಚಲು ಮಕ್ಕಳಿಗೆ ಮಾತ್ರ ಅನ್ವಯಿಸಿದರೂ, ಇಡೀ ಇಸ್ರಾಯೇಲರನ್ನು ಶುದ್ಧೀಕರಿಸಿ ಸಂರಕ್ಷಿಸಿತು. ಯಾಕಂದರೆ ಚೊಚ್ಚಲ ಮಕ್ಕಳು ಸಂರಕ್ಷಿಸದಿದ್ದರೆ ಯಾಜಕತ್ವ ಇರುತ್ತಿರಲಿಲ್ಲ ಮತ್ತು ಯಾಜಕತ್ವ ಇಲ್ಲದಿದ್ದರೆ ಪಾಪ ನಿವಾರಣೆಯೂ ಇರುತ್ತಿರಲಿಲ್ಲ. ಹಾಗೆಯೇ ಛಾಯೆಯಲ್ಲಿಯೂ ಸಹ, ಲೋಕದ ಪಾಪವನ್ನು ತೆಗೆದುಹಾಕುವ ದೇವರ ಕುರಿಮರಿಯ ಪುಣ್ಯವನ್ನು ಸುವಾರ್ತೆ ರಾತ್ರಿಯಲ್ಲಿ ಚೊಚ್ಚಲ ಮಕ್ಕಳು, ಸಭೆ, ಆರಿಸಲ್ಪಟ್ಟ ಚಿಕ್ಕ ಹಿಂಡು ಮತ್ತು

ರಾಜಮನೆತನದ ಯಾಜಕತ್ವಕ್ಕೆ ಮಾತ್ರ ಅನ್ವಯಿಸಲಾಗುತ್ತದೆ. ಅವರು ಮಹಾಯಾಜಕನ ನಿರ್ದೇಶನದಡಿಯಲ್ಲಿ, ಶೀಘ್ರದಲ್ಲೇ ಬರುವ ಯುಗದಲ್ಲಿ, ಎಲ್ಲಾ ಪ್ರಾಮಾಣಿಕ ಹೃದಯಗಳನ್ನು (ನಿಜವಾದ ಇಸ್ರಾಯೇಲ್ಯರನ್ನು) ದೇವರೊಂದಿಗೆ ಪೂರ್ಣ ಸಾಮರಸ್ಯಕ್ಕೆ ತರುತ್ತಾರೆ.

ಆದ್ದರಿಂದ, ಚೊಚ್ಚಲ ಮಕ್ಕಳ ಸಭೆಯ ಎಲ್ಲರೂ ಬುದ್ಧಿವಂತಿಕೆಯಿಂದ ಮತ್ತು ಭಕ್ತಿಯಿಂದ ಸ್ಮರಿಸಲಿ; ಆದರೆ ಛಾಯೆಯಾದ ಕುರಿಮರಿಯನ್ನು ಅಥವಾ ಛಾಯೆಯಾದ ಜನರು (ಇಸ್ರೇಲ್) ಆ ಕುರಿಮರಿಯನ್ನು ತಿಂದಂತೆ ಅಲ್ಲ. ಬದಲಾಗಿ, ನಮ್ಮ ಪಸ್ಕದ ಕುರಿಮರಿಯಾದ ದೇವರ ಕುರಿಮರಿಯ ಮರಣವನ್ನು ಸ್ಮರಿಸೋಣ. ಅದರ ವಾರ್ಷಿಕೋತ್ಸವವು ಪ್ರತಿ ವರ್ಷ ಬರುವಾಗ ನಾವು ಆತನ ನೆನಪಿಗಾಗಿ ಆಚರಿಸೋಣ. ಏಕೆಂದರೆ ನಮ್ಮ ಪಸ್ಕಹಬ್ಬವಾದ ಕ್ರಿಸ್ತನು(ಕುರಿಮರಿ) ಸಹ ವಧಿಸಲ್ಪಟ್ಟಿದ್ದಾನೆ, ಆದಕಾರಣ, (ನಾವು ಆತನ ಮರಣವನ್ನು ಸ್ಮರಿಸುವುದಷ್ಟೇ ಅಲ್ಲದೆ) ನಂತರ, ಪಸ್ಕಹಬ್ಬದ* ನಿಜಸ್ವರೂಪವನ್ನು ಸಂತೋಷದಿಂದ ಆಚರಿಸೋಣ.

** "ಹಬ್ಬ" ಎಂದರೆ "ಭೋಜನ" ಅಲ್ಲ; ಬದಲಾಗಿ ಅದು ಭೋಜನದ ನಂತರ ಬರುತ್ತದೆ ಮತ್ತು ಸಂಪೂರ್ಣವಾಗಿ ವಿಭಿನ್ನವಾದ ಮಹತ್ವವನ್ನು ಹೊಂದಿದೆ. ಯಹೂದ್ಯರಲ್ಲಿ ಈ "ಹಬ್ಬ", ಒಂದು ವಾರದವರೆಗೆ ನಡೆಯುತ್ತಿತ್ತು ಮತ್ತು ಕುರಿಮರಿಯನ್ನು ಕೊಂದು ತಿಂದ ನಂತರ ಪ್ರಾರಂಭವಾಗುತ್ತಿತ್ತು. ಅದರ ಆಚರಣೆಯು ಹೃದಯದ ಸಂತೋಷ, ಎಲ್ಲಾ ಶಾರೀರಿಕ ಆಸಕ್ತಿಗಳಿಂದ ಹಾಗೂ ಹುಳಿಯಿಂದ ಸಂಪೂರ್ಣ ಬೇರ್ಪಟ್ಟಿರುವ ಮೂಲಕ ಗುರುತಿಸಲ್ಪಟ್ಟಿತ್ತು. ಇದು ಸಂತೋಷ, ಪರಿಶುದ್ಧತೆ ಮತ್ತು ಪಾಪದಿಂದ [ಹುಳಿಯಿಂದ] ಬೇರ್ಪಡುವ ಜೀವನವನ್ನು ಪ್ರತಿನಿಧಿಸುತ್ತದೆ. ಕುರಿಮರಿಯ ಮೌಲ್ಯವನ್ನು ಗುರುತಿಸುವ ಎಲ್ಲರೂ ಇಂತಹ ಜೀವನವನ್ನು ಆನಂದಿಸಬೇಕಾಗಿದೆ.*

ನಾವು ಏಪ್ರಿಲ್ 7 ರ ರಾತ್ರಿ "ಪಸ್ಕ ಹಬ್ಬ" ವನ್ನು ಆಚರಿಸುವುದಿಲ್ಲ. ಆ ಹಬ್ಬವು ಏಳು ದಿನಗಳವರೆಗೆ ನಡೆಯುವದರಿಂದ ಪ್ರತಿನಿಧಿಸಲ್ಪಡುವಂತೆ, ಅದು ನಮ್ಮ ಜೀವನದ ಉಳಿದ ಅವಧಿಯೆಲ್ಲಾ ಆಚರಿಸಲ್ಪಡಬೇಕಾದದ್ದಾಗಿದೆ. ಆದರೆ ನಾವು ಕರ್ತನ ಭೋಜನವನ್ನು ಆಚರಿಸುತ್ತೇವೆ; ಅದರ ಸಂಕೇತಗಳು (ರೊಟ್ಟಿ ಮತ್ತು ದ್ರಾಕ್ಷಾರಸ) ನಮ್ಮ ವಿಮೋಚಕನಾದ ಕರ್ತನ ಮಾಂಸ ಮತ್ತು ರಕ್ತವನ್ನು ಸೂಚಿಸುತ್ತವೆ.

ಆದರೂ, ರೊಟ್ಟಿ ಮತ್ತು ದ್ರಾಕ್ಷಾರಸ ಕೇವಲ ಸಂಕೇತಗಳಾಗಿವೆ ಮತ್ತು ನಾವು ಏನು ಮಾಡುತ್ತೇವೆ ಎಂಬುದನ್ನು ಸರಿಯಾಗಿ ಮೆಚ್ಚಿಕೊಳ್ಳಬೇಕಾದರೆ ನಾವು ಸಂಕೇತಗಳಿಗಿಂತ ಆಳವಾಗಿ ನೋಡಬೇಕು ಮತ್ತು ಕರ್ತನು ನೀಡಿದ ಸೂಚನೆಯಂತೆ, *"ನನ್ನ ನೆನಪಿಗಾಗಿ ನೀವು ಇದನ್ನು ಮಾಡಿರಿ"* ಎಂಬ ಅವರ ಆಜ್ಞೆಗಾಗಿ, ನಾವು ಈ ಸಂಕೇತಗಳನ್ನು ಬಳಸಬೇಕು. ಆತನ ಶರೀರವನ್ನು ಪ್ರತಿನಿಧಿಸುವ ರೊಟ್ಟಿಯಲ್ಲಿ ಪಾಲ್ಗೊಳ್ಳುವುದು ಎಂದರೆ, ಪರಿಪೂರ್ಣ ಮನುಷ್ಯನಾಗಿ ಆತನಲ್ಲಿದ್ದ ಪರಿಪೂರ್ಣತೆಗಳಲ್ಲಿ ಪಾಲ್ಗೊಳ್ಳುವುದು ಎಂದರ್ಥ, ಆ ಪರಿಪೂರ್ಣತೆಯನ್ನು ನಾವು ಮತ್ತು ಎಲ್ಲರೂ ಆದಾಮನ ಮೂಲಕ ಕಳೆದುಕೊಂಡಿದ್ದೇವೆ. ಆತನ ರಕ್ತವನ್ನು, ಆತನ ಜೀವವನ್ನು ಪ್ರತಿನಿಧಿಸುವ ದ್ರಾಕ್ಷಾರಸದಲ್ಲಿ ಪಾಲ್ಗೊಳ್ಳುವ ಮೂಲಕ, ಆದಾಮನಲ್ಲಿ ಕಳೆದುಹೋದ ಬದುಕುವ ಹಕ್ಕನ್ನು ನಾವು ಆತನ ಮೂಲಕ ದೇವರಿಂದ ಮತ್ತೆ ಸ್ವೀಕರಿಸುತ್ತೇವೆ. ಹೀಗೆ ಆತನ ಮಾಂಸ ಮತ್ತು ರಕ್ತದ ಸಂಕೇತಗಳಾದ ರೊಟ್ಟಿ ಮತ್ತು ದ್ರಾಕ್ಷಾರಸವನ್ನು ತಿನ್ನುವುದು ಮತ್ತು ಕುಡಿಯುವುದು ನಮ್ಮ ಸಂಪೂರ್ಣ ನೀತಿವಂತಿಕೆಯನ್ನು ಸೂಚಿಸುತ್ತದೆ. ನಮಗಾಗಿ ನೀಡಲಾದ ವಿಮೋಚಕನ ಎಲ್ಲಾ ಮಾನವ ಪರಿಪೂರ್ಣತೆಗಳು ಮತ್ತು ಆತನ ಬದುಕುವ ಹಕ್ಕನ್ನು, ಈ ಸಂಕೇತಗಳಲ್ಲಿ ನಾವು ಸ್ವೀಕರಿಸುತ್ತೇವೆ. ಹೀಗಾಗಿ, ಈಡುಬಲಿಯಲ್ಲಿ ನಂಬಿಕೆಯುಳ್ಳವರೆಲ್ಲರೂ ಅದನ್ನು ಮತ್ತು ಅದರಿಂದ

ಬರುವ ಆಶೀರ್ವಾದಗಳನ್ನು ಆಚರಿಸಲು ಅಥವಾ ಸ್ಮರಿಸಲು ಸವಲತ್ತುಗಳನ್ನು ಹೊಂದಿದ್ದಾರೆ.

ಆದರೆ ಆ "ನಂಬಿಗಸ್ತರಲ್ಲಿ" ಒಂದು ವಿಶೇಷ ವರ್ಗವಿದೆ - ಅಂದರೆ "ಚಿಕ್ಕ ಹಿಂಡು". ಇವರಿಗೆ ಇದು ಇನ್ನೂ ಹೆಚ್ಚಿನ ಅರ್ಥವನ್ನು ಹೊಂದಿದೆ. ಇವರು ತಮ್ಮ ಮಹಾ ಮುಖ್ಯಸ್ಥನ ಅಡಿಯಲ್ಲಿ ಅಧೀನ ಯಾಜಕರಾಗಿ ತಮ್ಮನ್ನು ತಾವೇ ಸಂಪೂರ್ಣವಾಗಿ ಅರ್ಪಣೆ ಮಾಡಿಕೊಂಡವರು. ಈ ಸಂಕೇತಗಳು ಕರ್ತನ ಬಲಿಯನ್ನು, ಬಲಿಯನ್ನು ಮಾತ್ರ ಸೂಚಿಸುವುದಲ್ಲ; ಆ ಬಲಿಯ ಮೂಲಕ ಅವರು ಮಾನವ ಜೀವನ ಮತ್ತು ಅದರ ಎಲ್ಲಾ ಹಕ್ಕುಗಳಿಗೆ ಸಮರ್ಥಿಸಲ್ಪಡುತ್ತಾರೆ, ಜೊತೆಗೆ ಆತನೊಂದಿಗೆ ಬಲಿಯಲ್ಲಿ ಸೇರಲು, ಆತನೊಂದಿಗೆ ಬಾಧೆಪಡಲು, ಮತ್ತು ಆತನೊಂದಿಗೆ ಮರಣ ಹೊಂದಲು ತಮ್ಮ ಸ್ವಂತ ಒಡಂಬಡಿಕೆಯನ್ನು ಸಹ ಅವು ಸೂಚಿಸುತ್ತವೆ. ಕರ್ತನ ಬಲಿಯನ್ನು ಸ್ವೀಕರಿಸುವ ಮೂಲಕ, ಅವರ ನೀತಿವಂತಿಕೆಯು ಅವರಿಗೆ ಮಾನವ ಪರಿಪೂರ್ಣತೆ ಮತ್ತು ಜೀವನದ ಎಲ್ಲಾ ಹಕ್ಕುಗಳನ್ನು ತ್ಯಾಗ ಮಾಡಲು ಅರ್ಹತೆ ನೀಡಿದ್ದನ್ನು ಅದು ಸೂಚಿಸುತ್ತದೆ. ಅಂತಹವರಿಗೆ, ಈ ಸಂಕೇತಗಳು (ರೊಟ್ಟಿ ಮತ್ತು ದ್ರಾಕ್ಷಾರಸ) ಕೇವಲ ಕರ್ತನ ಬಲಿಯ ಸ್ಮರಣೆಗಳು ಮಾತ್ರವಲ್ಲ, ಬದಲಾಗಿ ಆತನೊಂದಿಗೆ ಬಲಿಯನ್ನು ಹಂಚಿಕೊಳ್ಳುವ ಅವರ ಸ್ವಂತ ಒಡಂಬಡಿಕೆಯನ್ನೂ ಸಹ ಸೂಚಿಸುತ್ತವೆ. ಸಾಧ್ಯವಿರುವ ಯಾವುದೇ ರೀತಿಯಲ್ಲಿ ಆ ಒಡಂಬಡಿಕೆಯ ಷರತ್ತುಗಳನ್ನು ಪೂರೈಸುವ ಮೂಲಕ, ಅವರು "ದೈವಸ್ವಭಾವದಲ್ಲಿ ಪಾಲುಗೊಳ್ಳಲು" ಯೋಗ್ಯರೆಂದು ಪರಿಗಣಿಸಲ್ಪಟ್ಟು, ಎಲ್ಲಾ ಜನರನ್ನು ಆಶೀರ್ವದಿಸುವ ಕಾರ್ಯದಲ್ಲಿ ಆತನ "ಸಹಬಾಧ್ಯರು" ಮತ್ತು ಸಹೋದ್ಯೋಗಿಗಳಾಗಿ ಸೇವೆ ಸಲ್ಲಿಸಲು ಅರ್ಹರಾಗಬಹುದು.

ಪೌಲನು ಸ್ಮರಣೋತ್ಸವದ ಈ ವೈಶಿಷ್ಟ್ಯಕ್ಕೆ ನಮ್ಮ ಗಮನವನ್ನು ಸೆಳೆಯುತ್ತಾ ಹೀಗೆ ಹೇಳುತ್ತಾನೆ: " ನಾವು ಮುರಿಯುವ ರೊಟ್ಟಿಯು ಕ್ರಿಸ್ತನ ದೇಹದ ಪಾಲುಗಾರರಾಗಿದ್ದೇವೆಂಬದನ್ನು ಸೂಚಿಸುತ್ತದಲ್ಲವೇ. ["ಚಿಕ್ಕ ಹಿಂಡು", ಅಂದರೆ ಸಭೆಗೆ ನಮ್ಮ ಕರ್ತನು ಮುಖ್ಯಸ್ಥನಾಗಿದ್ದಾನೆ]? ನಾವು ದೇವಸ್ತೋತ್ರಮಾಡಿ ಪಾತ್ರೆಯಲ್ಲಿ ಪಾನಮಾಡುವದು ಕ್ರಿಸ್ತನ ರಕ್ತದಲ್ಲಿ ಪಾಲುಗಾರರಾಗಿದ್ದೇವೆಂಬದನ್ನು ಸೂಚಿಸುತ್ತದಲ್ಲವೇ?. [ಇಡೀ ಅಭಿಷಕ್ತ ಸಮಸ್ತ ವರ್ಗ]?, *ರೊಟ್ಟಿಯು ಒಂದೇಯಾಗಿರುವದರಿಂದ ಅನೇಕರಾಗಿರುವ[ಸದಸ್ಯರು] ನಾವು ಒಂದೇ ದೇಹದಂತಿದ್ದೇವೆ. ಯಾಕಂದರೆ ನಾವೆಲ್ಲರೂ ಆ ಒಂದೇ ರೊಟ್ಟಿಯಲ್ಲಿ ಪಾಲುತಕ್ಕೊಂಡು ತಿನ್ನುತ್ತೇವೆ.* ***(1 ಕೊರಿಂಥದವರಿಗೆ. 10:15-17.)***

ಎಲ್ಲರೂ ನಮ್ಮ ಕರ್ತನಾದ ಯೇಸುವಿನ ಮಾಂಸ ಮತ್ತು ರಕ್ತವನ್ನು ತಿನ್ನಬೇಕು. ಅಂದರೆ, ಈ ಯುಗದಲ್ಲಿ ನಂಬಿಕೆಯ ಮೂಲಕ ಅಥವಾ ಮುಂದಿನ ಯುಗದಲ್ಲಿ ನಿಜವಾಗಿಯೂ ಆತನ ಬಲಿಯು ಎಲ್ಲರಿಗೂ ಖಚಿತಪಡಿಸಿದ್ದ ಮಾನವ ಹಕ್ಕುಗಳು ಮತ್ತು ಸವಲತ್ತುಗಳಲ್ಲಿ ಅವರು ಪಾಲ್ಗೊಳ್ಳಬೇಕು. ಇಲ್ಲದಿದ್ದರೆ ಅವರಿಗೆ ಈಗ ತ್ಯಾಗ ಮಾಡಲು ಅಥವಾ ಇನ್ನು ಮುಂದೆ (ತ್ಯಾಗ ಮಾಡುವ ಸವಲತ್ತು ಇಲ್ಲದೆ) ಆನಂದಿಸಲು ಯಾವುದೇ ಜೀವನದ ಹಕ್ಕು ಇರುವುದಿಲ್ಲ. ಆದ್ದರಿಂದ, ನಾವು ಎಲ್ಲಾ ವಿಶ್ವಾಸಿಗಳನ್ನು ಬುದ್ಧಿವಂತಿಕೆಯಿಂದ "ಇದನ್ನು ಮಾಡಿರಿ" ಎಂದು ಒತ್ತಾಯಿಸುತ್ತೇವೆ. ಸಂಕೇತಗಳನ್ನು ಬಳಸುವಾಗ, ಎಲ್ಲಾ ಪಾಪಗಳಿಂದ ನೀತಿವಂತಿಕೆಯನ್ನು ಮತ್ತು ದೇವರು, ಆತನ ಕುರಿಮರಿಯ ಮೂಲಕ ನೀಡುವ ಜೀವಿಸುವ ಹಕ್ಕನ್ನು ಸ್ವೀಕರಿಸಲು, ಅನ್ವಯಿಸಲು ಮತ್ತು ಸಂಪೂರ್ಣವಾಗಿ ಸೂಕ್ತಗೊಳಿಸಲು ಒತ್ತಾಯಿಸುತ್ತೇವೆ, ಬೇರೆ ಯಾವುದೇ ಹೆಸರಿನಲ್ಲಿ ಅಥವಾ ರೀತಿಯಲ್ಲಿ ಅಲ್ಲ. ವಿಶೇಷವಾಗಿ ಕ್ರಿಸ್ತನೊಂದಿಗೆ ಆತನ ಮರಣದಲ್ಲಿ ಮುಳುಗಿಸಲ್ಪಟ್ಟ ಮತ್ತು ಹೀಗೆ ಆತನ "ದೇಹ"ದಲ್ಲಿ ಸದಸ್ಯತ್ವವನ್ನು ಪಡೆದಿರುವ ಎಲ್ಲಾ ವಿಶ್ವಾಸಿಗಳು ***(ರೋಮ. 6:3,4)***, ಇದನ್ನು ಮಾಡಲಿ, ಆತನ ರಕ್ತದ ಮೂಲಕ ತಮ್ಮ ಸಮರ್ಥನೆಯನ್ನು(ನೀತಿವಂತಿಕೆಯನ್ನು) ನೆನಪಿಸಿಕೊಳ್ಳುತ್ತಾ ಮತ್ತು ಆತನೊಂದಿಗೆ

ಮನುಷ್ಯರಾಗಿ ಸತ್ತಿರುವ ಒಡಂಬಡಿಕೆಯನ್ನು ನವೀಕರಿಸುತ್ತಾ, ಅವರು ಹೊಸ, ದೈವಿಕ ಸ್ವಭಾವದಲ್ಲಿ ಪಾಲುದಾರರಾಗಿ ಆತನೊಂದಿಗೆ ಬದುಕಬಹುದು.

ಸಾಧ್ಯವಾದಷ್ಟು ಮಟ್ಟಿಗೆ, ಒಂದೇ ದೇಹದ ಸಹ ಸದಸ್ಯರೆಂದು ನೀವು ಗುರುತಿಸಬಹುದಾದವರೊಂದಿಗೆ ಭೇಟಿಯಾಗಿರಿ ಮತ್ತು ಈಡುಬಲಿಯಲ್ಲಿ ನಂಬಿಕೆಯುಳ್ಳ ಯಾರನ್ನೂ ಹೊರಗಿಡಬೇಡಿ. ಸಭೆಯ ಕೂಟಕ್ಕಾಗಿ ಸಾಕಷ್ಟು ಮುಂಚಿತವಾಗಿಯೇ ವ್ಯವಸ್ಥೆ ಮಾಡಿಕೊಳ್ಳಿರಿ. ಸಂಕೇತಗಳನ್ನು (ರೊಟ್ಟಿ ಮತ್ತು ಪಾತ್ರೆ) ಯಾರು ಹಂಚಿಕೊಳ್ಳುತ್ತಾರೆ ಎಂಬುದು ಮುಖ್ಯವಲ್ಲ; ಮೊದಲ ಆಚರಣೆಯಲ್ಲಿ ಯೂದನೂ ಸಹ ಅದರಲ್ಲಿ ಸಹಾಯ ಮಾಡಿರಬಹುದೆಂದು ತಿಳಿಯುತ್ತದೆ.

ಹಾಗೆ ಮಾಡಲು ಸಾಧ್ಯವಿರುವ ಎಲ್ಲರೂ ಪಿಟ್ಸ್‌ಬರ್ಗ್‌ನಲ್ಲಿರುವ ಸಭೆಯಲ್ಲಿ ಹಾಜರಾಗಲು ಮತ್ತು ಆತ್ಮೀಯವಾಗಿ ಆಚರಿಸಲು ಆಹ್ವಾನಿತರಾಗಿದ್ದಾರೆ. ಸಾಧ್ಯವಾದರೆ, ನಮ್ಮ ಕರ್ತನ ಪುನರುತ್ಥಾನದ ವಾರ್ಷಿಕೋತ್ಸವವಾಗಿರುವ ಮುಂದಿನ ಕರ್ತನ ದಿನದವರೆಗೆ ಉಳಿಯುವಂತೆ ನಿಮ್ಮ ಕಾರ್ಯಗಳನ್ನು ವ್ಯವಸ್ಥೆ ಮಾಡಿಕೊಳ್ಳಿರಿ. ಬನ್ನಿ, ಸ್ವಲ್ಪ ಸಮಯಕ್ಕೆ ಎಲ್ಲವನ್ನೂ ಬದಿಗಿಟ್ಟು, ಕೆಲ ದಿನಗಳನ್ನು ಸಂಪೂರ್ಣವಾಗಿ ನಮ್ಮ ಆತ್ಮೀಯ ಆಸಕ್ತಿಗಳನ್ನು ಅನುಸರಿಸಲು ಮೀಸಲಿಡೋಣ. ಇದರಿಂದ ಲೋಕ, ಶರೀರ ಮತ್ತು ಸೈತಾನನು ನಮ್ಮನ್ನು "ವ್ಯವಹಾರದಲ್ಲಿ ಅತಿಯಾದ ತೊಡಗಿಸಿಕೊಳ್ಳುವಿಕೆ"ಯ ಮೂಲಕ ಬಂಧಿಸುವ ಕೆಲವು ಹಗ್ಗಗಳನ್ನು ಮುರಿಯಲು ಸಹಾಯವಾಗಬಹುದು. ಇವು ಕರ್ತನ ಸೇವೆಯಲ್ಲಿ ಆತ್ಮದ ಉತ್ಸಾಹವನ್ನು ಕುಗ್ಗಿಸುವವುಗಳಾಗಿವೆ; ಆ ಆತ್ಮೋತ್ಸಾಹವು ಪ್ರತಿಯೊಬ್ಬ ಕಿರೀಟ ಜಯಶಾಲಿಗೂ ಅತ್ಯಂತ ಅನಿವಾರ್ಯವಾಗಿದೆ.

ಕಳೆದ ವರ್ಷ ದೂರದ ಪ್ರದೇಶಗಳಿಂದಲೂ ಅನೇಕರು ಹಾಜರಿದ್ದರು; ಇನ್ನೂ ಅನೇಕರು ಮುಂಬರುವ ಆಚರಣೆಗೆ ಹಾಜರಾಗುವ ಉದ್ದೇಶವನ್ನು ವ್ಯಕ್ತಪಡಿಸಿದ್ದಾರೆ. ವಿಶೇಷವಾಗಿ ಸಾರ್ವಜನಿಕ ಸ್ವರೂಪದ ಸೇವೆಯಲ್ಲಿ ನಿರತರಾಗಿರುವವರು ಖಂಡಿತವಾಗಿ ಬರಲು ಪ್ರಯತ್ನಿಸುವುದು ಉತ್ತಮ. ನೀವು ಚರ್ಚಿಸಲು ಬಯಸುವ ಪ್ರಶ್ನೆಗಳ ಪಟ್ಟಿಯನ್ನು ತಯಾರಿಸಿಕೊಂಡು ಬನ್ನಿ; ಇದರಿಂದ ನಮ್ಮ ಆತ್ಮೀಯ ಸಂಭಾಷಣೆಗಳು ಇನ್ನೂ ಹೆಚ್ಚು ಲಾಭದಾಯಕವಾಗುತ್ತವೆ. ಸಾಧ್ಯವಾದಷ್ಟು ಮಟ್ಟಿಗೆ ನಮ್ಮ ಎಲ್ಲಾ ಓದುಗರಿಗೆ ಸಭೆಯ ಕೂಡಿಗೆಗಳಲ್ಲಿ ಉಚಿತ ಊಟ ಮತ್ತು ವಸತಿ ಒದಗಿಸಲಾಗುವುದು. ಒಂದು ಅಥವಾ ಎರಡು ದಿನಗಳ ಮುಂಚಿತವಾಗಿ ನೀವು ಬರುವ ಬಗ್ಗೆ ನಮಗೆ ತಿಳಿಸಿ. ದಿನಾಂಕವನ್ನು ಗಮನಿಸಿ, ಏಪ್ರಿಲ್ 7ರಂದು ಸಂಜೆ 6 ಗಂಟೆಗೆ ಮೊದಲು ಇಲ್ಲಿ ತಲುಪುವಂತೆ ಪ್ರಯತ್ನಿಸಿ, ಆಗ "ಭೋಜನ"ದ ಆಚರಣೆಗೆ ಸಮಯಕ್ಕೆ ಸರಿಯಾಗಿ ಹಾಜರಾಗಬಹುದು. *Z.W. TOWER* ವ್ಯವಹಾರ ಕಚೇರಿಗೆ ಬನ್ನಿ.

[R740: ಪುಟ 1]

# “ಪಸ್ಕದ ಭೋಜನ”

### *THE PASSOVER SUPPER*

ಹಿಂದಿನ ನೇಮಕಾತಿಯ ಪ್ರಕಾರ, ಮಾರ್ಚ್ 29ರ ಸಂಜೆ ಅದರ ವಾರ್ಷಿಕೋತ್ಸವದಂದು ಕರ್ತನ ಭೋಜನವನ್ನು ಆಚರಿಸಲಾಯಿತು. ಮೊದಲು ಮತ್ತು ನಂತರ ಸ್ವೀಕರಿಸಿದ ಪತ್ರಗಳು ಮತ್ತು ಕಾರ್ಡ್‌ಗಳ ಆಧಾರದ ಮೇಲೆ, ಈ ಘಟನೆಯನ್ನು ನಮ್ಮ ಓದುಗರಲ್ಲಿ ತೀವ್ರ ಆಸಕ್ತಿ ಹೊಂದಿರುವವರು ಪ್ರತಿ ತ್ರೈಮಾಸಿಕದಲ್ಲಿಯೂ (Quarter) ಸಾಮಾನ್ಯವಾಗಿ ಆಚರಿಸಿದ್ದಾರೆ ಮತ್ತು ನಿಸ್ಸಂದೇಹವಾಗಿ ನಾವು ಇನ್ನೂ ಕೇಳಿಲ್ಲದ ಅನೇಕರು ಆಚರಿಸಿದ್ದಾರೆ ಎಂದು ನಾವು ನಿರ್ಣಯಿಸುತ್ತೇವೆ. ಕೆಲವು ಸ್ಥಳಗಳಲ್ಲಿ ಸುಮಾರು ಹನ್ನೆರಡು ಜನರು ಸ್ಮರಿಸುತ್ತಿದ್ದರು, ಇತರ ಸ್ಥಳಗಳಲ್ಲಿ ಎರಡು ಅಥವಾ ಮೂರು ಜನರು ಸ್ಮರಿಸುತ್ತಿದ್ದರು ಮತ್ತು ಕೆಲವೊಮ್ಮೆ ಒಬ್ಬಂಟಿಯಾಗಿ ಸ್ಮರಿಸುತ್ತಿದ್ದರು. ನಾವು ಕಲಿತಂತೆ ಇವೆಲ್ಲಕ್ಕೂ, ನಮ್ಮಂತೆಯೇ ಅಲ್ಲೆಘೆನಿ ನಗರದಲ್ಲಿ, ಇದು ಬಹಳ ಅಮೂಲ್ಯವಾದ ಕಾಲವಾಗಿತ್ತು.

ಇಲ್ಲಿ ಸುಮಾರು ನೂರು ಜನರು ನಮ್ಮ ಸಾಮಾನ್ಯ “ಮೇಲಂತಸ್ತಿನ ವಿಶಾಲವಾದ ಕೊಠಡಿಯಲ್ಲಿ” ಒಟ್ಟುಗೂಡಿದರು ಮತ್ತು ನಮ್ಮ ವಿಮೋಚಕನ ಮುರಿದ ದೇಹ ಹಾಗೂ ಸುರಿಸಿದ ರಕ್ತದ ಸಂಕೇತಗಳಲ್ಲಿ ಪಾಲ್ಗೊಳ್ಳುವ ಮೂಲಕ ನಮ್ಮ ಈಡುಬಲಿಯನ್ನು ಆಚರಿಸಿದರು ಮತ್ತು ಸ್ಮರಿಸಿದರು. ನ್ಯೂಯಾರ್ಕ್, ಪಶ್ಚಿಮ ವರ್ಜೀನಿಯಾ ಮತ್ತು ಪೆನ್ಸಿಲ್ವೇನಿಯಾದ ವಿವಿಧ ಭಾಗಗಳಿಂದ ಎಂಟು ಸಹೋದರ ಸಹೋದರಿಯರು ನಮ್ಮೊಂದಿಗೆ ಹಾಜರಿದ್ದರು ಮತ್ತು ಆಚರಣೆಗೆ ಮುಂಚಿತವಾಗಿ, ನಾವು ಸಂತೋಷಕರವಾದ ಸಾಮಾಜಿಕ ಕೂಟವನ್ನು ಹೊಂದಿದ್ದೆವು, ಇದರಲ್ಲಿ ನಮ್ಮ ತಂದೆಯ ಒಳ್ಳೆಯತನ, ಕಾಳಜಿ ಮತ್ತು ಪ್ರೀತಿಯ ನೆನಪುಗಳಿಂದ ನಮ್ಮ ಹೃದಯಗಳು ಉಲ್ಲಾಸಗೊಂಡವು. ಇತರ ವಿಷಯಗಳ ಜೊತೆಗೆ, ದೇವರೊಂದಿಗಿನ ನಮ್ಮ ಸಂಬಂಧದ ಒಂದು ಸಾಕ್ಷಿಯೆಂದರೆ, ನಮ್ಮ ಪುತ್ರತ್ವ. ಅದು ಏನೆಂದರೆ ಆತನು ತನ್ನ ಯೋಜನೆಗಳನ್ನು ನಮಗೆ ಹೆಚ್ಚು ಹೆಚ್ಚು ಪ್ರಕಟಿಸುತ್ತಿದ್ದನು ಎಂದು ಗಮನಿಸಲಾಯಿತು. ಈ ಸಂಬಂಧದಲ್ಲಿ ಮತ್ತು ಅದರ ಸಾಕ್ಷಿಯಾಗಿ, ಯೇಸುವಿನ ಮಾತುಗಳು ನೆನಪಿಗೆ ಬಂದವು: *“ಇನ್ನು ಮೇಲೆ ನಾನು ನಿಮ್ಮನ್ನು ಆಳುಗಳನ್ನುವದಿಲ್ಲ; ಯಜಮಾನನು ಮಾಡುವಂಥದು ಆಳಿಗೆ ತಿಳಿಯುವದಿಲ್ಲ. ನಿಮ್ಮನ್ನು ಸ್ನೇಹಿತರೆಂದು ಹೇಳಿದ್ದೇನೆ; ತಂದೆಯ ಕಡೆಯಿಂದ ನಾನು ಕೇಳಿದ್ದನ್ನೆಲ್ಲಾ ನಿಮಗೆ ತಿಳಿಸಿದ್ದೇನೆ.” **ಯೋಹಾನ 15:15.***

ನಮ್ಮ ಕರ್ತನು ಕಡೆಯ ಭೋಜನವನ್ನು ಸ್ಥಾಪಿಸಿದ ಸಮಯಕ್ಕೆ ಹೆಚ್ಚು ಹೊಂದಿಕೆಯಾಗುತ್ತದೆ ಎಂದು ನಾವು ಭಾವಿಸಿದ ಎಂಟೂವರೆ ಗಂಟೆ ಬಂದಾಗ, ನಾವು ಸಂಕೇತಗಳಲ್ಲಿ ಪಾಲ್ಗೊಂಡೆವು. ಮೊದಲು ಅವುಗಳ ಮಹತ್ವವನ್ನು ಸಂಕ್ಷಿಪ್ತವಾಗಿ ಪರಿಶೀಲಿಸಿದೆವು. ನಾವು ಅಲ್ಲಿ ಕಂಡದ್ದನ್ನು ಎಲ್ಲರ ಪ್ರಯೋಜನಕ್ಕಾಗಿ ಸಂಕ್ಷಿಪ್ತವಾಗಿ ಇಲ್ಲಿ ಪರಿಶೀಲಿಸುತ್ತೇವೆ.

ರೊಟ್ಟಿಯ ಬಗ್ಗೆ ಕರ್ತನು ಹೇಳಿದ ಮಾತುಗಳನ್ನು ನಾವು ನೆನಪಿಸಿಕೊಂಡೆವು. ಇದು ನಿಮಗೋಸ್ಕರ ಮುರಿಯಲ್ಪಟ್ಟ ನನ್ನ ದೇಹ [ಪ್ರಾತಿನಿಧಿಕವಾಗಿ]. ಇದು

ಪರಲೋಕದಿಂದ ಇಳಿದು ಬಂದ ರೊಟ್ಟಿ, ಇದನ್ನು ತಿನ್ನುವ ಮನುಷ್ಯನು ಸಾಯುವುದಿಲ್ಲ. ನೀವು ಮನುಷ್ಯಕುಮಾರನ ಮಾಂಸವನ್ನು ತಿನ್ನದೆ ಅವನ ರಕ್ತವನ್ನು ಕುಡಿಯದೆ ಹೋದರೆ ನಿಮ್ಮೊಳಗೆ ಜೀವವಿಲ್ಲ. ಸಾಂಕೇತಿಕ ರೊಟ್ಟಿಯಿಂದ ಯೇಸುವಿನ ದೇಹದವರೆಗೆ ನೋಡಿದಾಗ, ಅದು ನಿಜಕ್ಕೂ ನಿಜವಾದ ರೊಟ್ಟಿ ಎಂದು ನಾವು ಅರಿತುಕೊಂಡೆವು. ಅದು ಪರಲೋಕದಿಂದ ಇಳಿದು ಬಂದಿತು. ಅಂದರೆ ಆತನ ಅಸ್ತಿತ್ವವು ಭೂಮಿಯ ಮೇಲೆ ಹುಟ್ಟಲಿಲ್ಲ, ಬದಲಾಗಿ ಪರಲೋಕದಲ್ಲಿ ಹುಟ್ಟಿತು. ಅಂದರೆ ಆತನ ಅಸ್ತಿತ್ವವು ಮಾಂಸಿಕ ಇಚ್ಛೆಯಿಂದ ಹುಟ್ಟಿಲ್ಲ, ಬದಲಾಗಿ ಆತನದು ಪರಲೋಕದಿಂದ ವರ್ಗಾವಣೆಗೊಂಡ ಅಸ್ತಿತ್ವವಾಗಿತ್ತು. ಆತನು ಶ್ರೀಮಂತನಾಗಿದ್ದರೂ, ನಮ್ಮ ನಿಮಿತ್ತ ಬಡವನಾದನು, ಮಾಂಸ ಸ್ವಭಾವದಲ್ಲಿ ಮಾಡಲ್ಪಟ್ಟನು. ನಮ್ಮ ಪರವಾಗಿ ಮರಣದ ಸಂಕಟವನ್ನು ಅನುಭವಿಸುವ ವಿಶೇಷ ಉದ್ದೇಶಕ್ಕಾಗಿ ಕಡಿಮೆ ಸ್ವಭಾವವನ್ನು ಪಡೆದು ಮತ್ತು ಆತನ ಬಡತನದ [ಆತನು *"ತನಗಿದ್ದನ್ನೆಲ್ಲಾ"* ಕೊಟ್ಟನು, ಜೀವವನ್ನು ಸಹ ಕೊಟ್ಟನು] ಮೂಲಕ ನಾವು ಶ್ರೀಮಂತರಾಗಬೇಕೆಂದು ಆತನು ಮನುಷ್ಯನಾಗಿ ಬಂದನು. ನಮ್ಮ ಪ್ರತಿನಿಧಿಯಾದ ಆದಾಮನು ಒಮ್ಮೆ ಹೊಂದಿದ್ದ ಮತ್ತು ತನಗಾಗಿ ಹಾಗೂ ನಮಗಾಗಿ ಕಳೆದುಕೊಂಡ ಎಲ್ಲಾ ಆಶೀರ್ವಾದಗಳನ್ನು ಈತನ ಮೂಲಕ ನಮಗೆ ಹಿಂದಿರುಗಿಸಬಹುದಿತ್ತು.

ಯೇಸು ನಮ್ಮ ಪರವಾಗಿ ಮುರಿಯಲ್ಪಡುವುದು, ನಮಗಾಗಿ ಕೊಯ್ಯಲ್ಪಡುವುದು, ಏಕೆ ಅಗತ್ಯ ಎಂದು ನಾವು ಮತ್ತೊಮ್ಮೆ ಪರಿಗಣಿಸುವಾಗ, ನಮ್ಮಲ್ಲಿ ಜೀವವಿಲ್ಲದ ಕಾರಣ ಎಂದು ನಾವು ಅರಿತುಕೊಂಡೆವು. ಇಡೀ ಜನಾಂಗದೊಳಗೆ ಮರಣ ಕೆಲಸ ಮಾಡುತ್ತಿತ್ತು ಮತ್ತು ಅವರನ್ನು ನುಂಗುತ್ತಿತ್ತು. ಎಲ್ಲರೂ ಒಂದೇ ಅಪರಾಧ ನಿರ್ಣಯಕ್ಕೆ ಒಳಪಟ್ಟ ವಂಶದವರಾಗಿದ್ದರಿಂದ, ಯಾರೂ ತಮ್ಮದೇ ಆದ ಜೀವನವನ್ನು ಉಳಿಸಿಕೊಳ್ಳಲಾಗಲಿಲ್ಲ. ತಮ್ಮ ಸಹೋದರನನ್ನು ವಿಮೋಚನೆ ಮಾಡುವವನು ಅಥವಾ ಅವನಿಗಾಗಿ ದೇವರಿಗೆ ಈಡುಬಲಿ ನೀಡಬಲ್ಲವನು ಕೂಡ ಯಾರೂ ಇರಲಿಲ್ಲ. ಎಲ್ಲರೂ ಅಪರಾಧ ನಿರ್ಣಯಕ್ಕೆ ಒಳಪಟ್ಟು, ಸಾಯುತ್ತಿರುವವರಾಗಿದ್ದರು. ಆದರೆ ಮಾನವನ ಅತ್ಯಂತ ಅಸಹಾಯಕಸ್ಥಿತಿಯು ದೇವರ ಅವಕಾಶವಾಗಿತ್ತು. ದೇವರು ಒಬ್ಬನನ್ನು ಒದಗಿಸಿದ್ದರು. ಆತನು ಮಾನವನಂತೆಯೇ ಸ್ವಭಾವ ಆಗಿದ್ದುದರಿಂದ *ಈಡುಬಲಿಯನ್ನು[ಸರಿ ಸಮಾನವಾದ ಬೆಲೆ]* ನೀಡಲು ಯೋಗ್ಯನಾಗಿದ್ದನು. ಆತನು ಅಪರಾಧ ನಿರ್ಣಯಕ್ಕೆ ಒಳಪಟ್ಟ ಆದಾಮನ ಸಂತತಿಯವನಾಗಿರದೆ (ಪರಲೋಕದಿಂದ ಬಂದವನಾಗಿದ್ದರಿಂದ) ಸ್ವೀಕಾರಾರ್ಹವಾದ ವಿಮೋಚಕನಾಗಿದ್ದನು. ಆದಾಮನ ಪಾಪದಿಂದಾಗಿ ಜನಾಂಗವು ಏದೆನ್‌ನಲ್ಲಿರುವ ಜೀವದಾಯಕ ವೃಕ್ಷಗಳಿಂದ ಕತ್ತರಿಸಲ್ಪಟ್ಟು, ಅವುಗಳಿಂದ ಬೇರ್ಪಟ್ಟು, ಬದುಕಲು ಸಾಧ್ಯವಾಗಲಿಲ್ಲ ಎಂದು ನಾವು ನೋಡಿದ್ದೇವೆ. ಆದರೆ ಈಗ ಅವರು ಯೇಸುವಿನ ಮೂಲಕ ಅವರಿಗೆ ಪರಲೋಕದಿಂದ ಬಂದ ಜೀವದ ರೊಟ್ಟಿಯನ್ನು ಉಡುಗೊರೆಯಾಗಿ ನೀಡಿದ್ದಾರೆ. ಅದನ್ನು ಸ್ವೀಕರಿಸುವುದರಿಂದ ಕಳೆದುಹೋದ ಜೀವನ ಮತ್ತು ಆಶೀರ್ವಾದಗಳನ್ನು ಪುನಃಸ್ಥಾಪಿಸಲಾಗುತ್ತದೆ.

ಯೇಸು ಜೀವದ ರೊಟ್ಟಿಯಾಗಿದ್ದರೂ, ಅಪರಾಧ ನಿರ್ಣಯಕ್ಕೆ ಒಳಪಟ್ಟ ವಂಶದವರಾಗಿರುವ ನಾವು ಆತನ ಪುಣ್ಯದಲ್ಲಿ ಪಾಲ್ಗೊಳ್ಳುವ ಮುಂಚೆ, ಆತನು ಮುರಿಯಲ್ಪಟ್ಟು, ಬಲಿಯಾಗಲು ನಮಗಾಗಿ ಸಾಯಲು ಅಗತ್ಯವಿತ್ತು ಎಂದು ನಾವು ನೋಡಿದ್ದೇವೆ. ಕರ್ತನು ಪರಿಪೂರ್ಣ ಮನುಷ್ಯನಾಗಿದ್ದರಿಂದ, ಮೊದಲ ಪ್ರತಿನಿಧಿಯ ಪಾಪದ ಮೂಲಕ ಎಲ್ಲರ ಮೇಲಾದ ಮರಣದ ಶಾಪವನ್ನು ರದ್ದುಗೊಳಿಸಲು ಆತನು ಸರಿ ಸಮಾನವಾದ ಬೆಲೆಯನ್ನು ಕೊಟ್ಟನು. ಈಗ ಉಳಿದಿರುವುದು, ಆದಾಮನಿಂದ ಬಾಧಿತರಾದ ಪ್ರತಿಯೊಬ್ಬರೂ ಬಂದು ಯೇಸು ನಮಗಾಗಿ ತನ್ನ ತ್ಯಾಗದ ಮೂಲಕ ಪಡೆದುಕೊಂಡ ಆ ಪರಿಪೂರ್ಣತೆಗಳು ಮತ್ತು ಹಕ್ಕುಗಳಲ್ಲಿ *ಪಾಲ್ಗೊಳ್ಳುವುದು[ತಿನ್ನುವುದು].* ನಾವು ನಂಬಿಕೆಯಿಂದ ಕ್ರಿಸ್ತನ ಪರಿಪೂರ್ಣತೆಗಳನ್ನು ತಿನ್ನುತ್ತೇವೆ ಅಥವಾ ಸೂಕ್ತಗೊಳಿಸುತ್ತೇವೆ. ಅಂದರೆ,

ನಂಬಿಕೆಯಿಂದ ಯೇಸು ನಮ್ಮ ಈಡುಬಲಿ ಎಂದು ನಾವು ಅರಿತುಕೊಳ್ಳುತ್ತೇವೆ ಮತ್ತು ನಂಬಿಕೆಯಿಂದ ನಾವು ಪರಿಪೂರ್ಣ ಮನುಷ್ಯನಾಗಿ ಆತನು ಹೊಂದಿದ್ದ ಮತ್ತು ನಮಗಾಗಿ ಮುರಿದ ಅಥವಾ ತ್ಯಾಗ ಮಾಡಿದ ಆ ಪುಣ್ಯಗಳನ್ನು ನಮಗಾಗಿ ಸೂಕ್ತಗೊಳಿಸಿಕೊಳ್ಳುತ್ತೇವೆ.

ಆತನ ಬಲಿಯೂ ಎಲ್ಲರಿಗೂ ಸಾಕಾಗಿದ್ದರೂ, ಬಲಿ ಮಾಡಿದವನನ್ನು ಜೀವದಾತ ಎಂದು ಸ್ವೀಕರಿಸಿ ಅಂಗೀಕರಿಸದ ಹೊರತು ಯಾರೂ ಅದರ ಮೂಲಕ ಜೀವವನ್ನು ಪಡೆಯಲು ಸಾಧ್ಯವಿಲ್ಲ ಎಂಬ ದೇವರ ವ್ಯವಸ್ಥೆಯ ಸೌಂದರ್ಯವನ್ನು ನಾವು ಇಲ್ಲಿ ನೋಡಿದ್ದೇವೆ. ಹೀಗೆ ನೋಡಿದರೆ, ಈಡುಬಲಿಯನ್ನು ಅಂಗೀಕರಿಸುವುದು ಈ ಯುಗಕ್ಕೆ ಅಗತ್ಯವಾದದ್ದು ಮಾತ್ರವಲ್ಲ, ಬದಲಾಗಿ ಮುಂದಿನ ಯುಗದಲ್ಲೂ ಅದು ಅಗತ್ಯವಾಗಿರುತ್ತದೆ. *"ನೀವು ಮಾಂಸವನ್ನು ತಿನ್ನದ ಹೊರತು...ನಿಮ್ಮಲ್ಲಿ ಜೀವವಿಲ್ಲ."* ಎಂಬ ವಾಕ್ಯವು ಶಾಶ್ವತವಾಗಿ ಸತ್ಯವಾಗಿರುತ್ತದೆ. ನೀಡಲಾದ ಈಡುಬಲಿಯು ಎಲ್ಲಾ ಆಶೀರ್ವಾದದ ಅಡಿಪಾಯವಾಗಿದೆ ಎಂಬುದನ್ನು ಎಂದಿಗೂ ಗುರುತಿಸಬೇಕು. *"ಯಾವುದೇ ಮನುಷ್ಯನು ತಂದೆಯ ಬಳಿಗೆ ಬರಲು ಸಾಧ್ಯವಿಲ್ಲ".* ಅಂದರೆ ಲೋಕದ ಪಾಪವನ್ನು ತೆಗೆದುಹಾಕುವ ದೇವರ ಕುರಿಮರಿಯ, ಮುರಿದ ದೇಹ ಮತ್ತು ಸುರಿಸಿದ ರಕ್ತದ ಮೇಲೆ ನಂಬಿಕೆ ಇಡದ ಹೊರತು, ಬೇರೆ ಯಾರಿಗೂ ಆತನೊಂದಿಗೆ *"ಐಕ್ಯ"* ಇರುವುದಿಲ್ಲ. ಆತನು *"ಪಾಪನಿವಾರಣೆ ಮಾಡಬೇಕೆಂಬ ಉದ್ದೇಶದಿಂದ ತನ್ನನ್ನು ಯಜ್ಞಮಾಡಿಕೊಳ್ಳುವವನಾಗಿ ಪ್ರತ್ಯಕ್ಷನಾದನು."*

ಪಾಪಗಳ ಪರಿಹಾರಕ್ಕಾಗಿ ಅನೇಕರಿಗಾಗಿ ಸುರಿಸಿದ ರಕ್ತವನ್ನು ನಾವು ನೋಡಿದ್ದೇವೆ. ಅಂದರೆ, ನಮ್ಮ [ಸಭೆಯ] ಪಾಪಗಳಿಗಾಗಿ ಮಾತ್ರವಲ್ಲ, ಇಡೀ ಪ್ರಪಂಚದ ಪಾಪಗಳಿಗಾಗಿಯೂ ಸಹ ಮತ್ತು ನಾವು ದ್ರಾಕ್ಷಾರಸದಲ್ಲಿ ಅದರ ಸಂಕೇತವನ್ನು ನೋಡಿದ್ದೇವೆ. ಅಂದರೆ, *"ಇದು ನನ್ನ ರಕ್ತ, ಇದು ಒಡಂಬಡಿಕೆಯ ರಕ್ತ, ಇದು ಪಾಪಗಳ ಕ್ಷಮೆಗಾಗಿ ಬಹು ಜನರಿಗೋಸ್ಕರ ಸುರಿಸಲ್ಪಡುವ ರಕ್ತ".* ***(ಮತ್ತಾಯ 26:28).*** ನಾವು ಮೂರು ಮಹಾ ಒಡಂಬಡಿಕೆಗಳನ್ನು ["ಆಹಾರ", *ಪುಟ 148 ನೋಡಿ*] ನೋಡಿದೆವು. ಮೋಶೆಯ ಅಡಿಯಲ್ಲಿನ ನ್ಯಾಯ ಪ್ರಮಾಣದ ಒಡಂಬಡಿಕೆಯು ನಿಜವಾದ ಆಶೀರ್ವಾದವನ್ನು ಸಾಬೀತುಪಡಿಸಲು ಮತ್ತು ಸಾಯುತ್ತಿರುವ ಜನಾಂಗಕ್ಕೆ ಜೀವವನ್ನು ನೀಡಲು ಹೇಗೆ ವಿಫಲವಾಗಿದೆ ಎಂಬುದನ್ನು ನಾವು ನೋಡಿದ್ದೇವೆ, ಆದರೆ ಹೊಸ ಒಡಂಬಡಿಕೆಯು ಹೇಗೆ ಶ್ರೇಷ್ಠವಾಗಿರುತ್ತದೆ ಮತ್ತು ಈಡುಬಲಿಯ ಕಾರಣದಿಂದಾಗಿ ಭೂಮಿಯ ಎಲ್ಲಾ ಕುಟುಂಬಗಳ ಆಶೀರ್ವಾದಗಳನ್ನೂ [ಪುನಃಸ್ಥಾಪನೆ] ಸಾಧಿಸುತ್ತದೆ ಎಂಬುದನ್ನು ನಾವು ನೋಡಿದೆವು. ಹೀಗೆ, ನಾವು ಆತನ ರಕ್ತ, ಅಂದರೆ ಆತನ ತ್ಯಾಗ ಮಾಡಿದ ಜೀವನ ಅಥವಾ ಮಾನವ ಅಸ್ತಿತ್ವವು, ಎಲ್ಲರನ್ನೂ ವಿಮೋಚಿಸಿದ ಮತ್ತು ಅವುಗಳ ಪುನಃಸ್ಥಾಪನೆಯನ್ನು ಸಾಧ್ಯವಾಗಿಸಿದ ಈಡುಬಲಿಯಾಗಿದೆ ಎಂದು ನೋಡಿದ್ದೇವೆ. ಇದು ಅತ್ಯಂತ ದೃಢವಾಗಿ ಒಡಂಬಡಿಕೆಯ ರಕ್ತವಾಗಿತ್ತು, ಹೊಸ ಒಡಂಬಡಿಕೆಯನ್ನು ಕಾರ್ಯರೂಪಕ್ಕೆ ತರುವ ಮುದ್ರೆ ಮತ್ತು ದೃಢೀಕರಣವಾಗಿತ್ತು. ತಂದೆಯ ಬಳಿಗೆ ಹೋಗಲು ನಮಗೆ ಅವಕಾಶ ನೀಡಿದ ರಕ್ತದಲ್ಲಿ ನಾವು ಸಂತೋಷಪಟ್ಟಿದ್ದೇವೆ ಮತ್ತು ಆ ರಕ್ತವನ್ನು ಅಂದರೆ "ಒಡಂಬಡಿಕೆಯ ರಕ್ತ"ವನ್ನು ಹಗುರವಾಗಿ ಅಥವಾ ಸಾಮಾನ್ಯ (ಸಾಧಾರಣ) ವಿಷಯವೆಂದು ಪರಿಗಣಿಸುವವರಲ್ಲಿ, ಆ ಅಮೂಲ್ಯವಾದ ತ್ಯಾಗದಲ್ಲಿ ಪ್ರಕಟವಾದ ದೇವರ ಅನುಗ್ರಹದ ಆತ್ಮಕ್ಕೆ ವಿರುದ್ಧವಾಗಿ ಇರುವವರಲ್ಲಿ ನಾವು ಎಂದಿಗೂ ಇರಬಾರದು ಎಂದು ನಿರ್ಧರಿಸಿದೆವು. ***(ಇಬ್ರಿಯ. 10:16-21 ಮತ್ತು 26-31 ನೋಡಿ.)***

ನಾವು ಈ ವಿಚಾರವನ್ನು ನೋಡಿದಾಗ, ಅಂದರೆ ಯೇಸುವನ್ನು ಪ್ರತಿನಿಧಿಸುವ ರೊಟ್ಟಿ ಮತ್ತು ದ್ರಾಕ್ಷಾರಸವನ್ನು ನೋಡಿದಾಗ, ಅಪೋಸ್ತಲರು ಹೇಳಿದ ***(1 ಕೊರಿಂಥದವರಿಗೆ 10:16,17)*** ಮಾತುಗಳ ಮೂಲಕ, ಅವರ ಆದೇಶದಲ್ಲಿ ನಾವು ಇನ್ನೊಂದು ಮಹತ್ವವನ್ನು

ಗಮನಿಸಬಹುದು. *"ನಾವು ದೇವಸ್ತೋತ್ರಮಾಡಿ ಪಾತ್ರೆಯಲ್ಲಿ ಪಾನಮಾಡುವದು ಕ್ರಿಸ್ತನ ರಕ್ತದಲ್ಲಿ ಪಾಲುಗಾರರಾಗಿದ್ದೇವೆಂಬದನ್ನು ಸೂಚಿಸುತ್ತದಲ್ಲವೇ? ನಾವು ರೊಟ್ಟಿಯನ್ನು ಮುರಿದು ತಿನ್ನುವದು ಕ್ರಿಸ್ತನ ದೇಹದಲ್ಲಿ ಪಾಲುಗಾರರಾಗಿದ್ದೇವೆಂಬದನ್ನು ಸೂಚಿಸುತ್ತದಲ್ಲವೇ?"* ಎಂದು ಅಪೋಸ್ತಲರು ಹೇಳುತ್ತಾರೆ. ಅವರ ಸಲಹೆ ಏನೆಂದರೆ, ಯೇಸು ತನ್ನ ಬಲಿಯನ್ನು ಪ್ರತಿನಿಧಿಸಲು ಸಂಕೇತಗಳನ್ನು ಆಶೀರ್ವದಿಸಿ, ಮುರಿದು ಹಂಚಿದಂತೆ, ನಾವು ಕೂಡಾ ಆ ತ್ಯಾಗವನ್ನು ಗುರುತಿಸುವಾಗ, ಅದೇ ವಿಷಯವನ್ನು ಪ್ರತಿನಿಧಿಸುವುದಿಲ್ಲವೇ? ಅಂದರೆ, ಕ್ರಿಸ್ತನ ದೇಹದ ಸದಸ್ಯರಾಗಿ ನಾವು ಅರ್ಪಣೆಮಾಡಿಕೊಂಡಿದ್ದೇವೆ ಮತ್ತು ನಮ್ಮ ತಲೆಯಾದ ಕ್ರಿಸ್ತನೊಂದಿಗೆ ಅವರ ಬಲಿಯಲ್ಲಿ ಮುರಿಯಲ್ಪಟ್ಟಿದ್ದೇವೆಯೇ?. ಯಾಕೆಂದರೆ, *"ರೊಟ್ಟಿಯು ಒಂದೇಯಾಗಿರುವದರಿಂದ ಅನೇಕರಾಗಿರುವ ನಾವು ಒಂದೇ ದೇಹದಂತಿದ್ದೇವೆ; ಯಾಕಂದರೆ ನಾವೆಲ್ಲರೂ ಆ ಒಂದೇ ರೊಟ್ಟಿಯಲ್ಲಿ ಪಾಲುತಕ್ಕೊಂಡು ತಿನ್ನುತ್ತೇವೆ."*

ಇದನ್ನು ಅದರ ಪರಿಪೂರ್ಣತೆಯಲ್ಲಿ ಪರಿಗಣಿಸಿದರೆ, ಸಂಕೇತಗಳನ್ನು ತಿನ್ನುವುದು ಎರಡು ರೀತಿಯ ಅರ್ಥ ಹೊಂದಿದೆ. ಅದು ನಮ್ಮನ್ನು ವಿಮೋಚಿಸಿದ ಯೇಸುವಿನ ಬಲಿಯನ್ನು ಮತ್ತು ಆತನೊಂದಿಗೆ ನಮ್ಮ ಬಲಿಯನ್ನು ಪ್ರತಿನಿಧಿಸುತ್ತದೆ. ಹೊಸ ಒಡಂಬಡಿಕೆಯ ಮುದ್ರೆಯೊತ್ತುವಿಕೆಯಲ್ಲಿ ನಾವು ಈಗ ಯೇಸುವಿನೊಂದಿಗೆ ಪಾಲುಹೊಂದುತ್ತಿರುವ **[R741: ಪುಟ 1]** ಕಾರಣದಿಂದ, ನಾವು *"ಸಮಸ್ತವನ್ನು ಸರಿಮಾಡುವ ಕಾಲದಲ್ಲಿ"* ಆ ಹೊಸ ಒಡಂಬಡಿಕೆಯ ಎಲ್ಲಾ ಆಶೀರ್ವಾದದ ನಿಯಮಗಳನ್ನು ಲೋಕದ ಮೇಲೆ ತರುವಲ್ಲಿ ಆತನೊಂದಿಗೆ ಹಂಚಿಕೊಳ್ಳಲು ನಮಗೆ ಸಕಾಲದಲ್ಲಿ ಅವಕಾಶ ಸಿಗುತ್ತದೆ ಎಂದು ನಾವು ನೋಡಿದ್ದೇವೆ. ಈ ವಿಷಯದ ಬಗ್ಗೆ ನೆನಪಿನ ಪುನರುಜ್ಜೀವನವು(Revival) ನಮ್ಮೆಲ್ಲರಲ್ಲಿ *"ಕ್ರಿಸ್ತನ ಸಂಕಟಗಳೊಳಗೆ ಇನ್ನೂ ಉಳಿದದ್ದನ್ನು ಸಭೆಯೆಂಬ ಆತನ ದೇಹಕ್ಕೋಸ್ಕರ ನನ್ನ ಶರೀರದಲ್ಲಿ ಅನುಭವಿಸಿ ತೀರಿಸುತ್ತೇನೆ."* ಎಂಬ ನಿರ್ಣಯವು ಬಲಪಡಿಸುವಂತೆ ತೋರುತ್ತಿತ್ತು, ಇದರಿಂದ ಆತನ ಮಹಿಮೆಯು ಪ್ರಕಟವಾದಾಗ ನಾವು ಸಹ ಆನಂದದಿಂದ ಸಂತೋಷಪಡಬಹುದು. ಯೇಸುವಿನೊಂದಿಗೆ ಸಿಂಹಾಸನದಲ್ಲಿ ಕುಳಿತುಕೊಳ್ಳಬೇಕೆಂದು ಬೇಡಿಕೆಯಿಟ್ಟಿದ್ದ ಇಬ್ಬರು ಅಪೊಸ್ತಲರನ್ನು ನಾವು ನೆನಪಿಸಿಕೊಂಡೆವು ಮತ್ತು *"ಪಾತ್ರೆಯಲ್ಲಿ ನೀವು ಕುಡಿಯುವದು ನಿಮ್ಮಿಂದಾದೀತೇ?"* ಎಂಬ ಉತ್ತರದಲ್ಲಿ ಯೇಸುವಿನ ಮಾತುಗಳನ್ನು ನೆನಪಿಸಿಕೊಂಡೆವು. ನಮ್ಮ ಸ್ವಂತ ಬಲಹೀನತೆ ಮತ್ತು ಮಾಂಸ, ಲೋಕ ಮತ್ತು ಸೈತಾನನಿಂದ ಉಂಟಾಗುವ ಅನೇಕ ತೊಂದರೆಗಳು ಮತ್ತು ಆಕರ್ಷಣೆಗಳನ್ನು ನಾವು ಅರಿತುಕೊಂಡೆವು. ಅವು ನಮ್ಮ ಮುಂದೆ ಸಂಕೇತಿಸಲಾದ ದುಃಖ ಮತ್ತು ಮರಣದ ಪಾತ್ರೆಯನ್ನು ದ್ರಾಕ್ಷಾರಸದಲ್ಲಿ ಹಂಚಿಕೊಳ್ಳದಂತೆ ನಮ್ಮನ್ನು ತಡೆಯಲು ಸಂಚು ರೂಪಿಸುತ್ತವೆ. ಆದರೆ ನಮ್ಮ ತಲೆಯಾದ ಕರ್ತನ ಬಲದ ಮೂಲಕ ನಾವು ಎಲ್ಲವನ್ನೂ ಮಾಡಬಹುದು ಎಂದು ಅರಿತುಕೊಂಡೆವು. ಹೌದು, ಕರ್ತನೇ, ನಾವು ಅದನ್ನು ಕುಡಿಯುತ್ತೇವೆ, ನಿನ್ನ ಬಲದಲ್ಲಿ *"ನಮ್ಮಿಂದ ಆಗುವುದು"* ಎಂದು ಹೇಳಿದೆವು. ನಂತರ ನಾವು ಆತನ ವಾಕ್ಯದಿಂದ ನಮ್ಮಲ್ಲಿ ಪ್ರತಿಯೊಬ್ಬರಿಗೂ ಕರ್ತನು ನೀಡಿದ ಉತ್ತರವನ್ನು ಕೇಳಿದ್ದೇವೆ, *"ನನ್ನ ಪಾತ್ರೆಯಲ್ಲಿ ನೀವು ಕುಡಿಯುವದು... ನಿಜ" "ಬಲಹೀನತೆಯಲ್ಲಿಯೇ ನನ್ನ ಬಲವು ಪರಿಪೂರ್ಣವಾಗುತ್ತದೆ" "ನನ್ನ ಹೆಸರಿನಲ್ಲಿ ನೀವು ಏನೇನು ಬೇಡಿಕೊಳ್ಳುವಿರೋ ಅದನ್ನು ನಾನು ಮಾಡುವೆನು".*

ನಾವು ಕ್ರಿಸ್ತನನ್ನು ಸೂಚಿಸುವ ಸಂಕೇತಗಳಲ್ಲಿ ಪಾಲ್ಗೊಂಡ ಬಳಿಕ ನಾವು ಒಂದು ಸ್ತೋತ್ರವನ್ನು ಹಾಡಿ, ಸಾವಿರದ ಎಂಟುನೂರ ಐವತ್ತೆರಡು ವರ್ಷಗಳ ಹಿಂದೆ ಸಂಭವಿಸಿದ ಘಟನೆಗಳ ಬಗ್ಗೆ ಧ್ಯಾನಿಸುತ್ತಾ ನಮ್ಮ ಮನೆಗಳಿಗೆ ಹೋದೆವು. ಆತನ ತೋಟದ ಕ್ಷಣಗಳು, ದ್ರೋಹವು, ಹೆರೋದನ ಸೈನಿಕರು, ಮುಳ್ಳಿನ ಕಿರೀಟ, ಕಡುಗೆಂಪು ಬಣ್ಣದ ರಾಜ ನಿಲುವಂಗಿ, ಪಿಲಾತನು ತನ್ನ

ಕಾಲದ ಮಹಾ ಯಾಜಕರು ಮತ್ತು ಧರ್ಮಗುರುಗಳ ಕೈಯಿಂದ ಆತನನ್ನು ಬಿಡುಗಡೆ ಮಾಡಲು ಮಾಡಿದ ಪ್ರಯತ್ನ, ಅವರು ಆತನನ್ನು ಯಾವುದೇ ಕಾರಣವಿಲ್ಲದೆ ದ್ವೇಷಿಸುತ್ತಿದ್ದರು, ಏಕೆಂದರೆ ಆತನು ಅವರ ಸುಳ್ಳು ಸಿದ್ಧಾಂತಗಳು ಮತ್ತು ಧರ್ಮದ ಹೆಸರಿನಲ್ಲಿ ನಡೆಯುತ್ತಿದ್ದ ಕಪಟತನಗಳನ್ನು ಬಹಿರಂಗಪಡಿಸಿದನು. ನಾವು ಆತನನ್ನು ಶಿಲುಬೆಯಲ್ಲಿ *"ತೀರಿತು"* ಎಂದು ಹೇಳುವುದನ್ನು ಮತ್ತು ಸಾಯುವುದನ್ನು ನೋಡಿದ್ದೇವೆ ಮತ್ತು ನೆನಪಿಸಿಕೊಂಡಿದ್ದೇವೆ. ನಂಬಿಕೆಯ ಕಣ್ಣುಗಳು ಪರಿಸ್ಥಿತಿಯನ್ನು ಗ್ರಹಿಸಿದವು, ಮತ್ತು ನಮ್ಮ ಹೃದಯಗಳು ಕೃತಜ್ಞತಾಪೂರ್ವಕ ಪ್ರೀತಿಯಿಂದ ತುಂಬಿದ್ದವು, ನಂಬಿಕೆಯಿಂದ ಕೂಗಿದವು, "ತೀರಿತು," ನಾವು ವಿಮೋಚನೆಗೊಂಡಿದ್ದೇವೆ, ನಮ್ಮ ಈಡುಬಲಿಯ ಬೆಲೆಯನ್ನು ಪಾವತಿಸಲಾಗಿದೆ. ನಾವು ಈಗ ಜೀವ ಹೊಂದಿದ್ದೇವೆ, ಆತನನ್ನು ಆಹಾರವಾಗಿ ಪೋಷಿಸುತ್ತೇವೆ, ನಮಗಾಗಿ ಆತನು ತ್ಯಜಿಸಿದ ಜೀವವನ್ನೂ, ಹಕ್ಕುಗಳನ್ನೂ ನಾವು ಸ್ವೀಕರಿಸಿ, ನಮ್ಮ ಜೀವನದಲ್ಲಿ ಅದನ್ನು ಅನ್ವಯಿಸುತ್ತೇವೆ. ದೇವರಿಗೆ ಧನ್ಯವಾದಗಳು, *"ನಮ್ಮೆಲ್ಲರ ದೋಷಫಲವನ್ನೂ ಯೆಹೋವನು ಅವನ ಮೇಲೆ ಹಾಕಿದನು; ಆತನು ನಮ್ಮ ಪಾಪಗಳನ್ನು* **[R741 : ಪುಟ 2]** *ತಾನೇ ತನ್ನ ದೇಹದಲ್ಲಿ ಹೊತ್ತುಕೊಂಡು ಮರಣದ ಕಂಬವನ್ನು ಏರಿದನು; ಆತನ ಬಾಸುಂಡೆಗಳಿಂದ ನಿಮಗೆ ಗುಣವಾಯಿತು." (ಯೆಶಾಯ 53:5; 1 ಪೇತ್ರನು 2:24).* ನಮಗೆ ರಕ್ಷಕನಾಗಿಯೂ, ಕರ್ತನಾಗಿಯೂ ಇದ್ದ ಆತನಿಗೆ ಕೃತಜ್ಞತೆಯನ್ನು ನಾವು ಕೊನೆಯಲ್ಲಿ ಹಾಡಿದೆವು.

"ಎಲ್ಲರೂ ಯೇಸುವಿನ ನಾಮದ ಶಕ್ತಿಯನ್ನು
ಸ್ತುತಿಸಲಿ,
ದೇವದೂತರು ಸಾಷ್ಟಾಂಗ ನಮಸ್ಕಾರ ಮಾಡಲಿ,
ರಾಜಮನೆತನದ ಕಿರೀಟವನ್ನು ಹೊರತನ್ನಿರಿ,
ಮತ್ತು ಆತನಿಗೆ ಸರ್ವಲೋಕದ ಕರ್ತನೆಂದು
ಕಿರೀಟಧಾರಣೆ ಮಾಡಿರಿ"

[R509: ಪುಟ 6]

# “ರೊಟ್ಟಿ ಮತ್ತು ದ್ರಾಕ್ಷಾರಸ”

### *THE BREAD AND THE WINE*

---

ವಾಚ್ ಟವರ್ ಸಂಪಾದಕರಿಗೆ: - “ಪಸ್ಕ” ಕುರಿತು ನೀವು ಏಪ್ರಿಲ್ ತಿಂಗಳ ಸಂಚಿಕೆಯಲ್ಲಿ ಬರೆದ ಲೇಖನವನ್ನು ನಾನು ಓದಿದ್ದೇನೆ; ಅದರಿಂದ ನನಗೆ ತುಂಬಾ ಸಂತೋಷವಾಯಿತು. ಕ್ರೈಸ್ತರಿಗೆ ಯೆಹೂದ್ಯರ ಪಸ್ಕದ ಬದಲಾಗಿ ಕರ್ತನ ಭೋಜನವು ಎಂಬುದು ವಾರ್ಷಿಕವಾಗಿ ಆಚರಿಸಬೇಕು ಎಂದು ನಾನು ನಂಬುತ್ತೇನೆ. ಆದರೆ, ನೀವು ಒಂದು ವಿಷಯದ ಕುರಿತು ಸ್ಪಷ್ಟವಾಗಿ ಮಾತನಾಡಿಲ್ಲ. ಅಂದರೆ, ಈ ಭೋಜನದಲ್ಲಿ ಬಳಸಬೇಕಾದ ದ್ರಾಕ್ಷಾರಸದ ಬಗೆ ಕುರಿತು ನಾನು ಉಲ್ಲೇಖಿಸುತ್ತೇನೆ. “ಹುಳಿಯಿಲ್ಲದ ರೊಟ್ಟಿಯನ್ನು” ಬಳಸಬೇಕೆಂದು ನೀವು ಸೂಚಿಸಿದ್ದೀರಿ, ಅದು ಸಂಪೂರ್ಣವಾಗಿ ಸರಿಯೆಂದು ನಾನು ಭಾವಿಸುತ್ತೇನೆ. ಆದರೆ ನಾನು ಕೇಳುವುದೇನೆಂದರೆ: ಯಾವ ರೀತಿಯ ದ್ರಾಕ್ಷಾರಸವನ್ನು ಬಳಸಬೇಕು?. ಹುಳಿ ಎಂಬುದು ಪಾಪದ ಛಾಯೆ, ಇತ್ಯಾದಿ ಎಂದು ನೀವು ಸರಿಯಾಗಿ ಬೋಧಿಸುತ್ತೀರಿ ಮತ್ತು ಕ್ರಿಸ್ತನ ಪರಿಶುದ್ಧತೆಗೆ ಸೂಕ್ತವಾದ ಛಾಯೆಯಲ್ಲ ಎಂದು ನಾನು ಭಾವಿಸುತ್ತೇನೆ. ನನ್ನ ಪ್ರಕಾರ ಹುದುಗಿಸಿದ ಅಥವಾ ಹುಳಿ ಸೇರಿಸಿದ ದ್ರಾಕ್ಷಾರಸವು ಕೂಡ ಅದೇ ರೀತಿಯಾಗಿದೆ. ಅದು ಶುದ್ಧವಲ್ಲ; ಆದ್ದರಿಂದ ಅದು ಕ್ರಿಸ್ತನ ರಕ್ತದ ಯೋಗ್ಯ ಸಂಕೇತವಾಗುವುದಿಲ್ಲ. ಆದರೂ, *“ಹಾವಿನಂತೆ ಕಚ್ಚುತ್ತದೆ, ಹೌದು, ನಾಗದ ಹಾಗೆ ಕಡಿಯುತ್ತದೆ”* ಎನ್ನುವಂತಹ ದ್ರಾಕ್ಷಾರಸವನ್ನು ಬಳಸದೆ, ಸ್ವಚ್ಛ ಮತ್ತು ಶುದ್ಧವಾದ ದ್ರಾಕ್ಷಾರಸವನ್ನು ಬಳಸಬೇಕೆಂದು ನೀವು ನಮಗೆ ಬೋಧಿಸಬೇಕಾಗಿರಲಿಲ್ಲವೇ?.

ಹುದುಗಿ ವಿಷಕಾರಿಯಾದ ನಂತರ, ಯಾವುದೇ ವಸ್ತುವು ಕ್ರಿಸ್ತನ ಶುದ್ಧ ಮತ್ತು ಅಮೂಲ್ಯವಾದ ರಕ್ತದ ಸರಿಯಾದ ಸಂಕೇತವಾಗಲು ಸಾಧ್ಯವೇ?. ಕರ್ತನ ಭೋಜನದ ಯೋಗ್ಯವಾದ ಆಚರಣೆಗೆ ಹುಳಿಯಿಲ್ಲದ ರೊಟ್ಟಿ ಎಷ್ಟು ಮುಖ್ಯವಾಗಿದೆಯೋ ಅದೇ ರೀತಿಯಾಗಿ ಒಳ್ಳೆಯ ದ್ರಾಕ್ಷಾರಸವೂ ಮುಖ್ಯ ಎಂದು ನಾನು ತೀರ್ಮಾನಿಸುತ್ತೇನೆ. ನೀವು ಈ ವಿಷಯಗಳ ಕುರಿತು ಯೋಚಿಸಿ ಮಾತನಾಡುವಿರಿ ಎಂಬ ನಂಬಿಕೆಯಿಂದ, ನಾನು ನಿಮ್ಮ ನಿಜವಾದ ಸೇವಕನಾಗಿದ್ದೇನೆ.

## OUR RESPONSE
## ನಮ್ಮ ಉತ್ತರ

ನಾವು ಪೂರ್ಣ ತ್ಯಾಗದ ಉದ್ದೇಶದೊಂದಿಗೆ ಸಹಾನುಭೂತಿಯನ್ನು ಹೊಂದಿದ್ದೇವೆ ಮತ್ತು ಅದಕ್ಕೆ ವಿರುದ್ಧವಾಗಿ ಏನಾದರೂ ಹೇಳಲು ನಮಗೆ ಇಷ್ಟವಿಲ್ಲ. ಆದ್ದರಿಂದ ನಾವು ಇಲ್ಲಿಯವರೆಗೆ ಮೇಲೆ ತಿಳಿಸಿದ ಈ ವಿಷಯದ ಬಗ್ಗೆ ಮೌನವಾಗಿದ್ದೇವೆ. ಆದಾಗ್ಯೂ, ಇತ್ತೀಚೆಗೆ ಅನೇಕ ಜನರು ಇದರ ಬಗ್ಗೆ ಕೇಳಿರುವುದರಿಂದ, ಉತ್ತರ ಕೊಡುವ ಸಮಯ ಬಂದಿದೆ ಎಂದು ನಾವು ಭಾವಿಸುತ್ತೇವೆ.

ಮೊದಲು ನಾವು ಈ ವಿಷಯವನ್ನು ಹೇಳಬೇಕಾಗಿದೆ, ನಮ್ಮ ಹವಾಮಾನದಲ್ಲಿಯೂ ಹಾಗೂ ಇಂದಿನ ವಿಶ್ರಾಂತಿ ಇಲ್ಲದ, ಆತುರದ ಜೀವನಶೈಲಿಗಳ ವಿಧಾನಗಳ ಬಗ್ಗೆ ಅನೇಕ ವಿಷಯಗಳಿವೆ. ಇದು ಮನುಷ್ಯರು, ಒಂದು ಬಾರಿ ಮಾದಕ ದ್ರವ್ಯಗಳನ್ನು

ಬಳಸಲು ಪ್ರಾರಂಭಿಸಿದಾಗ, ಅದು ಹೆಚ್ಚುವರಿಯಾಗಿ ಉಪಯೋಗಿಸಲ್ಪಡುವುದಕ್ಕೆ ಇದು ಬಹುತೇಕ ಅನಿವಾರ್ಯವಾಗಿ ಕಾರಣವಾಗುತ್ತದೆ. ಇದಲ್ಲದೆ, ಇಂದಿನ ಕಾಲದಲ್ಲಿ ತಯಾರಾಗುತ್ತಿರುವ ಹೆಚ್ಚಿನ ಮಾದಕ ಮದ್ಯಗಳು(intoxicating liquors), ಮಾದಕ ದ್ರವ್ಯ(drugged) ಮತ್ತು ಕಲಬೆರಕೆಯಾಗಿದ್ದು(adulterated), ಅವುಗಳ ಬಳಕೆಯಿಂದ ಉಂಟಾಗುವ ಅಪಾಯಗಳು ಮತ್ತು ದುಷ್ಪರಿಣಾಮಗಳನ್ನು ಹೆಚ್ಚಿಸುತ್ತದೆ ಎಂಬುದು ಸ್ಪಷ್ಟವಾಗಿದೆ.

ಈ ಕಾರಣಗಳಿಗಾಗಿ ನಾವು, ಮದ್ಯಪಾನ ನಿಷೇಧವನ್ನು ಬೆಂಬಲಿಸುವ ನಿಷೇಧವಾದಿಗಳಿಗೆ ನಮ್ಮ ಸಹಾನುಭೂತಿಯನ್ನು ವ್ಯಕ್ತಪಡಿಸುತ್ತೇವೆ. ಮದ್ಯಪಾನವನ್ನು ಕಲಬೆರಕೆ ಮಾಡುವವರ ವಿರುದ್ಧ ಪ್ರಸ್ತುತ ಕಾನೂನುಗಳನ್ನು ಜಾರಿಗೊಳಿಸುವ ಬಗ್ಗೆ ಅಥವಾ ಅದರ ತಯಾರಿಕೆ ಮತ್ತು ಮಾರಾಟವನ್ನು ಸಂಪೂರ್ಣವಾಗಿ ನಿಲ್ಲಿಸುವ ಹೊಸ ಕಾನೂನುಗಳನ್ನು ಜಾರಿಗೆ ತರಲು ಅವರಿಗೆ ಸಾಧ್ಯವಾದರೆ (ನಮಗೆ ಅನುಮಾನವಿದೆ) ನಾವು ಸಂತೋಷಪಡಬೇಕು. ಆದರೆ, ಈ ಪ್ರಪಂಚದ ಇಹಲೋಕಾಧಿಪತಿಯಾದ ಸೈತಾನನನ್ನು ಕಟ್ಟಿ ಹಾಕಲ್ಪಡುವವರೆಗೂ ಇದು ನೆರವೇರುವುದಿಲ್ಲ ಎಂದು ನಾವು ಭಾವಿಸುತ್ತೇವೆ.

ಆದರೆ ನಮ್ಮ ಸಹಾನುಭೂತಿಯ ಹೊರತಾಗಿಯೂ, ನಮ್ಮ ಓದುಗರ ಬಹುಮತದ ಸಹಾನುಭೂತಿ ಹಾಗೂ ಪೂರ್ವಕಲ್ಪಿತ ಅಭಿಪ್ರಾಯಗಳು ಪೂರ್ಣ ತ್ಯಾಗದ ಉದ್ದೇಶದ ಪರವಾಗಿವೆ ಎಂಬುದನ್ನು ತಿಳಿದಿದ್ದರೂ ಸಹ ನಾವು ಮಾತನಾಡುವುದಾದರೆ, ಅದು ನಾವು ಸತ್ಯವೆಂದು ಪರಿಗಣಿಸಬೇಕು, ಅದು ಸತ್ಯವಾಗಿರಬೇಕು. ಯಾರ ವಿಗ್ರಹ ಮುರಿದುಹೋದರೂ ಅಥವಾ ಯಾರ ಸಿದ್ಧಾಂತಗಳು ಹಾನಿಯಾದರೂ ಪರವಾಗಿಲ್ಲ ಮತ್ತು ಅದು ಇಲ್ಲಿದೆ.

ಸತ್ಯವೇದ ಎಂದಿಗೂ ಮಾದಕ ದ್ರಾಕ್ಷಾರಸದ ಬಳಕೆಯನ್ನು ಬೆಂಬಲಿಸುವುದಿಲ್ಲ ಎಂಬ ಹೇಳಿಕೆಯನ್ನು ಉತ್ಸಾಹಭರಿತ ಸಂಯಮದ ಪ್ರತಿಪಾದಕರು ಹೆಚ್ಚಾಗಿ ಪುನರಾವರ್ತಿಸುತ್ತಾರೆ. ಯೇಸು ಮಾಡಿದ ಹಾಗೂ ಕುಡಿದ ದ್ರಾಕ್ಷಾರಸವು ಕೇವಲ ದ್ರಾಕ್ಷಿಯ ರಸವಾಗಿತ್ತು, ಮದ್ಯಪಾನವಲ್ಲ ಎಂದು ಅವರು ಹೇಳುತ್ತಾರೆ ಮತ್ತು ಈ ವಿಭಿನ್ನ ಮದ್ಯಪಾನಗಳನ್ನು ಉಲ್ಲೇಖಿಸುವಾಗ ಬೇರೆ ಗ್ರೀಕ್ ಪದವನ್ನು ಬಳಸಲಾಗಿದೆ ಎಂದು ಅವರು ಹೇಳುತ್ತಾರೆ. ಇದು ತಪ್ಪು ಎಂದು ನಾವು ಉತ್ತರಿಸುತ್ತೇವೆ. “ದ್ರಾಕ್ಷಿಯ ರಸ” ಅಥವಾ "ಹೊಸ ದ್ರಾಕ್ಷಾರಸ" ಎಂದರ್ಥದ ಗ್ರೀಕ್ ಪದ *“ಗ್ಲ್ಯುಕೋಸ್” (gleukos)* ಹೊಸ ಒಡಂಬಡಿಕೆಯಲ್ಲಿ ಒಮ್ಮೆ ಮಾತ್ರ ***(ಅಪೋಸ್ತಲ ಕೃತ್ಯಗಳು 2:13)*** ಕಂಡುಬರುತ್ತದೆ. ಮತ್ತು ಅಲ್ಲಿ ಅದರ ಬಳಕೆಯು, ಅತಿಯಾಗಿ ಬಳಸಿದರೆ, ಅದು ಮನಸ್ಸನ್ನು ಗೊಂದಲಗೊಳಿಸುತ್ತದೆ ಎಂದು ಸೂಚಿಸುತ್ತದೆ. ಹೊಸ ಒಡಂಬಡಿಕೆಯಲ್ಲಿ ಪ್ರತಿಯೊಂದು ಸಂದರ್ಭದಲ್ಲಿಯೂ “ಮದ್ಯಪಾನವನ್ನು” ಅನುವಾದಿಸಲಾಗಿರುವ ಪದ *‘ಓಯಿನೋಸ್’(oinos)*. ಇದು ಸಾಮಾನ್ಯ ರೀತಿಯ ದ್ರಾಕ್ಷಾರಸವನ್ನು ಸೂಚಿಸುತ್ತದೆ. ಇದು ಮಿತಿಮೀರಿ ಬಳಸಿದಾಗ ಯಾವಾಗಲೂ ಅಮಲೇರಿಸುತ್ತದೆ.

*“ಓಯಿನೋಸ್” (oinos)* ಕುಡಿದು ಮತ್ತೇರಿಸುತ್ತದೆಯೇ ಎಂಬುದರ ಬಗ್ಗೆ ದಯವಿಟ್ಟು ಈ ಕೆಳಗಿನ ವಾಕ್ಯಗಳನ್ನು ಗಮನಿಸಿ. *“ಮದ್ಯಪಾನ” (ಓಯಿನೋಸ್) ಮಾಡಿ ಮತ್ತರಾಗಬೇಡಿರಿ. ಯಾಕಂದರೆ ಅದರಿಂದ ಪಟಿಂಗತನವು ಹುಟ್ಟುತ್ತದೆ."* ***(ಎಫೆಸ 5:18. 1 ಪೇತ್ರ 4:3; ಲೂಕ 1:15 ಮತ್ತು 7:33,34 ಸಹ ನೋಡಿ).***

ಆದರೆ, ದ್ರಾಕ್ಷಾರಸದಲ್ಲಿ ಹುಳಿಯ ಅಂಶಗಳು ಇದ್ದರೆ, ಯೇಸು "ಭೋಜನ"ವನ್ನು ಸ್ಥಾಪಿಸಿದಾಗ ಅದನ್ನು ಬಳಸಲಿಲ್ಲ ಎಂದು ಸಾಬೀತುಪಡಿಸುತ್ತದೆ ಎಂದು ಸೂಚಿಸಲಾಗಿದೆ. ಇದು ಹಾಗಿದ್ದರೆ, ಹೇಳಲಾಗುತ್ತಿರುವುದನ್ನು ಅದು ಸಾಬೀತುಪಡಿಸುತ್ತದೆ ಎಂದು ನಾವು ಒಪ್ಪಿಕೊಳ್ಳುತ್ತೇವೆ; ಆದರೆ ಅದು ಹಾಗಲ್ಲ. ಮದ್ಯಪಾನ ವಿರೋಧಿ ಭಾಷಣಕಾರರು ಈ

ಹೇಳಿಕೆಯನ್ನು ನಿಸ್ಸಂದೇಹವಾಗಿ ಹಲವಾರು ಬಾರಿ ಅಜ್ಞಾನದಿಂದ ಮಾಡಬಹುದು ಹಾಗೂ ಮಾಡುತ್ತಿದ್ದಾರೆ. ಆದರೆ ವಿಜ್ಞಾನಿಗಳು ಮದ್ಯವ್ಯಸನಿ (Alcoholic) ಅಥವಾ ವೈನಸ್ ಹುದುಗುವಿಕೆ(vinous fermentation) ಮತ್ತು ಕೊಳೆಯುವ ಹುದುಗುವಿಕೆಯ(putrefactive fermentation) ನಡುವೆ ಸಾಕಷ್ಟು ವ್ಯತ್ಯಾಸವನ್ನು ಗುರುತಿಸುತ್ತಾರೆ. ಮೊದಲನೆಯ ಪ್ರಕ್ರಿಯೆಯ(vinous fermentation) ಫಲಿತಾಂಶವೆಂದರೆ ಕಲ್ಮಶಗಳನ್ನು ಹೊರಹಾಕಿ ದ್ರಾಕ್ಷಾರಸದಂತೆ ಸಿಹಿ ಮತ್ತು ರುಚಿಕರವಾದ ದ್ರವವನ್ನು ಉತ್ಪಾದಿಸುವುದು, ಆದರೆ ಇನ್ನೊಂದು ಪ್ರಕ್ರಿಯೆಯು(putrefactive fermentation) ಹುಳಿ ಮತ್ತು ಅಂತಿಮವಾಗಿ ಕೊಳೆಯುವಿಕೆಯನ್ನು ಉತ್ಪಾದಿಸುತ್ತದೆ. ಈ ಕೊನೆಯ ಪ್ರಕ್ರಿಯೆಯು ರೊಟ್ಟಿಯನ್ನು ಹುಳಿ ಮಾಡಲು ಬಳಸಲಾಗುತ್ತದೆ, ಬೇಯಿಸುವ ಮೂಲಕ ಅದರ ಆರಂಭಿಕ ಬೆಳವಣಿಗೆಯಲ್ಲಿ ಕೊಳೆತ ಅಥವಾ ಶಿಲೀಂಧ್ರದ(fungus) ಬೆಳವಣಿಗೆಯನ್ನು ನಿಲ್ಲಿಸಲಾಗುತ್ತದೆ.

ಯಹೂದಿ ಪದ್ಧತಿಗೆ ಸಂಬಂಧಿಸಿದಂತೆ, ಯಹೂದಿಗಳು ಪಸ್ಕದಂದು ದ್ರಾಕ್ಷಾರಸವನ್ನು ಬಳಸುತ್ತಾರೆ ಮತ್ತು ಹುಳಿಯನ್ನು ದೂರವಿಡುವುದರಿಂದ, ದ್ರಾಕ್ಷಾರಸವು ಹುಳಿಯ ಗುಣಮಟ್ಟವನ್ನು ಹೊಂದಿದೆ ಎಂಬ ಹೇಳಿಕೆಯನ್ನು ಸಾಬೀತುಪಡಿಸುವ ಬದಲು ಅದು ನಿರಾಕರಿಸುತ್ತದೆ. ಅವರು ನಿಜವಾದ ದ್ರಾಕ್ಷಾರಸವನ್ನು ಉಪಯೋಗಿಸುತ್ತಿದ್ದರು. ಹುದುಗಿಸದ ದ್ರಾಕ್ಷಾರಸವನ್ನು ಕರ್ತನು ಬಳಸಿದನು ಎಂಬ ಹೇಳಿಕೆಯು ಇನ್ನೊಂದು ರೀತಿಯಲ್ಲಿ ತಪ್ಪಾಗಿದೆ ಎಂದು ನಾವು ನೋಡಬಹುದು: ಪ್ಯಾಲೆಸ್ಟೈನ್‌ನಲ್ಲಿ(Palestine) ದ್ರಾಕ್ಷಿಯನ್ನು ಕೊಯ್ಯುವ ಕಾಲವು ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳುಗಳಲ್ಲಿ ಇರುತ್ತಿತ್ತು ಮತ್ತು ಪಸ್ಕ ಹಬ್ಬವು ಸುಮಾರು ಆರು ತಿಂಗಳ ನಂತರವಾಗಿತ್ತು. ಅಕ್ಟೋಬರ್‌ನಲ್ಲಿ ತಯಾರಿಸಿದ ದ್ರಾಕ್ಷಾರಸವನ್ನು ಏಪ್ರಿಲ್‌ಗಿಂತ ಮೊದಲು ಹುದುಗಿಸಲಾಗುತ್ತದೆ.

ಯೇಸುವಿನ ಸಾಕ್ಷ್ಯವೆಂದರೆ ಹಳೆಯ ದ್ರಾಕ್ಷಾರಸವು ಹೊಸದಕ್ಕಿಂತ ಉತ್ತಮವಾಗಿದೆ *(ಲೂಕ 5:39; ಯೋಹಾನ 2:10)* ಮತ್ತು ಅವರು ಬಳಸಿದ ದ್ರಾಕ್ಷಾರಸವು ಹುದುಗಿತು ಎಂಬ ಅಂಶವನ್ನು, ಹೊಸ ದ್ರಾಕ್ಷಾರಸವನ್ನು (ಇದರಲ್ಲಿ ಮದ್ಯವ್ಯಸನಿ ಹುದುಗುವಿಕೆ ಪೂರ್ಣಗೊಳ್ಳಲಿಲ್ಲ) ಮೊದಲು ಬಳಸಲಾಗಿದ್ದ ಹಳೆಯ ಬಾಟಲಿಗಳಿಗೆ [ಚರ್ಮಗಳಿಗೆ/ಬುದ್ದಲಿಗಳಲ್ಲಿ] ಹಾಕುವ ಮತ್ತು ಅವುಗಳ ಸ್ಥಿತಿಸ್ಥಾಪಕತ್ವವನ್ನು ಕಳೆದುಕೊಂಡು, ಹುದುಗುವಿಕೆಯಿಂದ ಉಂಟಾಗುವ ಅನಿಲಗಳ ವಿಸ್ತರಣೆಯ ಅಡಿಯಲ್ಲಿ ಸಿಡಿಯುವ ದೃಷ್ಟಾಂತದಿಂದ ತೋರಿಸಲಾಗಿದೆ.

ಆದರೆ, ಮೊದಲೇ ಹೇಳಿದಂತೆ, ಇಲ್ಲಿನ ಸಂದರ್ಭಗಳು, ಹವಾಮಾನ ಇತ್ಯಾದಿಗಳು ಹಾಗೂ ಮದ್ಯಪಾನಗಳ(liquors) ಶುದ್ಧತೆಯು ಯೇಸು ಮತ್ತು ಅಪೋಸ್ತಲರಿಗಿಂತ ಬಹಳ ಭಿನ್ನವಾಗಿದೆ ಮತ್ತು ನಮ್ಮ ಕರ್ತನ ಮರಣವನ್ನು ಸ್ಮರಿಸುವ ಸಂದರ್ಭದಲ್ಲಿ ಯಾರಾದರೂ ದ್ರಾಕ್ಷಾರಸವನ್ನು ಸೇವಿಸುವುದರಿಂದ ಅಪಾಯದಲ್ಲಿದೆ ಎಂದು ಭಾವಿಸಿದರೆ, ಅಂತಹ ವ್ಯಕ್ತಿಯು ಒಣದ್ರಾಕ್ಷಿಯ ರಸವನ್ನು ಬಳಸಬೇಕೆಂದು ನಾವು **[R509: ಪುಟ 7]** ಶಿಫಾರಸ್ಸು ಮಾಡುತ್ತೇವೆ, ಅದು ದ್ರಾಕ್ಷಾರಸವಲ್ಲದಿದ್ದರೂ, ಖಂಡಿತವಾಗಿಯೂ *"ದ್ರಾಕ್ಷಾಹಣ್ಣಿನ ಫಲ"(ದ್ರಾಕ್ಷಾರಸ).* ನಾವು ಪ್ರತಿ ವರ್ಷ ಒಣದ್ರಾಕ್ಷಿಯ ರಸವನ್ನು ಒದಗಿಸುತ್ತೇವೆ, ಆದರೆ ನಮ್ಮ ಕೊನೆಯ ಭೋಜನ ಆಚರಣೆಯಲ್ಲಿ ಒಬ್ಬ ವ್ಯಕ್ತಿ ಮಾತ್ರ ಅದನ್ನು ಬಳಸಿದ್ದರು.

[R465 : ಪುಟ 3]

# "ಪಸ್ಕ"

## *THE PASSOVER*

ಇದು ಇಸ್ರಾಯೇಲ್ಯರ ಧಾರ್ಮಿಕ ಆಚರಣೆಗಳಲ್ಲಿ ಅತ್ಯಂತ ಪ್ರಮುಖವಾದದ್ದು ಮತ್ತು ಅವರ ನಡುವೆ ಇಂದಿಗೂ ಹಾಗೆಯೇ ಇದೆ. ಇದು ಅವರಿಗೆ ನೀಡಲಾದ "ನ್ಯಾಯಪ್ರಮಾಣದ" ಛಾಯೆಯ ಮೊದಲ ಲಕ್ಷಣವಾಗಿತ್ತು.

ಈ ಆಚರಣೆಯನ್ನು ಮೂಲತಃ ಸ್ಥಾಪಿಸಿದಂತೆ, ವಿಮೋಚನಕಾಂಡ 12ನೇ ಅಧ್ಯಾಯದಲ್ಲಿ ವಿವರಿಸಲಾಗಿದೆ. ದೋಷವಿಲ್ಲದ ಕುರಿಮರಿಯನ್ನು ಕೊಯ್ಯಲ್ಪಟ್ಟು ಅದರ ರಕ್ತವನ್ನು ಮನೆಯ ಎರಡು ನಿಲುವು ಗಂಬಗಳಿಗೂ ಬಾಗಿಲ ಮೇಲಿನ ಅಡ್ಡಗಂಬಕ್ಕೂ ಹಚ್ಚಬೇಕು, ಹಾಗೆಯೇ ಆ ಕುಟುಂಬದವರು ಸುಟ್ಟ ಕುರಿಮರಿಯ ಮಾಂಸವನ್ನು ಹುಳಿಯಿಲ್ಲದ ರೊಟ್ಟಿ ಮತ್ತು ಕಹಿಯಾದ ಪಲ್ಯಗಳೊಂದಿಗೆ ತಿನ್ನುತ್ತಿದ್ದರು. ಆ ರಾತ್ರಿ (ಮೊದಲನೇ ತಿಂಗಳಿನ ಹದಿನಾಲ್ಕನೇ ತಾರೀಖು, ಯಹೂದಿ ಸಮಯ), ಬಾಗಿಲಿಗೆ ಚಿಮುಕಿಸಿದ ರಕ್ತ ಮತ್ತು ಸುಟ್ಟ ಕುರಿಮರಿಯನ್ನು ತಿಂದ ಕಾರಣದಿಂದಾಗಿ ಇಸ್ರೇಲ್‌ನ ಚೊಚ್ಚಲ ಮಕ್ಕಳು ಹಾದು ಹೋಗಲ್ಪಟ್ಟರು ಅಥವಾ ಐಗುಪ್ತ ದೇಶದ ಚೊಚ್ಚಲ ಮಕ್ಕಳಿಗೆ ಬಂದ ಮರಣದ ಬಾಧೆಯಿಂದ ತಪ್ಪಿಸಿಕೊಂಡರು. ಈ ಕಾರಣದಿಂದಾಗಿ, ಮರುದಿನ ಇಸ್ರಾಯೇಲ್ಯರು ಐಗುಪ್ತದ ಬಂಧನದಿಂದ ಹೊರಬಂದರು ಮತ್ತು ಸ್ವತಂತ್ರರಾದರು. ಆದ್ದರಿಂದ, ದೇವರ ಆಜ್ಞೆಯಿಂದ ***(ವಿಮೋಚನಕಾಂಡ 12:14)***. ಅವರು ಪ್ರತಿ ವರ್ಷ ಅದರ ವಾರ್ಷಿಕೋತ್ಸವದಂದು ಅದನ್ನು ಸ್ಮರಿಸುತ್ತಾರೆ.

ಇಸ್ರಾಯೇಲ್ಯರು ಈ ಪಸ್ಕವನ್ನು ಆಚರಣೆಯನ್ನಾಗಿ ಮಾತ್ರ ನೋಡಿದರು, ಆದರೆ ಅದರ ನಿಜಸ್ವರೂಪವನ್ನು ಅರ್ಥಮಾಡಿಕೊಳ್ಳಲಿಲ್ಲ. *"ಯಾಕಂದರೆ ನಮ್ಮ ಪಸ್ಕದ ಯಜ್ಞದ ಕುರಿಯು ಕೊಯಿದದೆ; ಆದಕಾರಣ ಹಬ್ಬವನ್ನು ಆಚರಿಸೋಣ."* ***(1 ಕೊರಿಂಥದವರಿಗೆ 5:7,8)*** ಎಂಬ ಈ ಮಾತುಗಳನ್ನು ಅಪೋಸ್ತಲರು ಬರೆಯುವಂತೆ ದೇವರ ಪವಿತ್ರಾತ್ಮನು ಅವರನ್ನು ಪ್ರೇರೇಪಿಸಿ ಅದರ ಕೀಲಿಯ ಅರ್ಥವನ್ನು ನಮಗೆ ನೀಡಿರಲಿಲ್ಲದಿದ್ದರೆ, ನಾವು ಸಹ ಇಸ್ರಾಯೇಲ್ಯರಂತೆ ಕತ್ತಲೆಯಲ್ಲೇ ಇರುತ್ತಿದ್ದೆವು.

ಪವಿತ್ರಾತ್ಮವು ಈ ವಿಷಯದ ಕಡೆಗೆ ನಮ್ಮ ಗಮನವನ್ನು ಸೆಳೆಯುತ್ತದೆ ಅದೇನೆಂದರೆ, *"ದೇವರ ಕುರಿಮರಿಯಾದ"* ಯೇಸು ಪಸ್ಕದ ಕುರಿಮರಿಯ ನಿಜಸ್ವರೂಪವಾಗಿದ್ದನು ಎಂದು ಸ್ಪಷ್ಟವಾಗಿ ತೋರಿಸುವ ಇತರ ವಾಕ್ಯಗಳನ್ನು ನಾವು ಕಾಣುತ್ತೇವೆ ಮತ್ತು ಆತನ ಮರಣವು ಯಾವ ರೀತಿ "ಚೊಚ್ಚಲ ಮಕ್ಕಳ ಸಭೆ"ಯನ್ನು ಮರಣದಿಂದ ಬಿಡುಗಡೆ ಮಾಡಲು ಅಗತ್ಯವಾಗಿತ್ತೋ, ಅದೇ ರೀತಿ ಇಸ್ರಾಯೇಲ್ಯರ ಚೊಚ್ಚಲ ಮಕ್ಕಳ ಬಿಡುಗಡೆಗೆ ಛಾಯೆಯಾದ ಕುರಿಮರಿಯ ಮರಣ ಅಗತ್ಯವಾಗಿತ್ತು. ಹೀಗೆ, ಪವಿತ್ರಾತ್ಮದ ಮಾರ್ಗದರ್ಶನದಲ್ಲಿ, ಯೇಸು ತನ್ನ ಶಿಷ್ಯರೊಂದಿಗೆ ಊಟ ಮಾಡಿದ ಕೊನೆಯ ಪಸ್ಕದ ಸಮಯದಲ್ಲಿ ಆತನ ಮಾತುಗಳು ಮತ್ತು ಕಾರ್ಯಗಳ ಕಡೆಗೆ ನಾವು ಬರುತ್ತೇವೆ.

ದೇವರು ಅತ್ಯಂತ ನಿಖರವಾಗಿದ್ದಾರೆ. ಮೊದಲನೇ ತಿಂಗಳ ಹದಿನಾಲ್ಕನೆಯ ದಿನದಂದು ಛಾಯೆಯಾದ

ಕುರಿಮರಿಯನ್ನು ಕೊಲ್ಲುವುದು, ದೇವರ ಯೋಜನೆಯಲ್ಲಿ ಯೇಸು ಆ ಸಮಯದಲ್ಲಿ ಮರಣ ಹೊಂದುತ್ತಾರೆ ಎಂಬ ಅಂಶವನ್ನು ಮುನ್ಸೂಚಿಸಲಾಗಿದೆ ಅಥವಾ ಛಾಯೆಯಾಗಿ ತೋರಿಸಲಾಗಿದೆ. ದೇವರು ಯಹೂದ್ಯರ ನಡುವೆ ಸಮಯದ ಲೆಕ್ಕಾಚಾರವನ್ನು ಇಂತಹ ರೀತಿಯಲ್ಲಿ ಯೋಜಿಸಿದ್ದರಿಂದ, ಯೇಸು ತನ್ನ ಶಿಷ್ಯರೊಂದಿಗೆ ಪಸ್ಕವನ್ನು ಸ್ಮರಿಸಲು ಸಾಧ್ಯವಾಯಿತು ಮತ್ತು ಅದೇ ದಿನದಲ್ಲಿ ಸ್ವತಃ ನಿಜವಾದ "ಯಜ್ಞದ ಕುರಿ" ಯಾಗಿ ಕೊಲ್ಲಲ್ಪಟ್ಟನು. ಇದು ಗಮನಾರ್ಹವಾದ ವಿಷಯವಾಗಿದೆ. (ಯಹೂದ್ಯರ ದಿನವು ಇಂದಿನ ದಿನದಂತೆ ಮಧ್ಯರಾತ್ರಿಯಿಂದ ಮಧ್ಯರಾತ್ರಿವರೆಗೆ ಲೆಕ್ಕ ಹಾಕುವುದಿಲ್ಲ. ಬದಲಾಗಿ, ಅವರ ದಿನವು ಸಂಜೆ ಆರು ಗಂಟೆಗೆ ಪ್ರಾರಂಭವಾಗಿ ಮರುದಿನದ ಸಂಜೆ ಆರು ಗಂಟೆಗೆ ಮುಕ್ತಾಯಗೊಳ್ಳುತ್ತಿತ್ತು.) ಹೀಗಾಗಿ ಯೇಸು ಮತ್ತು ಶಿಷ್ಯರು ಪಸ್ಕ ಭೋಜನವನ್ನು ಬಹುಶಃ, ಸುಮಾರು ರಾತ್ರಿ ಎಂಟು ಗಂಟೆ ಸಮಯದಲ್ಲಿ ಸೇವಿಸಿದರು. ಅದು "ಆತನಿಗೆ ದ್ರೋಹ ಮಾಡಲಾದ ಅದೇ ರಾತ್ರಿ" ಯಾಗಿತ್ತು ಮತ್ತು ಅದೇ ದಿನದಲ್ಲಿ ಯೇಸು ಶಿಲುಬೆಗೆ ಹಾಕಲ್ಪಟ್ಟನು. ಈ ಮೂಲಕ ಧರ್ಮಶಾಸ್ತ್ರದ ಪ್ರತಿಯೊಂದು ಸೊನ್ನೆಯಾದರೂ ಒಂದು ಗುಡುಸಾದರೂ ಸಂಪೂರ್ಣವಾಗಿ ನೆರವೇರಿತು.

ಯೇಸು ತನ್ನ ಶಿಲುಬೆಗೇರಿಸುವಿಕೆಗೆ ಕೇವಲ ಐದು ದಿನಗಳ ಮೊದಲು, ತನ್ನನ್ನು ಇಸ್ರಾಯೇಲ್ ಜನರ ಮುಂದೆ ಸ್ವೀಕಾರ ಅಥವಾ ತಿರಸ್ಕಾರಕ್ಕಾಗಿ ಪ್ರಸ್ತುತಪಡಿಸಿದನು. ಆತನು ಕತ್ತೆಯ ಮೇಲೆ ಸವಾರಿ ಮಾಡಿ ಪಟ್ಟಣಕ್ಕೆ ಬಂದಾಗ, *"ನೋಡು, ನಿನ್ನ ಅರಸು ನಿನ್ನ ಬಳಿಗೆ ಬರುತ್ತಾನೆ" (ಮತ್ತಾಯ 21:5)* ಎಂಬ ಪ್ರವಾದನೆಯನ್ನು ಪೂರೈಸಿದನು. ಅದೇ ಸಮಯದಲ್ಲಿ, ಕರ್ತನು ಪಸ್ಕದ ಛಾಯೆಯ ವಿಷಯಗಳನ್ನು ನೆರವೇರಿಸಿದರು. ಅಂದರೆ, ಕುರಿಮರಿಯನ್ನು ಕೊಲ್ಲುವ ದಿನಕ್ಕೆ ಐದು ದಿನಗಳ ಮುಂಚೆ ಮನೆಗೆ ತಂದುಕೊಳ್ಳಬೇಕು ಎಂಬ ನಿಯಮವನ್ನು *(ವಿಮೋಚನಕಾಂಡ 12:2)* ಸಹ ನೆರವೇರಿಸಿದರು. ಹೀಗೆ, ಯೇಸು ಪಸ್ಕ ಹಬ್ಬಕ್ಕೆ ಐದು ದಿನಗಳ ಮುಂಚೆ ಇಸ್ರಾಯೇಲ್ ದೇಶಕ್ಕೆ ಅಥವಾ ಮನೆತನಕ್ಕೆ ಕೊನೆಯ ಬಾರಿಗೆ ತನ್ನನ್ನು ಪ್ರಸ್ತುತಪಡಿಸಿದನು. *"ಪಸ್ಕ ಹಬ್ಬವು ಇನ್ನು ಆರು ದಿವಸ ಮುಂದೆ ಇರಲಾಗಿ ಯೇಸು ಬೇಥಾನ್ಯಕ್ಕೆ ಬಂದನು. ಮರುದಿವಸ [ಐದು ದಿನಗಳ ಮುಂಚೆ] ಹಬ್ಬಕ್ಕೆ ಬಂದಿದ್ದ ಜನಸಮೂಹವು ಯೇಸು ಯೆರೂಸಲೇಮಿಗೆ ಬರುತ್ತಾನೆಂದು ಕೇಳಿ, ಆತನನ್ನು ಎದುರುಗೊಳ್ಳುವದಕ್ಕೆ ಹೊರಗೆ ಬಂದರು" (ಯೋಹಾನ 12:1, 12, 13)* ಎಂದು ನಾವು ಓದುತ್ತೇವೆ. ಆಗ ಅವರ ರಾಜನು ಕತ್ತೆಯ ಮರಿಯ ಮೇಲೆ ಕುಳಿತುಕೊಂಡು ಅವರ ಬಳಿಗೆ ಬಂದನು. ಆಗ ಆತನು ಅವರ ಮೇಲೆ ಕಣ್ಣೀರು ಸುರಿಸಿದನು ಮತ್ತು *"ನೋಡಿರಿ, ನಿಮ್ಮ ಆಲಯವು ನಿಮಗೆ ಬರೀದಾಗಿ ಬಿಟ್ಟದೆ"* ಎಂದು ಘೋಷಿಸಿದನು. *"ಈಗಿನಿಂದ ಕರ್ತನ ಹೆಸರಿನಲ್ಲಿ ಬರುವವನಿಗೆ ಆಶೀರ್ವಾದ ಎಂದು ನೀವು ಹೇಳುವ ತನಕ ನೀವು ನನ್ನನ್ನು ನೋಡುವದೇ ಇಲ್ಲವೆಂದು ನಿಮಗೆ ಹೇಳುತ್ತೇನೆ ಅಂದನು." (ಮತ್ತಾಯ 23:38, 39).*

ಯೇಸು ಪಸ್ಕದ ಮಹತ್ವವನ್ನು ತಿಳಿದಿದ್ದರು. ಆದರೆ ಶಿಷ್ಯರು ಅದನ್ನು ಅರಿತುಕೊಳ್ಳಲಿಲ್ಲ. ಯೇಸು ಒಬ್ಬಂಟಿಯಾಗಿದ್ದರು, ಯಾರೂ ಆತನೊಂದಿಗೆ ಸಹಾನುಭೂತಿ ತೋರಿಸಲಿಲ್ಲ, ಯಾರೂ ಆತನನ್ನು ಪ್ರೋತ್ಸಾಹಿಸಲಿಲ್ಲ. ಆತನು ತನ್ನ ಶಿಷ್ಯರಿಗೆ ವಿವರಿಸಿದ್ದರೂ ಸಹ, ಅವರಿಗೆ ಅರ್ಥವಾಗುತ್ತಿರಲಿಲ್ಲ ಅಥವಾ ಅದರ ವಿವರಣೆಯನ್ನು ಪ್ರೋತ್ಸಾಹಿಸಲಿಲ್ಲ, ಏಕೆಂದರೆ ಶಿಷ್ಯರು ಇನ್ನೂ ಪವಿತ್ರಾತ್ಮದಿಂದ ಜನಿಸಲ್ಪಟ್ಟಿರಲಿಲ್ಲ. ಅವರು ಆ ಸ್ಥಿತಿಗೆ ತಲುಪಲು ಸಾಧ್ಯವಿರಲಿಲ್ಲ. ಏಕೆಂದರೆ ಅವರು ಇನ್ನೂ ಆದಾಮನ ಪಾಪದಿಂದ ನೀತಿವಂತರಾಗಬೇಕಿತ್ತು. ಅದು ಪಸ್ಕದ ಕುರಿಯ ಬಲಿಯ ಮೂಲಕವೇ ಸಾಧ್ಯ ಅಥವಾ ಬಲಿಯಾಗುವ ಕುರಿಯ ರಕ್ತದ ಶಕ್ತಿಯು ಅವರ ಪಾಪಗಳ ಲೆಕ್ಕದಿಂದ ಬಿಡುಗಡೆ ಮಾಡಬೇಕು, ಅವರಿಗಾಗಿ ಸುರಿಯಲ್ಪಟ್ಟ ಈಡುಬಲಿಯ ರಕ್ತವು ಅವರನ್ನು ನಾಶಕರವಾದ ಮರಣದ ಶಕ್ತಿಯಿಂದ ಬಿಡುಗಡೆ ಮಾಡಿತು.

ಹೀಗೆ, ಯಾರೂ ನಡೆಯದ ಇಕ್ಕಟ್ಟಾದ ದಾರಿಯಲ್ಲಿ ಒಬ್ಬಂಟಿಯಾಗಿ ಯೇಸು ನಡೆಯುತ್ತಿದ್ದರು ಮತ್ತು ಅದೇ ದಾರಿಯಲ್ಲಿ ಆತನು ನಮ್ಮ ಮಾರ್ಗದರ್ಶಿ ಮತ್ತು ನಾಯಕನಾಗಿದ್ದರು. ಆದ್ದರಿಂದ ಕೆಲವೊಮ್ಮೆ ಆತನ ಹೃದಯವು ಸಾಯುವಷ್ಟು ದುಃಖಿತವಾಗಿತ್ತೆಂದರೆ ಆಶ್ಚರ್ಯವೇನಿಲ್ಲ. ಸಮಯ ಹತ್ತಿರ ಬಂದಾಗ ಅವರು ಪಸ್ಕದ ಊಟವನ್ನು ತಿನ್ನಲು ಕುಳಿತರು ಮತ್ತು ಯೇಸು ಶಿಷ್ಯರಿಗೆ ಹೀಗೆ ಹೇಳಿದರು, *"ನಾನು ಶ್ರಮೆ ಅನುಭವಿಸುವದಕ್ಕಿಂತ ಮುಂಚೆ ನಿಮ್ಮ ಸಂಗಡ ಈ ಪಸ್ಕದ ಊಟವನ್ನು ಮಾಡುವದಕ್ಕೆ ಕುತೂಹಲದಿಂದ ಅಪೇಕ್ಷಿಸಿದ್ದೇನೆ. ನಾನು ನಿಮಗೆ ಹೇಳುತ್ತೇನೆ, ಇದು ದೇವರ ರಾಜ್ಯದಲ್ಲಿ ನೆರವೇರುವ ತನಕ ನಾನು ಇನ್ನು ಮೇಲೆ ಪಸ್ಕದ ಊಟವನ್ನು ಮಾಡುವದೇ ಇಲ್ಲ ಎಂದು ಹೇಳಿದನು."* ***(ಲೂಕ 22:15,16)***. ಅದೇ ದಿನದಲ್ಲಿ, ಸ್ವಲ್ಪ ಸಮಯದ ನಂತರ ನಿಜವಾದ ಕುರಿಮರಿಯೂ ಕೊಯ್ಯಲ್ಪಡುವದರ ಮೂಲಕ ಅದು ಹೇಗೆ ನೆರವೇರುತ್ತದೆ ಎಂಬುದನ್ನು ಶಿಷ್ಯಂದಿರು ಅರ್ಥಮಾಡಿಕೊಳ್ಳಬೇಕೆಂದು ಕರ್ತನು ಬಯಸಿದನು ಎಂಬುದರಲ್ಲಿ ಸಂದೇಹವಿಲ್ಲ.

ಬಹುಶಃ ಅವರೊಂದಿಗೆ ಈ ಪಸ್ಕವನ್ನು ತಿನ್ನಲು ಆತನು ವಿಶೇಷವಾಗಿ ಬಯಸಲು ಒಂದು ಕಾರಣವೇನೆಂದರೆ, ಅವರು ಅದನ್ನು ಸ್ವೀಕರಿಸುವ ಮಟ್ಟಿಗೆ ಅದರ ಮಹತ್ವದ ಸತ್ಯವನ್ನು ಅವರಿಗೆ ತಿಳಿಸಲು ಆತನು ಅಲ್ಲಿ ಯೋಜಿಸಿದ್ದನು. ಏಕೆಂದರೆ, *"ಅವರು ಊಟಮಾಡುತ್ತಿರುವಾಗ ಆತನು ರೊಟ್ಟಿಯನ್ನು ತೆಗೆದುಕೊಂಡು ದೇವರ ಸ್ತೋತ್ರಮಾಡಿ ಮುರಿದು ಅವರಿಗೆ ಕೊಟ್ಟು - ತಕ್ಕೊಳ್ಳಿರಿ, ತಿನ್ನಿರಿ ಇದು ನನ್ನ ದೇಹ ಅಂದನು."* ***(ಮಾರ್ಕ್ 14:22)***. *"ಇದು ನಿಮಗೋಸ್ಕರ ಕೊಡಲ್ಪಟ್ಟ ನನ್ನ ದೇಹ: ನನ್ನನ್ನು ನೆನಸಿಕೊಳ್ಳುವುದಕ್ಕೋಸ್ಕರ ಹೀಗೆ ಮಾಡಿರಿ ಅಂದನು." "ಮತ್ತು ಆತನು ಪಾತ್ರೆಯನ್ನು ತೆಗೆದುಕೊಂಡು ದೇವರಿಗೆ ಕೃತಜ್ಞತೆ ಸಲ್ಲಿಸಿ, ಇದನ್ನು ತೆಗೆದುಕೊಂಡು ನಿಮ್ಮೊಳಗೆ ಹಂಚಿಕೊಳ್ಳಿರಿ.* **[R466: ಪುಟ 3]** *ಈ ಪಾತ್ರೆಯು ನಿಮಗೋಸ್ಕರ ಸುರಿಸಲ್ಪಡುವ ನನ್ನ ರಕ್ತದಿಂದ ಸ್ಥಾಪಿತವಾಗುವ ಹೊಸ ಒಡಂಬಡಿಕೆಯನ್ನು ಸೂಚಿಸುತ್ತದೆ"* ***(ಲೂಕ 22:17-20)***.

ಯೇಸು ಕ್ರಿಸ್ತನ ಉದ್ದೇಶವು ಅವರ ಮನಸ್ಸನ್ನು ಛಾಯೆಯಾದ ಕುರಿಮರಿಯಿಂದ ನಿಜಸ್ವರೂಪವಾದ ತನ್ನ ಕಡೆಗೆ ಕರೆದು, ತಾನು ಪೂರೈಸಲಿರುವ ನ್ಯಾಯಪ್ರಮಾಣದ ಒಂದು ಲಕ್ಷಣವನ್ನು ಇನ್ನು ಮುಂದೆ ಪಾಲಿಸುವುದು ಸೂಕ್ತವಲ್ಲ ಎಂದು ಅವರಿಗೆ ತೋರಿಸುವುದಾಗಿತ್ತು ಎಂಬುದರಲ್ಲಿ ನಮಗೆ ಸಂದೇಹವಿಲ್ಲ. ನಂತರ ಅವರಿಗೆ ರೊಟ್ಟಿ ಮತ್ತು ದ್ರಾಕ್ಷಾರಸವು, ಆತನ ನೆನಪಿಗಾಗಿ ಕುರಿಮರಿಯ ಸ್ಥಾನವನ್ನು ಪಡೆಯುವ ಅಂಶಗಳಾಗಿರಬೇಕಿತ್ತು. ಹೀಗೆ ಪರಿಗಣಿಸಿದರೆ, *"ನನ್ನ ನೆನಪಿಗಾಗಿ ನೀವು ಇದನ್ನು ಮಾಡಿರಿ"* ಎಂಬ ಆತನ ಮಾತುಗಳಲ್ಲಿ ಬಲವಿದೆ. ಇನ್ನು ಮುಂದೆ ಛಾಯೆ ವಿಮೋಚನೆಯ ನೆನಪಿಗಾಗಿ ನಿಜವಾದ ಕುರಿಮರಿಯನ್ನು ಕೊಲ್ಲಬೇಕಾಗಿಲ್ಲ. ಬದಲಾಗಿ, ನನ್ನ ಮಾಂಸ ಮತ್ತು ಜೀವನದ ಪ್ರತಿನಿಧಿಗಳಾದ ರೊಟ್ಟಿ ಮತ್ತು ದ್ರಾಕ್ಷಾರಸವನ್ನು ಬಳಸಿ. ಅದು ನಿಜವಾದ ವಿಮೋಚನೆಯ ಆಧಾರವಾಗಿದೆ ಮತ್ತು ಅದು ನಿಜವಾದ ಹಾದುಹೋಗುವಿಕೆಯಾಗಿದೆ. *"ಆದ್ದರಿಂದ, ಇನ್ನು ಮುಂದೆ ನನ್ನನ್ನು ಮತ್ತು ನನ್ನ ಮಾತುಗಳನ್ನು ಸ್ವೀಕರಿಸುವ ಎಲ್ಲರೂ ನನ್ನ ನೆನಪಿಗಾಗಿ ಇದನ್ನು ಮಾಡಲಿ."*

ಹೀಗೆ ನಮ್ಮ ಕರ್ತನು ತನ್ನ ಮರಣದ ಜ್ಞಾಪಕಾರ್ಥವಾಗಿ ಮತ್ತು ಯೆಹೂದ್ಯರು ಆಚರಿಸುವ ಪಸ್ಕಕ್ಕೆ ಬದಲಾಗಿ ತನ್ನ ಜ್ಞಾಪಕಾರ್ಥ ಭೋಜನವನ್ನು ಸ್ಥಾಪಿಸಿದನು. ಯೇಸು ಛಾಯೆಯಾದ ಕುರಿಮರಿಯನ್ನು ಮೊದಲು ಏಕೆ ತಿಂದನು ಎಂದು ಕೇಳಲಾಗಿದೆ? ಆತನು ನ್ಯಾಯ ಪ್ರಮಾಣದ ಆಳ್ವಿಕೆಯಲ್ಲಿ ಜನಿಸಿದನು ಮತ್ತು ಅದರ ಪ್ರತಿಯೊಂದು ಅವಶ್ಯಕತೆಯನ್ನು ಪಾಲಿಸಬೇಕು ಎಂದು ನಾವು ಉತ್ತರಿಸುತ್ತೇವೆ. ಆತನು ನ್ಯಾಯಪ್ರಮಾಣವನ್ನು ತನ್ನ ಶಿಲುಬೆಗೆ ಜಡಿದು ಕೊನೆಗೊಳಿಸಿದ ಕಾರಣದಿಂದಾಗಿ, ನಾವು ಪಸ್ಕ ಅಥವಾ ಆ ಸ್ಥಳದಲ್ಲಿ ನೀಡಲಾದ ಕರ್ತನ ಭೋಜನಕ್ಕೆ ಸಂಬಂಧಿಸಿದಂತೆ ನ್ಯಾಯಪ್ರಮಾಣದಿಂದ

ಮುಕ್ತರಾಗಿದ್ದೇವೆ. ಆದರೆ ನಮ್ಮ ಕರ್ತನ ಮರಣದ ವಾರ್ಷಿಕೋತ್ಸವವನ್ನು ಪ್ರತಿ ವರ್ಷ ಆಚರಿಸುವುದು ಒಂದು ಸವಲತ್ತು ಎಂದು ಪರಿಗಣಿಸುವವರಲ್ಲಿ ನಾವು ಸೇರಿದ್ದೇವೆ. ಆತನ ನೆನಪಿಗಾಗಿ ಇದನ್ನು ಮಾಡುತ್ತೇವೆ ಏಕೆಂದರೆ, *"ನಮ್ಮ ಪಸ್ಕದ ಯಜ್ಞದ ಕುರಿಯು ಕೊಯಿದದೆ; ಅದಾವದಂದರೆ ಕ್ರಿಸ್ತನೇ. ಆದಕಾರಣ, ಹಬ್ಬವನ್ನು ಆಚರಿಸೋಣ."*

ನಮ್ಮ ಕರ್ತನ ಮರಣದ ಸ್ಮರಣಾರ್ಥವಾಗಿ ನೇಮಿಸಲ್ಪಟ್ಟಿದ್ದ ಈ ಪ್ರಭಾವಶಾಲಿ ಕಾಲವನ್ನು ಯಾವಾಗ ಅಥವಾ ಏಕೆ ನಿರ್ಲಕ್ಷಿಸಲಾಯಿತು ಎಂಬುದನ್ನು ನಿಖರವಾಗಿ ನಿರ್ಧರಿಸುವುದು ಕಷ್ಟಕರವಾಗಿದೆ; ಆದರೆ ಅದು ನಿಸ್ಸಂದೇಹವಾಗಿ "ಅನುಕೂಲತೆಯ ನೆಪದಿಂದ" (expediency) ಆಗಿತ್ತು. ನಿಸ್ಸಂದೇಹವಾಗಿ, ಕೆಲವು ಉತ್ಸಾಹಭರಿತ ಬೋಧಕರು ಮಹಾ ಬೋಧಕರಾದ ಕರ್ತನು ಇದರಲ್ಲಿ ತಪ್ಪುಮಾಡಿದ್ದಾನೆಂದು ಭಾವಿಸಿ, ವರ್ಷಕ್ಕೆ ಒಂದೇ ಬಾರಿ ಅಲ್ಲದೆ ಹೆಚ್ಚು ಬಾರಿ ಇದನ್ನು ಆಚರಿಸುವುದು "ಉತ್ತಮ" ಎಂದುಕೊಂಡಿರಬಹುದು. *ಪೌಲನು, "ನೀವು ಈ ರೊಟ್ಟಿಯನ್ನು ತಿಂದು ಈ ಪಾತ್ರೆಯಲ್ಲಿ ಪಾನಮಾಡುವಷ್ಟು ಸಾರಿ ಕರ್ತನ ಮರಣವನ್ನು ಆತನು ಬರುವ ತನಕ ಪ್ರಸಿದ್ಧಿಪಡಿಸುತ್ತೀರಿ." (1 ಕೊರಿಂಥ 11:26) ಎಂದು ಹೇಳಿದಾಗ, ಕರ್ತನ ಭೋಜನವನ್ನು ಎಷ್ಟು ಬಾರಿ ಆಚರಿಸಿದರೂ ಪರವಾಗಿಲ್ಲ ಎಂಬುದನ್ನು ಅವನು ಬೋಧಿಸುತ್ತಿದ್ದಾನೆಂದು ಎಲ್ಲರೂ ಅರ್ಥಮಾಡಿಕೊಂಡಂತೆ ತೋರುತ್ತದೆ. ಆದರೆ ಈ ವಿಷಯದ ಕುರಿತು ಪೌಲನು ಹೇಳಿದ ಎಲ್ಲ ಮಾತುಗಳನ್ನು ಎಚ್ಚರಿಕೆಯಿಂದ ಅಧ್ಯಯನ ಮಾಡಿದರೆ, ಇದು ಹಾಗಲ್ಲ ಎಂಬುದು ಎಲ್ಲರಿಗೂ ಸ್ಪಷ್ಟವಾಗುತ್ತದೆ.* ಈ ವಾಕ್ಯದ *(1 ಕೊರಿಂಥ 11:23)* ಸನ್ನಿವೇಶದಲ್ಲಿ ಪೌಲನು ಅವರಿಗೆ ತಾನು ಕರ್ತನಿಂದ ಪಡೆದದ್ದನ್ನು ಅವರಿಗೆ ತಲುಪಿಸಿದ್ದೇನೆಂದು ಹೇಳುತ್ತಾ, "ನಾನು ನಿಮಗೆ ತಿಳಿಸಿಕೊಟ್ಟ ಉಪದೇಶವನ್ನು ಕರ್ತನಿಂದ ಹೊಂದಿದೆನು. ಅದೇನಂದರೆ, ಕರ್ತನಾದ ಯೇಸು ತಾನು ಹಿಡಿದು ಕೊಡಲ್ಪಟ್ಟ ರಾತ್ರಿಯಲ್ಲಿ ರೊಟ್ಟಿಯನ್ನು ತೆಗೆದುಕೊಂಡು,...". ಇಲ್ಲಿ ಯೇಸು ಆಯ್ಕೆಮಾಡಿದ ಸಮಯವು ಅತ್ಯಂತ ಸೂಕ್ತವಾಗಿತ್ತು ಎಂಬುದಷ್ಟೇ ಅಲ್ಲದೆ, ಆತನಿಗೆ ದ್ರೋಹ ಮಾಡಲ್ಪಟ್ಟ ಅದೇ ರಾತ್ರಿಯಲ್ಲಿ ಇದನ್ನು ಸ್ಥಾಪಿಸಲಾಯಿತು ಎಂಬುದನ್ನು ಕರ್ತನಿಂದ ಬಂದ ವಿಶೇಷ ಪ್ರಕಟಣೆಯ ಮೂಲಕ ಪೌಲನಿಗೆ ತಿಳಿಸಲ್ಪಟ್ಟಿರುವುದು ಎಷ್ಟು ಅರ್ಥಪೂರ್ಣವಾಗಿದೆ ಎಂಬುದನ್ನೂ ಗಮನಿಸಬೇಕು.

ಕರ್ತನ ಮರಣದ ಸರಿಯಾದ ಜ್ಞಾಪಕಾರ್ಥಕವಾಗಿ, ಸಭೆ ಎಷ್ಟು ಬಾರಿ ಆ ರೊಟ್ಟಿಯನ್ನು ಮುರಿದು ಆ ಪಾತ್ರೆಯನ್ನು ಕುಡಿಯಬಹುದು? ಖಂಡಿತವಾಗಿಯೂ, ಅದರ ವಾರ್ಷಿಕೋತ್ಸವದಂದು ಮಾತ್ರ. ಅದೇ ರೀತಿಯಲ್ಲಿ, ಉದಾರಹಣೆಗೆ ಅಮೇರಿಕದ ಸ್ವಾತಂತ್ರ್ಯ ದಿನವನ್ನು ಕೂಡ ಅದರ ವಾರ್ಷಿಕೋತ್ಸವದ ದಿನವಾದ ಜುಲೈ ನಾಲ್ಕನೇ ತಾರೀಖಿನಂದು ಆಚರಿಸಲಾಗುತ್ತದೆ. ಕೆಲವರು ಜುಲೈ ನಾಲ್ಕನೇ ತಾರೀಖನ್ನು ನಿರ್ಲಕ್ಷಿಸಿ ವಿವಿಧ ಸೂಕ್ತವಲ್ಲದ ಸಮಯಗಳಲ್ಲಿ ಆಚರಿಸಿದರೆ ಅದು ವಿಚಿತ್ರವೆನಿಸುತ್ತದೆ. ಹಾಗೆಯೇ, ಜುಲೈ ನಾಲ್ಕನೆಯ ತಾರೀಖಿನ ಬಗ್ಗೆ ಮಾತನಾಡುತ್ತಾ, *"ನೀವು ಹೀಗೆ ಆಚರಿಸುವಷ್ಟು ಬಾರಿ ನೀವು ರಾಷ್ಟ್ರದ ಜನನವನ್ನು ಪ್ರಸಿದ್ಧಿಪಡಿಸುತ್ತೀರಿ"* ಎಂದು ನಾವು ಹೇಳಿದರೆ, ವರ್ಷದಲ್ಲಿ ಅನೇಕ ಬಾರಿ ಆಚರಿಸಬೇಕು ಎಂಬುದನ್ನು ಯಾರು ಅರ್ಥಮಾಡಿಕೊಳ್ಳುತ್ತಾರೆ? ಅದೇ ರೀತಿಯಾಗಿ, ಕರ್ತನ ಭೋಜನವೂ ಸಹ ತನ್ನ ವಾರ್ಷಿಕೋತ್ಸವದ ದಿನದಂದೇ ಸರಿಯಾದ ಆಚರಣೆಯಾಗುತ್ತದೆ.

ಆದಿ ಸಭೆ ಪ್ರತಿ ಮೊದಲನೆಯ ದಿನ ಕರ್ತನ ಭೋಜನವನ್ನು ಸೇವಿಸುತ್ತಿದ್ದರು ಎಂದು ಸೂಚಿಸುವ ದಾಖಲೆಗಳು ವಾಕ್ಯಗಳಲ್ಲಿ ಕಂಡುಬರುತ್ತವೆ ಎಂದು ಕೆಲವರು ಭಾವಿಸುತ್ತಿದ್ದರು. ಇದಕ್ಕೆ ನಮ್ಮ ಉತ್ತರವೇನೆಂದರೆ, ಇದು ನಿಜವಾಗಿದ್ದರೆ, ಈ ವಿಷಯದಲ್ಲಿ ನಾವು ಇನ್ನೇನೂ ಹೇಳಬೇಕಾಗಿರಲಿಲ್ಲ. ಆದರೆ, ಆ ದಾಖಲೆ ಎಲ್ಲಿದೆ? ನಾವು *ಅಪೋಸ್ತಲರ ಕೃತ್ಯಗಳು 20:7* ಕ್ಕೆ ಉಲ್ಲೇಖಿಸುವಾಗ, "ವಾರದ

ಮೊದಲನೆಯ ದಿನದಲ್ಲಿ ಶಿಷ್ಯರು ರೊಟ್ಟಿ ಮುರಿಯಲು ಒಟ್ಟುಗೂಡಿದಾಗ, ಪೌಲನು ಅವರಿಗೆ ಉಪದೇಶ ಮಾಡುತ್ತಿದ್ದನು" ಇತ್ಯಾದಿ. ಆದರೆ, ಕರ್ತನ ಮರಣದ ಜ್ಞಾಪಕಾರ್ಥವಾಗಿ ಆ ರೊಟ್ಟಿಯನ್ನು ಮುರಿಯಲಾಗಿದೆ ಎಂಬುದಕ್ಕೆ ಯಾವುದೇ ಸಾಕ್ಷ್ಯವಿದೆಯೆ? ಹಾಗಾದರೆ, ಅದನ್ನು ಕರ್ತನ ಭೋಜನ ಎಂದು ಏಕೆ ಕರೆಯಲಾಗಲಿಲ್ಲ ಮತ್ತು ಏಕೆ ದ್ರಾಕ್ಷಾರಸವನ್ನು ಬಿಟ್ಟುಬಿಡಲಾಯಿತು? ರೊಟ್ಟಿಯಷ್ಟೇ ಮುಖ್ಯವಾದ ಸಂಕೇತವಾಗಿ ಪಾತ್ರೆಯು ಇರಲಿಲ್ಲವೇ? ಯಾಕೆಂದರೆ, "ರೊಟ್ಟಿ ಮುರಿಯುವ" ಸಮಯದಲ್ಲಿ ಎಮ್ಮಾಹುನಲ್ಲಿ *(ಲೂಕ 24:30)* ಇಬ್ಬರು ಶಿಷ್ಯರಿಗೆ ಯೇಸುವಿನ ಪರಿಚಯವಿತ್ತು ಎಂದು ಬರೆಯಲ್ಪಟ್ಟಿರುವುದರಿಂದ, ಅದು ಸಾಮಾನ್ಯ ಊಟಕ್ಕಿಂತ ಹೆಚ್ಚಿನದಾಗಿತ್ತು ಎಂದು ಯಾರು ಹೇಳುತ್ತಾರೆ? ಅವರು ಕರ್ತನ ಭೋಜನವನ್ನು ತಿನ್ನುತ್ತಿದ್ದರು ಎಂದು ಯಾರು ಹೇಳುತ್ತಾರೆ? ಯಾರೂ ಇಲ್ಲ.

ವಾರದ ಮೊದಲ ದಿನ ಅಥವಾ ಕರ್ತನ ದಿನವು, ಆತನ ಮರಣದ ಜ್ಞಾಪಕಾರ್ಥಕವಾಗಿ ಆಚರಿಸಲು ಸೂಕ್ತ ಸಮಯವಾಗಿರುವುದಕ್ಕಿಂತ ಅತ್ಯಂತ ಸೂಕ್ತವಲ್ಲ. ಆದಿ ಸಭೆಯು ಯೇಸುವಿನ ಮರಣ, ಕರ್ತನ ಭೋಜನದ ದುಃಖದ ದೃಶ್ಯಗಳು, ಗೆತ್ಸೆಮನೆ ಮತ್ತು ಕಲ್ವಾರಿಯನ್ನು ಸ್ಮರಿಸಲು ಈ ದಿನವನ್ನು (ವಾರದ ಮೊದಲ ದಿನ) ಪ್ರತ್ಯೇಕಿಸಲ್ಪಟ್ಟ ಅಥವಾ ಬಳಸಲ್ಪಡುವ ಬದಲು, ಅದು ಅವರಿಗೆ ಸಂತೋಷದ ದಿನವಾಗಿತ್ತು. *"ಕರ್ತನು ನಿಜವಾಗಿಯೂ ಎದ್ದಿದ್ದಾನೆ"* ಎಂದು ಹೇಳುವ ಸಂತೋಷ ಮತ್ತು ಹೊಸನ್ನದ ದಿನವಾಗಿತ್ತು. ಆದ್ದರಿಂದ, ಈ ದಿನವು ಸಭೆಯಿಂದ ಆರಾಧನೆ ಮತ್ತು ಸ್ತುತಿಗಾಗಿ ಸಾಮಾನ್ಯವಾಗಿ ಆಚರಿಸಲ್ಪಡುವ ದಿನವಾಗಿದೆ.

ಪ್ರತಿ ಕರ್ತನ ದಿನದಂದು ರೊಟ್ಟಿ ಮುರಿಯುವ ಸಾಂಪ್ರದಾಯಿಕ ಅಭ್ಯಾಸವು, ಬಹುಶಃ ಶಿಷ್ಯರು ಕೆಲವೇ ಸಂಖ್ಯೆಯಲ್ಲಿ ಇದ್ದು, ಕರ್ತನ ದಿನದಂದು ಒಟ್ಟಿಗೆ ಸೇರಲು ದೂರದಿಂದ ಬರುತ್ತಿದ್ದರು ಮತ್ತು ಸಾಮಾಜಿಕವಾಗಿ ಒಟ್ಟಿಗೆ ಊಟ ಮಾಡುತ್ತಿದ್ದರು ಎಂಬ ಅಂಶದಿಂದ ರೊಟ್ಟಿ ಮುರಿಯುವ ಸಂಪ್ರದಾಯ ಹುಟ್ಟಿಕೊಂಡಿರಬಹುದು. ಇದರ ಜೊತೆಗೆ, ಮೊದಲ ದಿನದಂದು ರೊಟ್ಟಿ ಮುರಿಯುವಾಗ ಅವರಲ್ಲಿ ಆಶೀರ್ವಾದದ ಆಲೋಚನೆಗಳು ಮತ್ತು ಆಸಕ್ತಿಯ ಸಂಬಂಧವೂ ಇತ್ತು. ಅವರು ಆ ದಿನದಂದು ಯೇಸು ತನ್ನ ಪುನರುತ್ಥಾನದ ನಂತರ ಪದೇ ಪದೇ ತನ್ನನ್ನು ಅವರಿಗೆ ತೋರಿಸಿಕೊಂಡದ್ದನ್ನು ಮತ್ತು ಅವರು ಊಟ ಮಾಡುತ್ತಿದ್ದಾಗ ತಾನೇ ತನ್ನನ್ನು ಪ್ರಕಟಿಸಿಕೊಂಡದ್ದನ್ನು *(ಲೂಕ 24:35)* ಸ್ಮರಿಸುತ್ತಿದ್ದರು.

ಒಂದು ಕಾಲದಲ್ಲಿ ಸ್ಥಾಪಿತವಾಗಿದ್ದ, ಕರ್ತನ ಮರಣ ಮತ್ತು ಪುನರುತ್ಥಾನವನ್ನು ಸ್ಮರಿಸುವ ಸಭೆಯ ಪದ್ಧತಿಯನ್ನು ರೋಮನ್ ಮತ್ತು ಎಪಿಸ್ಕೋಪಲ್ ಸಭೆಗಳು ಇಂದಿಗೂ "ಗುಡ್ ಫ್ರೈಡೇ" ಎಂದು ಪರಿಗಣಿಸಿ ಆಚರಿಸುತ್ತವೆ. ಆದರೆ ಇತರ ಪಂಗಡಗಳು ಅದನ್ನು ಬಹುತೇಕ ಮರೆತುಬಿಟ್ಟಿವೆ.

ನಮ್ಮ ಕರ್ತನ ಮರಣದ ವಾರ್ಷಿಕೋತ್ಸವದಂದು ಅವರ ನೆನಪಿಗಾಗಿ ಇದನ್ನು ಮಾಡುವುದು 'ವಾಚ್ ಟವರ್' ಓದುಗರಲ್ಲಿ ಅನೇಕರ ಪದ್ಧತಿಯಾಗಿದೆ. ಇದು ನಿಜವಾದ ಪಸ್ಕ ಹಬ್ಬದ ಸ್ಥಾನವನ್ನು ಸರಿಯಾಗಿ ತೆಗೆದುಕೊಳ್ಳುತ್ತದೆ ಎಂದು ನಂಬಿ, ನಾವು ಅದನ್ನು ಯಹೂದಿ ಅಥವಾ ಚಂದ್ರನ ಕಾಲಗಣನೆಯ (Lunar Time) ಪ್ರಕಾರ ಲೆಕ್ಕಹಾಕುತ್ತೇವೆ. ಆದ್ದರಿಂದ, ಇದು ಅನೇಕ ಬಾರಿ ಸೌರಮಾನ ಕಾಲಗಣನೆಯ (Solar Time) ಆಧಾರದ ಮೇಲೆ ಲೆಕ್ಕಿಸಲ್ಪಡುವ "ಗುಡ್ ಫ್ರೈಡೇ" ಗಿಂತ ಬೇರೆ ದಿನಾಂಕಕ್ಕೆ ಬರುತ್ತದೆ. ಈ ವರ್ಷ ಪಸ್ಕ ಹಬ್ಬದ ದಿನ ಏಪ್ರಿಲ್ 22ರಂದು ಕರ್ತನ ದಿನದ ಸಂಜೆ ಆರು ಗಂಟೆಗೆ ಬರುತ್ತದೆ. ಈ ಗಣನೆಯ ಪ್ರಕಾರ, ಯೇಸು ಮರಣ ಹೊಂದಿದ ಸಮಯವು ಆ ದಿನದ ಮಧ್ಯಾಹ್ನ ಮೂರು ಗಂಟೆಗೆ ಬರಬೇಕು. ಹಾಗಾಗಿ, ಕರ್ತನ ಭೋಜನವನ್ನು ಸ್ಮರಿಸುವ ಸಮಯವು ಇದೇ ಏಪ್ರಿಲ್ 21ರ ಶನಿವಾರ ರಾತ್ರಿ ಸುಮಾರು ಏಳರಿಂದ ಎಂಟು ಗಂಟೆಯ ನಡುವೆ ಇರಬೇಕು. ಪಸ್ಕ ಹಬ್ಬ

ಪ್ರಾರಂಭವಾಗುವ ಹಿಂದಿನ ದಿನ ಕುರಿಮರಿಯು ವಧಿಸಲ್ಪಟ್ಟಿತು ಎಂಬುದನ್ನು ನೆನಪಿನಲ್ಲಿಡಬೇಕು. ಇದನ್ನು ಎಂದಿನಂತೆ ಆಚರಿಸಲಾಗುವುದು. ನಾವು ಇಲ್ಲಿಯವರೆಗೂ ಇದ್ದಂತೆ, ಹುಳಿಯಿಲ್ಲದ ರೊಟ್ಟಿ* ಮತ್ತು ದ್ರಾಕ್ಷಾರಸ ಬಳಸಿ ನಡೆದ ಮೊದಲ ಅನ್ಯೋನ್ಯತೆ ಸೇವೆಯ ಉದಾಹರಣೆಯನ್ನು ಅನುಸರಿಸಲು ಪ್ರಯತ್ನಿಸಬೇಕು. ಅದೇ ಸಮಯದಲ್ಲಿ ಅವುಗಳ ಮಹತ್ವ ಮತ್ತು ಮೌಲ್ಯದ ಬಗ್ಗೆ ಒಟ್ಟಿಗೆ ಮಾತನಾಡಬೇಕು.

* ಹುಳಿಯಿಲ್ಲದ ರೊಟ್ಟಿಯನ್ನು ಯಾವುದೇ ಯಹೂದಿ ಕುಟುಂಬದ ಮೂಲಕ ಪಡೆಯಬಹುದು.

## THE IMPORT OF THE EMBLEMS
## ಸಂಕೇತಗಳ ಮಹತ್ವ

ಮುರಿದ ರೊಟ್ಟಿ ಮತ್ತು ಪಾತ್ರೆಯ ಮಹತ್ವವನ್ನು ತೋರಿಸುವುದು ಕೆಲವರಿಗೆ ಪ್ರಯೋಜನವಾಗಬಹುದು.

ರೊಟ್ಟಿಯ ಬಗ್ಗೆ ಯೇಸು ಹೀಗೆ ಹೇಳಿದನು, *"ಇದು ನನ್ನ ಮಾಂಸ"*, ಅಂದರೆ ಅದು ಆತನ ಮಾಂಸವನ್ನು, ನಮಗಾಗಿ ಮುರಿಯಲ್ಪಟ್ಟ ಅಥವಾ ತ್ಯಾಗ ಮಾಡಿದ ಆತನ ಮಾಂಸಿಕ ಶರೀರವನ್ನು ಪ್ರತಿನಿಧಿಸುತ್ತದೆ. ಆತನು ನಮಗೋಸ್ಕರ ತನ್ನ ಮಾಂಸಿಕ ಶರೀರವನ್ನು ತ್ಯಾಗ ಮಾಡಿರದಿದ್ದರೆ, ನಮಗೆ ಎಂದಿಗೂ ಮರಣದಿಂದ ಪುನರುತ್ಥಾನ ಸಿಗುತ್ತಿರಲಿಲ್ಲ ಮತ್ತು ಭವಿಷ್ಯದ ಜೀವನ ಎಂದಿಗೂ ಇರುತ್ತಿರಲಿಲ್ಲ. ಹಾಗಾಗಿ, ಆತನು ಹೇಳಿದಂತೆ, *"ನೀವು ಮನುಷ್ಯಕುಮಾರನ ಮಾಂಸವನ್ನು ತಿಂದು ಆತನ ರಕ್ತವನ್ನು ಕುಡಿಯದ ಹೊರತು ನಿಮ್ಮೊಳಗೆ ಜೀವವಿಲ್ಲ."* ***(ಯೋಹಾನ 6:53)***

ಹೀಗೆ ಯೇಸುವಿನ ದೇಹವನ್ನು ಮುರಿಯುವುದು ಜೀವದ ರೊಟ್ಟಿಯನ್ನು ಒದಗಿಸುವುದಷ್ಟೇ ಅಲ್ಲ, ಅದನ್ನು ತಿಂದರೆ ಮನುಷ್ಯನು ಎಂದಿಗೂ ಸಾಯುವುದಿಲ್ಲ. ಆದರೆ ಅದು ಜೀವನಕ್ಕೆ "ಇಕ್ಕಟ್ಟಾದ ದಾರಿ"ಯನ್ನು ತೆರೆಯುವುದೂ ಮತ್ತು ಆ ದಾರಿಯಲ್ಲಿ ನಡೆಯಲು ಸಹಾಯವಾಗಿ ಸತ್ಯವನ್ನು ಮುರಿಯುವುದೂ ಅಥವಾ ಮುದ್ರೆಯನ್ನು ತೆಗೆಯುವುದೂ ಆಗಿತ್ತು. ಹೀಗಾಗಿ, *"ನಾನೇ ಮಾರ್ಗವೂ ಸತ್ಯವೂ ಜೀವವೂ ಆಗಿದ್ದೇನೆ; ನನ್ನ ಮೂಲಕವಾಗಿ ಹೊರತು ಯಾರೂ ತಂದೆಯ ಬಳಿಗೆ ಬರುವದಿಲ್ಲ."* ***(ಯೋಹಾನ 14:6)*** ಎಂದು ಹೇಳಿದಾತನ ಮುರಿಯುವಿಕೆಯಾಗಿತ್ತು ಎಂದು ನಾವು ನೋಡುತ್ತೇವೆ.

ಆದ್ದರಿಂದ, ನಾವು ಮುರಿದ ರೊಟ್ಟಿಯನ್ನು ತಿನ್ನುವಾಗ, ಆತನು ಸಾಯದಿದ್ದರೆ, ನಮಗಾಗಿ ಮುರಿಯಲ್ಪಡದಿದ್ದರೆ ನಾವು ಎಂದಿಗೂ ತಂದೆಯ ಬಳಿಗೆ ಬರಲು ಸಾಧ್ಯವಾಗುತ್ತಿರಲಿಲ್ಲ ಎಂದು ನಾವು ಅರಿತುಕೊಳ್ಳಬೇಕು. ಹಾಗೆಯೇ, ಆದಾಮನ ಪಾಪ ಮತ್ತು ಮರಣದ ಶಾಪದ ಅಡಿಯಲ್ಲಿ ಶಾಶ್ವತವಾಗಿ ಉಳಿಯುತ್ತಿದ್ದೆವು ಮತ್ತು ಮಾರ್ಗ, ಸತ್ಯ, ಜೀವ ಅಥವಾ ತಂದೆಯ ಪರಿಚಯವನ್ನು ಎಂದಿಗೂ ಪಡೆಯುತ್ತಿರಲಿಲ್ಲ ಎಂದು ನಾವು ಅರಿತುಕೊಳ್ಳಬೇಕು.

ಮತ್ತೊಂದು ಆಲೋಚನೆಯೆಂದರೆ, ಆ ರೊಟ್ಟಿಯೂ ಹುಳಿಯನ್ನು ಒಳಗೊಂಡಿರದೆ ಹುಳಿಯಿಲ್ಲದ್ದಾಗಿತ್ತು. [ಹುಳಿ ಎಂದರೆ ಭ್ರಷ್ಟಾಚಾರ, ಕೊಳೆಯುವಿಕೆ ಅಥವಾ ನಶಿಸುಹೋಗುವ ಅಂಶವಾಗಿದೆ]. ಹುಳಿಯು ಪಾಪದ ಒಂದು ಛಾಯೆಯಾಗಿದೆ ಮತ್ತು ಪಾಪವು ಕೊಳೆಯುವಿಕೆ, ನಶಿಸುವಿಕೆ ಮತ್ತು ಮರಣವು ಸಂಭವಿಸುವ ರೀತಿಯಲ್ಲಿ ಇಡೀ ಮಾನವಕುಲದಲ್ಲಿ ಕೆಲಸ ಮಾಡುತ್ತದೆ. ಆದ್ದರಿಂದ ಯೇಸು ಪಾಪದಿಂದ ಸಂಪೂರ್ಣವಾಗಿ ಮುಕ್ತನಾಗಿದ್ದನು; ಆತನು ಕಳಂಕವಿಲ್ಲದ, ದೋಷರಹಿತ ಕುರಿಮರಿಯಾಗಿದ್ದನು. ಈ ಛಾಯೆಯು ಆತನನ್ನು "ಪರಿಶುದ್ಧನು, ಕೆಡುಕುತನವಿಲ್ಲದ, ನಿಷ್ಕಳಂಕ" ನೆಂದು ಘೋಷಿಸುತ್ತದೆ. ಯೇಸು ಆದಾಮನ ಸಂತತಿಯವನಾಗಿದ್ದರೆ, ಆತನು ಲೋಕದ ತಂದೆಯಿಂದ ಸಾಮಾನ್ಯ ರೀತಿಯಲ್ಲಿ ಜೀವನದ ತತ್ವವನ್ನು ಪಡೆದಿದ್ದರೆ, ಆತನು ಸಹ ಇತರ ಎಲ್ಲಾ ಮನುಷ್ಯರಂತೆ ಆದಾಮನ ಪಾಪದಿಂದ ಹುಳಿಯಾಗುತ್ತಿದ್ದನು. ಆದರೆ, ಆತನ ಜೀವವು ದೇವರಿಂದ ನೇರವಾಗಿ ಬಂದಿತು.

ಆದ್ದರಿಂದ ಆತನನ್ನು *"ಪರಲೋಕದಿಂದ ಇಳಿದು ಬಂದ ರೊಟ್ಟಿ"* ಎಂದು ಕರೆಯಲಾಗುತ್ತದೆ. ***(ಯೋಹಾನ 6:41 ನೋಡಿ)***. ಹಾಗಾಗಿ, ನಾವು ರೊಟ್ಟಿಯನ್ನು ಪರಿಶುದ್ಧವು, ಹುಳಿಯಿಲ್ಲದ್ದು ಎಂದು ಅರಿತು, ಆತನನ್ನು ತಿನ್ನೋಣ. ಸತ್ಯವನ್ನು ತಿನ್ನುವುದು, ವಿಶೇಷವಾಗಿ ಈ ಸತ್ಯವನ್ನು ತಿಂದು ಜೀರ್ಣಿಸಿಕೊಳ್ಳುವುದು, ನಂಬಿಕೆಯ ಮೂಲಕ ಆತನ ನೀತಿವಂತಿಕೆಯನ್ನು ನಮಗಾಗಿ ಸ್ವಾಧೀನಪಡಿಸಿಕೊಳ್ಳುವುದು, ಅದರ ಮೂಲಕ ನಾವು ಆತನನ್ನು ಮಾರ್ಗ ಮತ್ತು ಜೀವನವೆಂದು ಅರಿತುಕೊಳ್ಳುತ್ತೇವೆ.

ರೊಟ್ಟಿಯು ಯೇಸುವನ್ನು ವೈಯಕ್ತಿಕವಾಗಿ, ನಮ್ಮ ತಲೆಯಾಗಿ ಸೂಚಿಸುವುದು ಮಾತ್ರವಲ್ಲದೆ, ನಾವು ಆತನಲ್ಲಿ ಪಾಲುಹೊಂದಿದ ನಂತರ, ಒಡಂಬಡಿಕೆಯ ಮೂಲಕ, ನಾವು ಆತನೊಂದಿಗೆ ಒಂದೇ ರೊಟ್ಟಿಯ (ಒಂದೇ ದೇಹದ) ಅಂಗಗಳಾಗಿ ಪಾಲು ಹೊಂದಿಕೊಂಡು ಅದನ್ನು ಮುರಿಯಬಹುದು ಮತ್ತು ಲೋಕಕ್ಕೆ ಆಹಾರವಾಗಬಹುದು ಎಂದು ದೈವಿಕ ಪ್ರಕಟಣೆಯ ಮೂಲಕ ಅಪೋಸ್ತಲನು ನಮಗೆ ರೊಟ್ಟಿಯ ಮತ್ತಷ್ಟು ಅರ್ಥವನ್ನು ತಿಳಿಸುತ್ತಾನೆ ***(1 ಕೊರಿಂಥ 10:16)***. ನೀತಿವಂತರೆಂದು ಎಣಿಸಲ್ಪಟ್ಟ ವಿಶ್ವಾಸಿಗಳಾದ ನಾವು, ಈಗ ಕ್ರಿಸ್ತನ ಬಾಧೆ ಮತ್ತು ಮರಣದಲ್ಲಿ ಪಾಲುಗಾರರಾಗಿ, ಭವಿಷ್ಯದ ಮಹಿಮೆಯಲ್ಲಿ ಸಹ ಬಾಧ್ಯರುಗಳಾಗಿ ಭೂಮಿಯ ಎಲ್ಲಾ ಕುಟುಂಬಗಳಿಗೆ ಆಶೀರ್ವಾದ ಮತ್ತು ಜೀವವನ್ನು ನೀಡುವ ಕೆಲಸದಲ್ಲಿ ಸಹಚರರಾಗಬೇಕು ಎಂಬ ನಮ್ಮ ಸವಲತ್ತಿನ ಬಗ್ಗೆ ಇದೇ ಚಿಂತನೆಯನ್ನು ಅಪೋಸ್ತಲರು ಅನೇಕ ಬಾರಿ ವಿವಿಧ ಚಿತ್ರಣಗಳ ಮೂಲಕ ವ್ಯಕ್ತಪಡಿಸಿದ್ದಾರೆ. ಆದರೆ ಯೇಸು ವೈಯಕ್ತಿಕವಾಗಿ ಮುರಿದಂತೆ, ಈಗ ಮುರಿದುಹೋಗಿರುವ ರೊಟ್ಟಿಗೆ ಸಭೆಯನ್ನು ಹೋಲಿಸಿದಾಗ, ಅದು ನಮ್ಮ ತಲೆಯಾಗಿರುವ ಕ್ರಿಸ್ತನೊಂದಿಗಿನ ನಮ್ಮ ಏಕತೆ ಮತ್ತು ಅನ್ಯೋನ್ಯತೆಯ ಅತ್ಯಂತ ಸ್ಪಷ್ಟ ಮತ್ತು ಬಲವಾದ ವಿವರಣೆಯನ್ನು ಒದಗಿಸುತ್ತದೆ.

*"ರೊಟ್ಟಿಯು ಒಂದೇ ಆಗಿರುವುದರಿಂದ ಅನೇಕರಾಗಿರುವ ನಾವು ಒಂದೇ ದೇಹದಂತಿದ್ದೇವೆ; ಯಾಕೆಂದರೆ ನಾವೆಲ್ಲರೂ ಆ ಒಂದೇ ರೊಟ್ಟಿಯಲ್ಲಿ ಪಾಲು ತೆಗೆದುಕೊಂಡು ತಿನ್ನುತ್ತೇವೆ." "ನಾವು ರೊಟ್ಟಿಯನ್ನು ಮುರಿದು ತಿನ್ನುವುದು ಕ್ರಿಸ್ತನ ದೇಹದಲ್ಲಿ ಪಾಲುಗಾರರಾಗಿದ್ದೇವೆ ಎಂಬುದನ್ನು ಸೂಚಿಸುತ್ತದಲ್ಲವೇ?" ಎಂದು ಅವರು ಹೇಳುತ್ತಾರೆ.* ***(1 ಕೊರಿಂಥ 10:16,17 – ಡೈಗ್ಲಾಟ್ ಅನುವಾದದಲ್ಲಿ ನೋಡಿ)***.

ದ್ರಾಕ್ಷಾರಸವು, ನೀಡಲಾದ ಜೀವವನ್ನು ಪ್ರತಿನಿಧಿಸುತ್ತದೆ. ಅಂದರೆ ಕ್ರಿಸ್ತನ ತ್ಯಾಗ ಮತ್ತು ಮರಣವನ್ನು ಸೂಚಿಸುತ್ತದೆ. *"ಇದು ನನ್ನ ರಕ್ತ (ಮರಣದಲ್ಲಿ ತ್ಯಜಿಸಲ್ಪಟ್ಟ ಜೀವನದ ಸಂಕೇತ), ಇದು ಒಡಂಬಡಿಕೆಯ ರಕ್ತ* **[R467: ಪುಟ 3]** *ಇದು ಪಾಪಗಳ ಕ್ಷಮೆಗಾಗಿ ಬಹುಜನರಿಗೋಸ್ಕರ ಸುರಿಸಲ್ಪಡುವ ರಕ್ತ." "ನೀವೆಲ್ಲರೂ ಇದರಲ್ಲಿರುವದನ್ನು ಕುಡಿಯಿರಿ;"* ***(ಮತ್ತಾಯ. 26:27,28)***.

ಪಾಪದಿಂದ ಜೀವನವನ್ನು ಕಳೆದುಕೊಂಡ ಆದಾಮನ ಸಂತತಿಯವರಿಗೆ **[R467: ಪುಟ 4]** ತನ್ನ ಜೀವನವನ್ನು ಈಡುಬಲಿಯಾಗಿ ಕೊಡುವುದರ ಮೂಲಕ, ಮನುಷ್ಯರಿಗೆ ಜೀವಿಸುವ ಹಕ್ಕು ಬರುತ್ತದೆ. ***(ರೋಮ. 5:18,19 ನೋಡಿ)***. ಯೇಸು ಸುರಿಸಿದ ರಕ್ತವು *"ಎಲ್ಲರಿಗೋಸ್ಕರ ವಿಮೋಚನಯ ಕ್ರಯವಾಗಿತ್ತು"* (ಎಲ್ಲರಿಗೂ ಈಡುಬಲಿಯಾಗಿತ್ತು), ಆದರೆ ಶಿಷ್ಯರಿಗೆ ಪಾತ್ರೆಯನ್ನು ಕೊಟ್ಟು, ಅದನ್ನು ಕುಡಿಯಲು ಹೇಳುವ ಆತನ ಕ್ರಿಯೆಯು, ಆತನು ಅನುಭವಿಸಿದ ಬಾಧೆಗಳಲ್ಲಿ ಪಾಲುಗಾರರಾಗಲು ಅಥವಾ ಪೌಲನು ವ್ಯಕ್ತಪಡಿಸಿದಂತೆ, *"ಕ್ರಿಸ್ತನ ಸಂಕಟಗಳಲ್ಲಿ ಇನ್ನು ಉಳಿದಿದ್ದನ್ನು ಅನುಭವಿಸಲು" ಅವರಿಗೆ ಆಹ್ವಾನವಾಗಿತ್ತು.* ***(ಕೊಲೊ. 1:24)*** *"ನಾವು ದೇವರ ಸ್ತೋತ್ರಮಾಡಿ ಪಾತ್ರೆಯಲ್ಲಿ ಪಾನಮಾಡುವುದು ಕ್ರಿಸ್ತನ ರಕ್ತದಲ್ಲಿ ಪಾಲುಗಾರರಾಗಿದ್ದೇವೆ ಎಂಬುದನ್ನು ಸೂಚಿಸುತ್ತದಲ್ಲವೇ?"* ***(1 ಕೊರಿಂಥ. 10:16 - ಡೈಗ್ಲಾಟ್ ಅನುವಾದದಲ್ಲಿ)***. ಆ ಪಾತ್ರೆಯ ಮೌಲ್ಯವನ್ನು ಎಲ್ಲರೂ

ಅರಿತುಕೊಂಡು, ಒಟ್ಟಾಗಿ ನಾವು ಸಹ ಮಹಿಮೆ ಹೊಂದುವಂತೆ ಕ್ರಿಸ್ತನೊಂದಿಗೆ ಭಾದೆಪಡುವ ಅವಕಾಶ ನೀಡಿದ್ದಕ್ಕಾಗಿ ನಾವು ದೇವರಿಗೆ ಸ್ತುತಿಗಳನ್ನು ಸಲ್ಲಿಸೋಣ. ***(ರೋಮ. 8:17.)***

ಇದು ತ್ಯಾಗದ ಪಾತ್ರೆ, ಅಂದರೆ ನಮ್ಮ ಮಾನವೀಯತೆಯ ಮರಣವನ್ನು ಸೂಚಿಸುವ ಪಾತ್ರೆಯಾಗಿದೆ ಎಂಬ ಅರ್ಥವನ್ನು ಯೇಸು ಈ ಪಾತ್ರೆಗೆ ಇನ್ನೊಂದು ಸಂದರ್ಭದಲ್ಲಿ ಮಹತ್ವವನ್ನು ನೀಡಿ ವಿವರಿಸುತ್ತಾನೆ. ಉದಾಹರಣೆಗೆ, ಇಬ್ಬರು ಶಿಷ್ಯರು ಆತನ ಸಿಂಹಾಸನದಲ್ಲಿ ಭವಿಷ್ಯದ ಮಹಿಮೆಯ ವಾಗ್ದಾನವನ್ನು ಕೇಳಿದಾಗ, ಆತನು ಅವರಿಗೆ *"ನೀವು ಬೇಡಿಕೊಂಡದ್ದು ಏನೆಂದು ನಿಮಗೆ ತಿಳಿಯದು. ನಾನು ಕುಡಿಯಬೇಕಾಗಿರುವ ಪಾತ್ರೆಯಲ್ಲಿ ನೀವು ಕುಡಿಯುವದು ನಿಮ್ಮಿಂದಾದೀತೇ?"* ಅಂದನು. ದ್ರಾಕ್ಷಾರಸವು ಸಂತೋಷ ಮತ್ತು ಚೈತನ್ಯದ ಸಂಕೇತವಾಗಿ ಕೂಡಿದೆ. ಆದ್ದರಿಂದ, ನಾವು ಆತನೊಂದಿಗೆ ರಾಜ್ಯದಲ್ಲಿ ಅದನ್ನು ಹೊಸದಾಗಿ ಕುಡಿಯುವಾಗ ಯೇಸುವಿನ ಮಹಿಮೆ, ಗೌರವ ಮತ್ತು ಅಮರತ್ವವನ್ನು ಹಂಚಿಕೊಳ್ಳುತ್ತೇವೆ.

ಆದುದರಿಂದ ಪ್ರಿಯರೇ, ನಮ್ಮ ಕರ್ತನ ಮರಣವನ್ನು ಸ್ಮರಿಸಲು ನಾವು ಮೇಜಿನ ಸುತ್ತಲೂ ಕುಳಿತುಕೊಳ್ಳುವಾಗ, ನಾವು ಏನನ್ನು ಮಾಡುತ್ತಿರುವೆವು ಎಂಬುದರ ಅರ್ಥವನ್ನು ನೆನಪಿಸಿಕೊಳ್ಳೋಣ ಮತ್ತು ನಾವು ಆತನನ್ನು ತಿನ್ನುತ್ತೇವೆ ಎಂದು ಮನದಟ್ಟುಮಾಡಿಕೊಳ್ಳೋಣ ಮತ್ತು ಜೀವವುಳ್ಳ ರೊಟ್ಟಿಯಿಂದ ಬಲಗೊಂಡಾಗ, ನಾವು ಆತನ ಮರಣದಲ್ಲಿ ಆತನೊಂದಿಗೆ ಕುಡಿಯೋಣ. *"ನಾವು ಆತನೊಡನೆ ಸತ್ತಿದ್ದರೆ ಆತನೊಡನೆ ನಾವು ಸಹ ಜೀವಿಸುವೆವು, ನಾವು ಭಾದೆಪಡುವವರಾಗಿದ್ದರೆ ಆತನೊಂದಿಗೆ ನಾವು ಸಹ ಆಳುವೆವು"* *(2 ತಿಮೊ. 2:11,12)*.

## WHO MAY COMMUNE?
## ಯಾರು ಪಾಲುಗೊಳ್ಳಬಹುದು?

ಕ್ರಿಸ್ತನ ಪ್ರತಿಯೊಬ್ಬ ಸದಸ್ಯರು - ಯಜಮಾನನೊಂದಿಗೆ ಒಬ್ಬಂಟಿಯಾಗಿರುವವರೂ ಸಹ, ಈ ಸ್ಮರಣೆಯಲ್ಲಿ ಪಾಲುಗೊಳ್ಳಬಹುದು. ಆದಾಗ್ಯೂ, ಸಾಧ್ಯವಾದಷ್ಟು ಮಟ್ಟಿಗೆ ಒಂದೇ ರೊಟ್ಟಿಯ ಎಲ್ಲಾ ಸದಸ್ಯರು ಒಟ್ಟಿಗೆ ಸೇರಬೇಕು. ಸಾಂಪ್ರದಾಯಿಕ ಆಚರಣೆಯು ಸ್ಥಳದಿಂದ ಹೊರಗಿರುತ್ತದೆ; ಆದರೆ *"ಎಲ್ಲವೂ ಮರ್ಯಾದೆಯಿಂದಲೂ ಕ್ರಮದಿಂದಲೂ ನಡೆಯಲಿ."* ***(1 ಕೊರಿಂಥ 14:40)***

ಮತ್ತೊಂದು ಆಲೋಚನೆಯೆಂದರೆ, ನಾವು "ನಮ್ಮ ಪಸ್ಕ ಹಬ್ಬ" ಅಥವಾ ಅದರ ವಾರ್ಷಿಕೋತ್ಸವವನ್ನು ಹೀಗೆ ಆಚರಿಸುವುದು ಸೂಕ್ತವಾಗಿದ್ದರೂ, ಒಂದು ಅರ್ಥದಲ್ಲಿ ನಾವು ನಮ್ಮ ಕರ್ತನೊಂದಿಗೆ ಪ್ರತಿದಿನ ಮತ್ತು ಪ್ರತಿ ಗಂಟೆಯೂ ತಿನ್ನುತ್ತೇವೆ ಮತ್ತು ಕುಡಿಯುತ್ತೇವೆ ಮತ್ತು ಈ ಪವಿತ್ರ ಅನ್ಯೋನ್ಯತೆಯನ್ನು ಹೊಂದಿದ್ದೇವೆ ಎಂಬುದನ್ನು ಮರೆಯಬಾರದು. ಇಸ್ರೇಲ್ ಜನರು ತಮ್ಮ ಪಸ್ಕದ ಕುರಿಮರಿಯನ್ನು "ಕಹಿಯಾದ ಪಲ್ಯಗಳೊಂದಿಗೆ" ತಿಂದ ರಾತ್ರಿ, ಇಡೀ ಸುವಾರ್ತಾ ಯುಗವನ್ನು ಸೂಚಿಸಿತು ಮತ್ತು ಬೆಳಿಗ್ಗೆ ಅವರು ಐಗುಪ್ತ ದೇಶದಿಂದ ಬಿಡುಗಡೆ ಹೊಂದಿದರು. ಆದ್ದರಿಂದ ನಮ್ಮೊಂದಿಗೆ, ನಾವು ನಮ್ಮ ಕುರಿಯನ್ನು ಪ್ರಸ್ತುತ ಯುಗದಲ್ಲಿ ಕಹಿಯಾದ ಪರೀಕ್ಷೆಗಳು ಮತ್ತು ದುಷ್ಟತನದ ಸಂಕಟಗಳೊಂದಿಗೆ ತಿನ್ನುತ್ತೇವೆ. ಆದರೆ ಸಂತೋಷವು ಬೆಳಿಗ್ಗೆ ಬರುವದು. ಅಂದರೆ ನಾವು ಭೂಮಿಯಿಂದ ಮತ್ತು ದುಷ್ಟತೆಯ ಆಳ್ವಿಕೆ ಹಾಗೂ ಹಿಂಸೆಯಿಂದ ಬಿಡುಗಡೆಯಾಗುವುದು. ಬೆಳಿಗ್ಗೆ ಈಗಾಗಲೇ ಉದಯಿಸುತ್ತಿದೆ. ಆದ್ದರಿಂದ, *"ಕ್ರಿಸ್ತನ ಸಂಕಟಗಳಲ್ಲಿ ಇನ್ನು ಉಳಿದಿದ್ದನ್ನು ಅನುಭವಿಸಲು"* ನಾವು ಇನ್ನಷ್ಟು ವೇಗವಾಗಿ ನಡೆಯೋಣ.

ಈ ಕಾನೂನಿನ ಅರ್ಥಕ್ಕೆ ಸಂಬಂಧಿಸಿದಂತೆ ನಾವು ಈಗಷ್ಟೇ ಪ್ರಸ್ತುತಪಡಿಸಿದ ಆಲೋಚನೆಗಳನ್ನು ಅಪೋಸ್ತಲ ಪೌಲನು ಒತ್ತಿ ಹೇಳುತ್ತಾನೆ ಮತ್ತು ಅದರ ಅರ್ಥದ ಸರಿಯಾದ ತಿಳುವಳಿಕೆಯ ಅಗತ್ಯವನ್ನು

ತೋರಿಸುತ್ತದೆ. ಆತನು ಎಚ್ಚರಿಸುತ್ತಾನೆ *(1 ಕೊರಿಂಥಿಯ 11:27-30 – ವೈಗ್ಲಾಟ್ ಅನುವಾದದಲ್ಲಿ ನೋಡಿ)," ಹೀಗಿರುವದರಿಂದ ಯಾವನಾದರೂ ಅಯೋಗ್ಯವಾಗಿ ಕರ್ತನ ರೊಟ್ಟಿಯನ್ನು ತಿಂದರೆ ಇಲ್ಲವೆ ಆತನ ಪಾತ್ರೆಯಲ್ಲಿ ಪಾನಮಾಡಿದರೆ ಅವನು ಕರ್ತನ ದೇಹಕ್ಕೂ ರಕ್ತಕ್ಕೂ ದ್ರೋಹಮಾಡಿದವನಾಗಿರುವನು. ಆದರೆ ಒಬ್ಬನು ತನ್ನನ್ನು ಪರೀಕ್ಷಿಸಿಕೊಂಡವನಾಗಿ [ಅದರ ಮಹತ್ವದ ತಿಳುವಳಿಕೆ ಮತ್ತು ಮೆಚ್ಚುಗೆಯೊಂದಿಗೆ] ಆ ರೊಟ್ಟಿಯಲ್ಲಿ ತಕ್ಕೊಂಡು ತಿನ್ನಲಿ, ಆ ಪಾತ್ರೆಯಲ್ಲಿ ಕುಡಿಯಲಿ. ಯಾಕಂದರೆ ಕರ್ತನ ದೇಹವೆಂದು ವಿವೇಚಿಸದೆ[ಮೆಚ್ಚುವುದು] ಅಯೋಗ್ಯವಾಗಿ ತಿಂದು ಕುಡಿಯುವವನು ಹಾಗೆ ತಿಂದು ಕುಡಿಯುವದರಿಂದ ನ್ಯಾಯತೀರ್ಪಿಗೊಳಗಾಗುವನು[ಅಪರಾಧನಿರ್ಣಯವು] . ಈ ಕಾರಣದಿಂದಲೇ [ಕ್ರಿಸ್ತನ ಸಂಕಟಗಳು ಮತ್ತು ಮರಣದಲ್ಲಿ ನಮ್ಮ ಪಾಲುಗಾರಿಕೆಯನ್ನು ಸೂಚಿಸುವ ನಿಜವಾದ ಮಹತ್ವವನ್ನು ಸರಿಯಾಗಿ ಅರ್ಥಮಾಡಿಕೊಳ್ಳದಿರುವುದು] ನಿಮ್ಮಲ್ಲಿ ಬಹು ಮಂದಿ ಬಲಹೀನರೂ ರೋಗಿಗಳೂ ಆಗಿದ್ದಾರೆ; ಅನೇಕರು ನಿದ್ರಿಸುತ್ತಾರೆ"* ಎಂದು ತಿಳಿಸಲಾಗಿದೆ.

ಪೌಲನು ಹೇಳಿದಹಾಗೆ ನಾವು ಸತ್ಯಕ್ಕೆ ಪ್ರತಿಯೊಬ್ಬರೂ ಸಾಕ್ಷಿಯಾಗಬಹುದು. ಸಭೆಯಲ್ಲಿರುವ ಅನೇಕರು, ಹೆಸರಿನ ಕ್ರೈಸ್ತರು ಆಗಿರದೆ, ನಿಜವಾದ ಸಭೆ, *"ಪರಲೋಕದಲ್ಲಿ ಹೆಸರು ಬರಸಿಕೊಂಡಿರುವ"* ಅನೇಕ ಸದಸ್ಯರು, ಬಲಹೀನರೂ ಮತ್ತು ರೋಗಿಗಳಾಗಿದ್ದಾರೆ ಮತ್ತು ಅನೇಕರು ಸಂಪೂರ್ಣವಾಗಿ ನಿದ್ರೆಗೆ ಒಳಗಾಗಿದ್ದಾರೆ, ಆತ್ಮಿಕವಾದ ವಿಷಯಗಳಿಗೆ ಸತ್ತಿದ್ದಾರೆ ಮತ್ತು ಸತ್ತ ಕೊಂಬೆಗಳಂತೆ, ದ್ರಾಕ್ಷಾ ಬಳ್ಳಿಯಿಂದ ಕತ್ತರಿಸಲ್ಪಟ್ಟಿದ್ದಾರೆ. ***(ಯೋಹಾನ 15:2)***.

ಹಾಗಾದರೆ, ನಾವು ಪ್ರತಿ ವರ್ಷ ನಮ್ಮ ಒಡಂಬಡಿಕೆಯನ್ನು ದೃಢಪಡಿಸುವಾಗ, ನಾವು ಬಲಶಾಲಿಗಳಾಗಬೇಕು, ಆತ್ಮಿಕ ಉತ್ಸಾಹದಿಂದ ತುಂಬಿರಬೇಕು ಮತ್ತು "ಇತರರಂತೆ ನಿದ್ರಿಸಬಾರದು", ನಮ್ಮನ್ನು ನಾವು ಪರೀಕ್ಷಿಸಿಕೊಳ್ಳೋಣ ಮತ್ತು ಹೀಗೆ ನಾವು ಸಂಕಟಗಳಲ್ಲಿ ಮತ್ತು ಸಂಕೇತಗಳಲ್ಲಿ ಪಾಲ್ಗೊಳ್ಳೋಣ. ಇದರಿಂದ ತಕ್ಕ ಸಮಯದಲ್ಲಿ ನಾವು ಆತನ ಮಹಿಮೆಯಲ್ಲಿಯೂ ಪಾಲ್ಗೊಳ್ಳಬಹುದು.

[R4838 : ಪುಟ 183]

# "ನೀನು ಯೋಗ್ಯನಾಗಿ ಕಾಣಿಸಿಕೊಳ್ಳುವದಕ್ಕೆ ಅಧ್ಯಯನ ಮಾಡು"

***STUDY TO SHOW THYSELF APPROVED***

***2 TIMOTHY 2:15***

*"ನೀನು ದೇವರಿಗೆ ಯೋಗ್ಯನಾಗಿ ಕಾಣಿಸಿಕೊಳ್ಳುವದಕ್ಕೆ ಅಭ್ಯಾಸಿಸು. ಅವಮಾನಕ್ಕೆ ಗುರಿಯಾಗದ ಕೆಲಸದವನೂ ಸತ್ಯವಾಕ್ಯವನ್ನು ಸರಿಯಾಗಿ ವಿಭಾಗಿಸುವವನೂ ಆಗಿರು."*

---

ಈ ವಾಕ್ಯವು "ಸತ್ಯವಾಕ್ಯಗಳನ್ನು ಅಧ್ಯಯನ ಮಾಡಿ" ಎಂದು ಹೇಳುವುದಿಲ್ಲ, ಆದರೆ *"ನೀನು ದೇವರಿಗೆ ಯೋಗ್ಯನಾಗಿ ಕಾಣಿಸಿಕೊಳ್ಳುವದಕ್ಕೆ ಅಭ್ಯಾಸಿಸು(ಅಧ್ಯಯನ ಮಾಡು)"* - ದೇವರು ಏನನ್ನು ಅನುಮೋದಿಸುತ್ತಾನೆ ಎಂದು ತಿಳಿಯಲು ಅಧ್ಯಯನ ಮಾಡಿ ಮತ್ತು ಇನ್ನೂ ಇದರರ್ಥ, ಮೊದಲನೆಯದಾಗಿ, ಆತನು ಮಾಡಿದ ಪ್ರಕಟನೆಯನ್ನು ಅಧ್ಯಯನ ಮಾಡುವುದು. ಸತ್ಯವಾಕ್ಯಗಳ ಬಗ್ಗೆ ಸ್ವಲ್ಪ ಜ್ಞಾನವನ್ನು ಪಡೆದ ನಂತರ, ನಾವು ಅವುಗಳನ್ನು ಧ್ಯಾನಿಸಬೇಕು ಮತ್ತು ಆ ವಾಕ್ಯವು ಜೀವನದ ಎಲ್ಲಾ ವ್ಯವಹಾರಗಳಿಗೆ ಹೇಗೆ ಅನ್ವಯಿಸುತ್ತದೆ ಎಂಬುದನ್ನು ಪರಿಗಣಿಸಬೇಕು. ಈ ರೀತಿಯಾಗಿ, ನಾವು ನಮ್ಮ ಸಂಪರ್ಕಕ್ಕೆ ಬರುತ್ತಿರುವ ಪ್ರತಿಯೊಂದರ ಸ್ವಭಾವವನ್ನು, ಅದು ಒಳ್ಳೆಯದೋ ಕೆಟ್ಟದ್ದೋ ಎಂಬುದನ್ನು ತಿಳಿದುಕೊಳ್ಳುವುದಕ್ಕೆ ಅಧ್ಯಯನ ಮಾಡುತ್ತೇವೆ. ಇಲ್ಲಿ "ಅಭ್ಯಾಸಿಸು(ಅಧ್ಯಯನ)" ಎಂಬ ಪದವನ್ನು ಅಪೊಸ್ತಲನು *"ಶಾಂತವಾಗಿರಲು ಅಧ್ಯಯನ ಮಾಡು"* ***(1 ಥೆಸಲೋನಿಕದವರಿಗೆ 4:11)*** ಎಂದು ಹೇಳಿದಾಗ ಅದೇ ಆಲೋಚನೆಯೊಂದಿಗೆ ಬಳಸಲಾಗಿದೆ.

ಸ್ಪಷ್ಟವಾಗಿ ಈ ಸತ್ಯ ವಾಕ್ಯದ ಆಲೋಚನೆಯು ನಮ್ಮನ್ನು ದೇವರ ಮುಂದೆ ಒಪ್ಪಿಗೆಯಲ್ಲಿಡುವುದೇ ಹೊರತು ಮನುಷ್ಯರ ಮುಂದೆ ಅಲ್ಲ. ನಾವು ಎಲ್ಲಾ ಒಳ್ಳೆಯ ಪುರುಷರು ಮತ್ತು ಒಳ್ಳೆಯ ಮಹಿಳೆಯರ ಅನುಮೋದನೆಯನ್ನು ಹೊಂದಿರುವುದು ಸಾಕಷ್ಟು ಸೂಕ್ತವಾಗಿದೆ. ಆದರೆ ನಮ್ಮ ಅಧ್ಯಯನವು ಮುಖ್ಯವಾಗಿ ಈ ಮಾರ್ಗದಲ್ಲಿ ಇರಬಾರದು. ಮೊದಲನೇದಾಗಿ, ನಾವು ದೇವರನ್ನು ಮೆಚ್ಚಿಸಲು-ದೇವರಿಂದ ಅನುಮೋದನೆಯನ್ನು ಪಡೆಯಲು ಅಧ್ಯಯನ ಮಾಡಬೇಕು. ಧರ್ಮಶಾಸ್ತ್ರವು ತನ್ನ ಎತ್ತರ ಮತ್ತು ಆಳ, ಅದರ ಉದ್ದ ಮತ್ತು ಅಗಲವನ್ನು ತನ್ನ ಮೇಲೆ ಹೇಗೆ ಪ್ರಭಾವಿಸುತ್ತದೆ ಎಂಬುದನ್ನು ನೋಡಲು ದಾವೀದನು, *"ಯೆಹೋವನ ಧರ್ಮಶಾಸ್ತ್ರದಲ್ಲಿ ಆನಂದ ಪಡುವವನಾಗಿ ಅದನ್ನೇ ಹಗಲಿರುಳು ಧ್ಯಾನಿಸುತ್ತಿರುವನೋ"* ***(ಕೀರ್ತನೆಗಳು 1:2)*** ಎಂದು ದಾವೀದನು ಹೇಳುವಂತಹ ಚಿಂತನಶೀಲ ಅಧ್ಯಯನವಿದೆ ಎಂದು ನಾವು ಗಮನಿಸುತ್ತೇವೆ. ಹಾಗಾಗಿ, ದೇವರನ್ನು ಮೆಚ್ಚಿಸುವುದೇ ನಮ್ಮ ಮುಖ್ಯ ಗುರಿಯಾಗಿರಬೇಕೆಂಬುದೇ ಇಲ್ಲಿ ಅಪೋಸ್ತಲನ ಆಲೋಚನೆಯಾಗಿದೆ.

*"ಸತ್ಯ ವಾಕ್ಯವನ್ನು ಸರಿಯಾಗಿ ವಿಭಾಗಿಸುವುದು"* ಎಂದರೆ ಸತ್ಯ ವಾಕ್ಯದ ಸರಿಯಾದ ಅನ್ವಯವನ್ನು ಸೂಚಿಸುತ್ತದೆ; ಇದನ್ನು ಹೇಗೆ ಮತ್ತು ಯಾವಾಗ ಮತ್ತು

ಎಲ್ಲಿ ಅನ್ವಯಿಸಬೇಕು ಮತ್ತು ದೇವರ ಸಂದೇಶದ ಈ ಸತ್ಯ ವಾಕ್ಯವನ್ನು ನೀಡುವಲ್ಲಿ ದೈವಿಕ ಮನಸ್ಸಿನ ಉದ್ದೇಶ ಮತ್ತು ಆಲೋಚನೆ ಮತ್ತು ಯೋಜನೆ ಏನು ಎಂಬುದರ ತಿಳುವಳಿಕೆಯಾಗಿದೆ. ನಮ್ಮ ಕರ್ತನ ಮೊದಲನೆಯ ಬರುವಿಕೆವರೆಗೆ, ದೇವರ ಸಂದೇಶವು ಮುಖ್ಯವಾಗಿ ಹಳೆಯ ಒಡಂಬಡಿಕೆಯ ವಾಕ್ಯಗಳ ಮೂಲಕ ನೀಡಲಾಯಿತು. ನಂತರ ದೇವರ ಸಂದೇಶವು ಪರಲೋಕದಿಂದ ಇಳಿದುಬಂದ ಯೇಸುಕ್ರಿಸ್ತನ ಮೂಲಕ ಕೊಡಲ್ಪಟ್ಟಿತು. ಹೆಚ್ಚುವರಿಯಾಗಿ, ಸತ್ಯ ವಾಕ್ಯವನ್ನು ಹೆಚ್ಚಿಸಲು, ಜ್ಞಾನದ ವಾಕ್ಯವನ್ನು ಹೆಚ್ಚಿಸಲು, ಮತ್ತು ದೈವಿಕ ಯೋಜನೆಯ ವಿವರಣೆಯ ವಾಕ್ಯವನ್ನು ಹೆಚ್ಚಿಸಲು ನಮ್ಮ ಕರ್ತನು ಆಯ್ದುಕೊಂಡ ಹನ್ನೆರಡು ಅಪೋಸ್ತಲರನ್ನು, ಅವರ ವಿಶೇಷ ಮುಖವಾಣಿಗಳಾಗಿ(ಪ್ರತಿನಿಧಿಗಳಾಗಿ) ಕಳುಹಿಸಿದನು. ಆದುದರಿಂದ, ತಿಮೋಥಿಯನು **[R3879: ಪುಟ 334]** ಕರ್ತನ ಸಂದೇಶವೆಂದು ಗುರುತಿಸಬಹುದಾದ ಎಲ್ಲಾ ವಿಷಯಗಳಿಗೆ ಗಮನಹರಿಸಬೇಕಾಗಿದೆ. ಉದಾಹರಣೆಗೆ, ದೇವರ ಸಂದೇಶದ ಒಂದು ಭಾಗವು ಪೂರ್ವಕಾಲಕ್ಕೆ ಅನ್ವಯಿಸುತ್ತದೆ, ಒಂದು ಭಾಗವು ಯಹೂದಿಯರಿಗೆ ಮಾತ್ರ ಅನ್ವಯಿಸುತ್ತದೆ, ಇನ್ನೂ ಮತ್ತೊಂದು ಭಾಗವು ಈಗಿನ ಜೀವನದಲ್ಲಿ ಕ್ರೈಸ್ತರಿಗೆ ಅನ್ವಯಿಸುತ್ತದೆ ಮತ್ತು ಅವರ ಭವಿಷ್ಯದ ಭರವಸೆಯೂ ಮತ್ತೊಂದು ಭಾಗವಾಗಿದೆ.

## WE SHOULD HAVE CLEARER LIGHT THAN HAD OUR FOREFATHERS

## ನಮ್ಮ ಮೂಲಪಿತೃಗಳಿಗಿಂತ ಸ್ಪಷ್ಟವಾದ ಬೆಳಕನ್ನು ನಾವು ಹೊಂದಿರಬೇಕು

ಆದ್ದರಿಂದ, ನಾವು ಸತ್ಯ ವಾಕ್ಯವನ್ನು ನಮ್ಮ ಮನಸ್ಸಿನಲ್ಲಿ ಸರಿಯಾಗಿ ವಿಭಾಗಿಸುವಾಗ, ನಾವು ನಿಜವಾದ ತಿಳುವಳಿಕೆಯನ್ನು ಪಡೆಯುತ್ತೇವೆ. ನಮ್ಮ ದಿನಗಳಲ್ಲಿ ಅಗತ್ಯವಿರುವ ವಿಶೇಷ ಜ್ಞಾನೋದಯ ಮತ್ತು ನಮ್ಮ ಪಿತೃಗಳಿಗಿಂತ ಉತ್ತಮವಾಗಿ ದೇವರ ವಾಕ್ಯವನ್ನು ಸರಿಯಾಗಿ ವಿಭಾಗಿಸಲು ನಾವು ಶಕ್ತರಾಗಿದ್ದೇವೆ. ಇಂದು ನಮ್ಮ ಪಿತೃಗಳು ಕಾಣದಂತಹ, ದೇವರ ವಾಕ್ಯದ "ಉನ್ನತ ಕರೆ" ಮತ್ತು "ಮರುಸ್ಥಾಪನೆ" ಕುರಿತು ನೀಡುವ ಉಪದೇಶವನ್ನು ನಾವು ಕಾಣಬಹುದು. "ಉನ್ನತ ಕರೆ" ಸಭೆಗೆ ಆತ್ಮಿಕ ಆಶೀರ್ವಾದದ ಭಾಗವಾಗಿದೆ ಮತ್ತು "ಮರುಸ್ಥಾಪನೆ" ಲೋಕದ ಜನರಿಗೆ ಮಾಂಸಿಕ ಆಶೀರ್ವಾದದ ಭಾಗವಾಗಿದೆ. ನಾವು ಸಮಯ ಮತ್ತು ಕಾಲಗಳನ್ನು ಕುರಿತು ಯಾವುದು ಸಭೆಗೆ ಅನ್ವಯಿಸುತ್ತದೆ ಮತ್ತು ಯಾವುದು ಲೋಕದ ಆಶೀರ್ವಾದಕ್ಕೆ ಅನ್ವಯಿಸುತ್ತದೆ ಎಂದು ಕೆಲವು ವಿಷಯಗಳನ್ನು ಕೂಡ ಗಮನಿಸುತ್ತೇವೆ.

ಹಾಗಾಗಿ, ನಮ್ಮ ದಿನದಲ್ಲಿ ಸತ್ಯ ವಾಕ್ಯವನ್ನು ಸರಿಯಾಗಿ ವಿಭಾಗಿಸಲು, ಕರ್ತನಿಂದ ಪ್ರಕಟವಾದ ಎಲ್ಲ ವಿಷಯಗಳು ಹಾಗೂ ವಾಕ್ಯದ ಬೆಳಕನ್ನು ಹರಿಸುವ ಎಲ್ಲದರ ವಿಷಯಗಳಿಗೆ ನಾವು ಗಮನ ಕೊಡಬೇಕು. ಹೀಗೆ ನಾವು ಅದನ್ನು "ಸರಿಯಾಗಿ ವಿಭಾಗಿಸಲು" ಸಾಧ್ಯವಾಗುತ್ತದೆ. ಹಳೆ ಒಡಂಬಡಿಕೆಯಲ್ಲಿ *"ಪರಿಶುದ್ಧರಾದ ದೇವಜನರು ಪವಿತ್ರಾತ್ಮ ಪ್ರೇರಿತರಾಗಿ ಮಾತನಾಡಿದರು"* ***(2 ಪೇತ್ರನು 1:21)*** ಮತ್ತು ಕರ್ತನು ಅಪೊಸ್ತಲರಿಗೆ ಹೀಗೆ ಹೇಳಿದನು: *"ನೀವು ಭೂಮಿಯ ಮೇಲೆ ಯಾವದನ್ನು ಕಟ್ಟುತ್ತೀರೋ ಅದು ಪರಲೋಕದಲ್ಲಿಯೂ ಕಟ್ಟಲ್ಪಡುವುದು. ಮತ್ತು ನೀವು ಭೂಮಿಯ ಮೇಲೆ ಯಾವದನ್ನು ಬಿಚ್ಚುತ್ತೀರೋ ಅದು ಪರಲೋಕದಲ್ಲಿಯೂ ಬಿಚ್ಚಲ್ಪಡುವದು"* ***(ಮತ್ತಾಯ 18:18)*** ಎಂಬುದನ್ನು ನಾವು ಯಾವಾಗಲೂ ನೆನಪಿನಲ್ಲಿಟ್ಟುಕೊಳ್ಳಬೇಕು.

ಕರ್ತನು ತನ್ನ ಜನರನ್ನು, ಸತ್ಯದ ಮಾರ್ಗದಲ್ಲಿ ನಡೆಸುತ್ತೇನೆ ಮತ್ತು ಮುಂದೆ ನಡೆಯುವ ವಿಷಯಗಳನ್ನು ಅವರಿಗೆ ತೋರಿಸುತ್ತೇನೆ ಎಂದು ಭರವಸೆ ನೀಡಿದ್ದನ್ನು ನಾವು ಮರೆಯಬಾರದು. ನಾವು ಯೋಗ್ಯರೆಂದು ಕಾಣಿಸಿಕೊಳ್ಳುವದಕ್ಕೆ "ಅಧ್ಯಯನ" ಮಾಡಬೇಕು. ಬೋಧನೆಯನ್ನು ಅಧ್ಯಯನ ಮಾಡಿ, ನಮ್ಮ ನಡವಳಿಕೆಯನ್ನು ಅದರೊಂದಿಗೆ ಹೊಂದಿಕೆಯಾಗುವಂತೆ ಪ್ರಯತ್ನಿಸಬೇಕು. ಕ್ರಿಸ್ತನ

ಶಿಲುಬೆಯ ನಿಷ್ಠಾವಂತ ಸೈನಿಕನ ಕರ್ತವ್ಯಗಳನ್ನು ವಿಶ್ವಾಸದಿಂದ ನಿರ್ವಹಿಸಲು ಅಧ್ಯಯನ ಮಾಡಬೇಕು.

ಕ್ರೈಸ್ತ ಸೈನಿಕನು ತನ್ನ ಕರೆಗೆ ಯೋಗ್ಯವಾದ ರೀತಿಯಲ್ಲಿ ಸಣ್ಣ ಕರ್ತವ್ಯವನ್ನು ಸಹ ನಿರ್ವಹಿಸಲು ಅಧ್ಯಯನ ಮಾಡಬೇಕು. ಸೈನಿಕನಾಗಿ ತನ್ನ ಕರ್ತವ್ಯಗಳಿಗೆ ಸಂಬಂಧಿಸದ ಇತರ ವಿಷಯಗಳಲ್ಲಿ ಸಿಲುಕಿಕೊಳ್ಳಲು ಅವನು ಅವಕಾಶ ನೀಡಬಾರದು, ಹೀಗಾಗಿ ಅಡ್ಡದಾರಿಗೆ ಹೋಗಬಾರದು. ಕ್ರೈಸ್ತ ಸೈನಿಕನು ತನ್ನ ಕರ್ತವ್ಯಗಳಿಗೆ ಹಾನಿಯಾಗುವಂತೆ ಕೆಲವು ವೈಯಕ್ತಿಕ, ತಾತ್ಕಾಲಿಕ ಅನುಕೂಲಗಳ ಹಿಂದೆ ಹೋದರೆ, ಅವನು ಅಷ್ಟರಲ್ಲಿ ನಂಬಿಕೆಯಿಲ್ಲದ ಸೈನಿಕನಾಗಿರುತ್ತಾನೆ ಮತ್ತು ಸಂಪೂರ್ಣವಾಗಿ ಸ್ಥಾನದಿಂದ ಹೊರಬರುವ ಸಾಧ್ಯತೆಯಿದೆ. **[R4839: ಪುಟ 184]**

*"ನೀನು ಯೋಗ್ಯನಾಗಿ ಕಾಣಿಸಿಕೊಳ್ಳುವದಕ್ಕೆ ಅಭ್ಯಾಸಿಸು (ಅಧ್ಯಯನ ಮಾಡು)"* ಸತ್ಯ ವಾಕ್ಯವನ್ನು ಅಧ್ಯಯನ ಮಾಡಿ; ನಿಮ್ಮನ್ನು ಅಧ್ಯಯನ ಮಾಡುವುದರಿಂದ ನಿಮ್ಮ ಸ್ವಭಾವ ಏನೆಂದು ಉತ್ತಮವಾಗಿ ತಿಳಿಯಬಹುದು ಮತ್ತು ದೇವರ ಸೇವೆಗಾಗಿ ನಿಮ್ಮ ಪ್ರತಿಭೆ ಏನೆಂದು ನೀವು ತಿಳಿದುಕೊಳ್ಳಬಹುದು ಮತ್ತು ಆ ಪ್ರತಿಭೆ ಯಾವ ಮಾರ್ಗದಲ್ಲಿದೆ ಎಂದು ತಿಳಿದುಕೊಳ್ಳಬಹುದು ಮತ್ತು ನಿಮ್ಮ ಬಲಹೀನತೆಗಳು ಯಾವುವು ಎಂದು ತಿಳಿದುಕೊಳ್ಳಬಹುದು ಮತ್ತು ಅವುಗಳಿಂದ ನಿಮ್ಮನ್ನು ಹೇಗೆ ರಕ್ಷಿಸಿಕೊಳ್ಳಬಹುದೆಂದು ತಿಳಿದುಕೊಳ್ಳಬಹುದು, ಅದರಿಂದ ನಿಮ್ಮ ಸಾಮರ್ಥ್ಯಗಳು ಮತ್ತು ಕೊರತೆಗಳನ್ನು ತಿಳಿದುಕೊಳ್ಳಬಹುದು. ನಂತರ ದೋಷವನ್ನು ತಪ್ಪಿಸಲು, ಎಲ್ಲಾ ಮೂರ್ಖ ಪ್ರಶ್ನೆಗಳನ್ನು, ಅಪವಿತ್ರ ಮತ್ತು ವ್ಯರ್ಥವಾದ ಮಾತುಗಳನ್ನು ದೂರವಿಡಲು ಅಧ್ಯಯನ ಮಾಡಿ. *"ದೇವರ ಅಸ್ತಿವಾರವು ಖಂಡಿತವಾಗಿ ನಿಲ್ಲುತ್ತದೆ"* ಎಂಬುದನ್ನು ನೆನಪಿಡಿ. ಎಲ್ಲಾ ಇತರ ಅಸ್ತಿವಾರಗಳು ನಿಷ್ಪ್ರಯೋಜಕವಾಗಿವೆ ಮತ್ತು ಎಲ್ಲಾ ಇತರ ಸಿದ್ಧಾಂತಗಳು ಶೂನ್ಯವಾಗಿವೆ. ಆದರೆ *"ದೇವರ ಅಸ್ತಿವಾರವು ಖಂಡಿತವಾಗಿ ನಿಲ್ಲುತ್ತದೆ. ಅದರ ಮೇಲೆ ತನ್ನವರು ಯಾರಾರೆಂಬದನ್ನು ಕರ್ತನು ತಿಳಿದಿದ್ದಾನೆಂತಲೂ' ಮತ್ತು ಕ್ರಿಸ್ತನ ನಾಮವನ್ನು ಹೇಳಿಕೊಳ್ಳುವವರೆಲ್ಲರು ದುಷ್ಟತ್ವವನ್ನು ಬಿಟ್ಟುಬಿಡ ಬೇಕೆಂತಲೂ ಮುದ್ರೆ ಉಂಟು"* ***(2 ತಿಮೊಥೆಯನಿಗೆ 2:19).***

## WE SHOULD STUDY TO MAKE OUR IMPUTED RIGHTEOUSNESS MORE AND MORE ACTUAL

## ನಮ್ಮ ಮೇಲೆ ಆರೋಪಿಸಲಾದ (ಹೊದಿಸಿರುವ) ಕ್ರಿಸ್ತನ ನೀತಿವಂತಿಕೆಯನ್ನು ಹೆಚ್ಚು ಹೆಚ್ಚು ನಿಜವಾದದ್ದಾಗಿ ಮಾಡಲು ನಾವು ಅಧ್ಯಯನ ಮಾಡಬೇಕು

"ಅಧ್ಯಯನ" ಎಂಬ ಪದದಲ್ಲಿ ಹೆಚ್ಚಿನ ಮಹತ್ವವಿದೆ ಮತ್ತು ಈ ದೈವಿಕ ಆಜ್ಞೆ ಸಭೆಗೆ, ಅಂದರೆ ಕ್ರಿಸ್ತನಲ್ಲಿ ನಂಬಿಕೆಯುಳ್ಳವರಿಗೆ ಮತ್ತು ದೇವರ ಸೇವೆಗಾಗಿ ತಮ್ಮ ಜೀವನವನ್ನು ಅರ್ಪಿಸಿದವರಿಗೆ ನೀಡಲಾಗಿದೆ ಎಂಬುದನ್ನು ಗಮನಿಸುವುದು ಮುಖ್ಯವಾಗಿದೆ. ನಾವೆಲ್ಲರೂ ಪಾಪದಿಂದ ಶುದ್ಧರಾದವರೆಂದು ಎಣಿಸಲ್ಪಟ್ಟಿದ್ದೇವೆ, ಈ ಎಣಿಕೆಯ(reckoned) ಶುದ್ಧೀಕರಣವನ್ನು ಅಥವ ಆರೋಪಿಸಲಾದ(ಹೊದಿಸಿರುವ) ಕ್ರಿಸ್ತನ ನೀತಿವಂತಿಕೆಯನ್ನು ನಿಜವಾದದ್ದಾಗಿ ಮಾಡಲು, ನಮ್ಮ ಸಾಮರ್ಥ್ಯದ ಮಟ್ಟಿಗೆ ಅಧ್ಯಯನ ಮಾಡುವ ಕೆಲಸಕ್ಕೆ ನಾವು ಪೂರ್ಣ ಜಾಗ್ರತೆಯನ್ನೂ ನೀಡಬೇಕು. ನಾವು ನಿಜವಾಗಿ ನೀತಿವಂತರು ಆಗುವ ಮುಂಚೆ, ದೈವಿಕ ಕೃಪೆಯ ಮೂಲಕ ನೀತಿವಂತರೆಂದು ಎಣಿಸಲ್ಪಟ್ಟಿದೇವೆ. ದೇವರು ನಮ್ಮ ಹೃದಯಗಳನ್ನು ನೋಡಿ, ಅದರಲ್ಲಿ ನಮ್ಮ ಉತ್ತಮ ಮತ್ತು ಸತ್ಯದ ಮನೋಭಾವನೆಗಳನ್ನು ಮಾತ್ರವಲ್ಲದೆ, ನಮ್ಮ ನೀತಿವಂತಿಕೆಯ ಅಭಿಲಾಷೆಯನ್ನು ಮತ್ತು ಆತನು ಅಂಗೀಕರಿಸುವ ರೀತಿಯಲ್ಲಿ ನೀತಿವಂತರಾಗಲು ನಮ್ಮ ಪ್ರಯತ್ನಗಳನ್ನು ನೋಡಿದಾಗ, ದೇವರು ನಮ್ಮ ಕೆಲಸಕ್ಕೆ ಬದಲಾಗಿ, ನಮ್ಮ ಚಿತ್ತವನ್ನು ಅಂಗೀಕರಿಸುತ್ತಾರೆ. ಅದರಂತೆ,

ಆತನು ನಮ್ಮನ್ನು ಈಗ ನೀತಿವಂತರು ಎಂದು ಎಣಿಸುವನು ಮತ್ತು ನಮ್ಮನ್ನು ತನ್ನ ಮಕ್ಕಳಂತೆ ಭಾವಿಸುತ್ತಾರೆ, ಏಕೆಂದರೆ ನಾವು ಶಾಪದಿಂದ ವಿಮೋಚನೆ ಹೊಂದಿದ್ದೇವೆ ಮತ್ತು ಆತನ ಕೃಪಾಶೀಲ ವ್ಯವಸ್ಥೆಯನ್ನು ಸಮಾಧಾನಕ್ಕಾಗಿ ಸ್ವೀಕರಿಸಿದ್ದೇವೆ.

## LET US STUDY TO SEE THAT OUR LIVES ARE AN HONOR TO THE CAUSE WE ESPOUSE

## ನಮ್ಮ ಜೀವನವು ನಾವು ಸಮರ್ಥಿಸಿಕೊಂಡ ಉದ್ದೇಶಕ್ಕೆ ಗೌರವವಾಗಿದೆ ಎಂಬುದನ್ನು ನೋಡಲು ನಾವು ಅಧ್ಯಯನ ಮಾಡೋಣ

ಪಾಪವು ನಮ್ಮಲ್ಲಿ ಉಳಿಯಲು ಮತ್ತು ಅದು ನಮ್ಮಲ್ಲಿ ಕೆಲಸ ಮಾಡಲು, ನಾವು ತೃಪ್ತಿ ಹೊಂದಿರುವುದಿಲ್ಲ ಎಂದು ಖಚಿತಪಡಿಸಿಕೊಳ್ಳಲು, ಪಾಪದ ಎಲ್ಲಾ ಹಳೆಯ ಹುಳಿಯನ್ನು ಹೊರಹಾಕಲು ನಾವು ಪ್ರತಿದಿನ ಪ್ರಯತ್ನಿಸುತ್ತಿದ್ದೇವೆ ಎಂದು ನೋಡಲು ನಮ್ಮ ಹೃದಯಗಳನ್ನು ಅಧ್ಯಯನ ಮಾಡೋಣ. ಇಲ್ಲದಿದ್ದರೆ, ನೀತಿಯ ಮೇಲಿನ ನಮ್ಮ ಪ್ರೀತಿಯು ದುರ್ಬಲಗೊಳ್ಳುತ್ತಿದೆ ಎಂದು ನಾವು ನಮ್ಮ ನಡತೆಯ ಮೂಲಕ ಸಾಬೀತುಪಡಿಸುತ್ತೇವೆ. ಹುಳಿ ಹಿಟ್ಟನ್ನು ಸಾಂದರ್ಭಿಕವಾಗಿ ಕರಗಿಸಿ ಮತ್ತೆ ಮತ್ತೆ ಹುದುಗಲು ಬಿಡದೆ, ಪಾಪವನ್ನು ನಿರಂತರವಾಗಿ ವಿರೋಧಿಸುವ ಮೂಲಕ ಮತ್ತು ತಮ್ಮ ಆಲೋಚನೆಗಳು, ಮಾತುಗಳು ಮತ್ತು ಕಾರ್ಯಗಳನ್ನು ಸತ್ಯದಿಂದ ಶುದ್ಧೀಕರಿಸುವ ಮೂಲಕ ಮತ್ತು ಪ್ರೀತಿ, ಸಂತೋಷ, ಶಾಂತಿ ಮುಂತಾದ *"ಆತ್ಮದ ಫಲಗಳನ್ನು"* ಬೆಳೆಸುವ ಮೂಲಕ ಆ ಹುಳಿಯನ್ನು ಹೊರಹಾಕುತ್ತಿದ್ದಾರೆ ಎಂದು ಕಂಡುಕೊಂಡವರು ಸಂತೋಷವಾಗಿರುತ್ತಾರೆ.

ಅಧ್ಯಯನಶೀಲರು ಮಾತ್ರ ದೈವಿಕ ಅನುಮೋದನೆ ಮತ್ತು ಅಂಗೀಕಾರದ ಮಾರ್ಗವನ್ನು ಕಂಡುಕೊಳ್ಳುತ್ತಾರೆ. ನಮ್ಮ ಜೀವನವು ನಾವು ಸಮರ್ಥಿಸಿಕೊಂಡ ಉದ್ದೇಶಕ್ಕೆ ಗೌರವವಾಗಿದೆ ಎಂಬುದನ್ನು ನೋಡಲು ನಾವು ಅಧ್ಯಯನ ಮಾಡೋಣ. ಇದರಿಂದ ನಾವು ಕೆಟ್ಟತನದ ನೋಟದಿಂದ ಸಹಾ ದೂರವಿರುತ್ತೇವೆ ಮತ್ತು ನಮ್ಮ ಆಲೋಚನೆಗಳು, ನಮ್ಮ ತುಟಿಗಳು, ನಮ್ಮ ಜೀವನವನ್ನು ಗಮನದಲ್ಲಿ ಇಟ್ಟುಕೊಂಡು ನಮ್ಮ ಎಲ್ಲಾ ಸಂಭಾಷಣೆಗಳಲ್ಲಿ, ನಮ್ಮ ನಡವಳಿಕೆಯಲ್ಲಿ ನಾವು ಜಾಗರೂಕರಾಗಿರುತ್ತೇವೆ. ಪ್ರತಿಯೊಂದು ಕರ್ತವ್ಯದಲ್ಲಿ ಶ್ರದ್ಧೆಯಿಂದಿರಲು, ಅದನ್ನು ಸಿದ್ಧಮನಸ್ಸಿನೊಂದಿಗೆ ಮತ್ತು ಸಂತೋಷದ ಹೃದಯದಿಂದ ನಿರ್ವಹಿಸಲು ನಾವು ಅಧ್ಯಯನ ಮಾಡೋಣ. ನಾವು ಸೈನಿಕರು ಮತ್ತು ನಿಜವಾದ ಸೈನಿಕರಾಗಿ ನಾವು *"ಕಠಿಣತೆಯನ್ನು(ಶ್ರಮೆಯನ್ನು) ಸಹಿಸಿಕೊಳ್ಳುವುದನ್ನು"* ಕಲಿಯಬೇಕು ಎಂಬ ಅಂಶವನ್ನು ನಾವು ಎಂದಿಗೂ ಮರೆಯಬಾರದು.

ಒಬ್ಬ ಸೈನಿಕನು ತನ್ನ ಶತ್ರುಗಳ ವಿರುದ್ಧ ಹೋರಾಡುವುದರ ಜೊತೆಗೆ ಅನೇಕ ಸಾಮಾನ್ಯ ಕರ್ತವ್ಯಗಳನ್ನು ಹೊಂದಿದ್ದಾನೆ. ಅವುಗಳೆಂದರೆ, ತನ್ನ ರಕ್ಷಾಕವಚವನ್ನು ಹೊಳಪುಗೊಳಿಸುವುದು (polishing), ಆಹಾರವನ್ನು ಹುಡುಕುವುದು, ತನ್ನ ಊಟವನ್ನು ಸಿದ್ಧಪಡಿಸುವುದು, ಶಿಬಿರವನ್ನು ಸ್ವಚ್ಛಗೊಳಿಸುವುದು ಅಥವಾ ಸೇನೆ ಹಾದು ಹೋಗಲು ಸೇತುವೆಗಳನ್ನು ನಿರ್ಮಿಸುವುದು ಹೀಗೆ ಇನ್ನಿತರ ಕಾರ್ಯಗಳನ್ನು ಮಾಡುವುದರ ಜೊತೆಗೆ, ನಿಜವಾಗಿಯೂ ಸೈನಿಕನಾಗಿ ತನ್ನ ಕರ್ತವ್ಯವನ್ನು ಸಹ ನಿರ್ವಹಿಸುತ್ತಾನೆ. ಇಂತಹ ಕಾರ್ಯಗಳು ಸಾಮಾನ್ಯವಾದ ಕೆಲಸ, ಆದರೆ ಅವಶ್ಯಕ ಮತ್ತು ಸೈನಿಕನಾಗಿ ಅವನ ಸೇವೆಯೊಂದಿಗೆ ಸಂಪೂರ್ಣವಾಗಿ ಸ್ಥಿರವಾಗಿರುತ್ತದೆ ಮತ್ತು ಅದನ್ನು ತೊಡಕುಗಳು(ತೊಂದರೆ) ಮತ್ತು ಅಡೆತಡೆಗಳು ಎಂದು ಪರಿಗಣಿಸಬಾರದು. ಅಪ್ರಾಮಾಣಿಕತೆಯಿಂದ ಈ ಕರ್ತವ್ಯಗಳನ್ನು ನಿರ್ಲಕ್ಷಿಸಲಾಗುವುದಿಲ್ಲ ಅಥವಾ ಅಜಾಗರೂಕತೆಯಿಂದ ಮಾಡಲಾಗುವುದಿಲ್ಲ.

## WHATEVER OUR CAPTAIN HAS RECOGNIZED AND APPROVED IS PROPER FOR US

## ನಮ್ಮ ನಾಯಕ ಯಾವುದನ್ನು ಗುರುತಿಸಿ ಮತ್ತು ಅನುಮೋದಿಸಿದ್ದಾನೆಯೋ ಅದು ನಮಗೆ

ಸೂಕ್ತವಾಗಿದೆ

ಮೇಲಿನ ಶೀರ್ಷಿಕೆ ಕ್ರೈಸ್ತ ಸೈನಿಕನಿಗೆ ಅನ್ವಯಿಸುತ್ತದೆ. ಜೀವನದ ದಿನಚರಿ - ಮನೆಕೆಲಸ, ಅಂಗಡಿ ಕೆಲಸ, ಪ್ರತಿದಿನದ ಶ್ರಮೆ, ಎಲ್ಲವೂ, ನಮ್ಮ ಜೀವನದ ಅಗತ್ಯಗಳಿಗೆ ಮತ್ತು ನಮ್ಮ ಮೇಲೆ ಅವಲಂಬಿತರಾದವರ ಅಗತ್ಯ ವಸ್ತುಗಳಿಗೆ ಸರಿಯಾದ ಮತ್ತು ಪ್ರಾಮಾಣಿಕವಾಗಿ ಒದಗಿಸುವಿಕೆಗೆ ಸಂಬಂಧಿಸಿದಂತೆ, ಹಾಗೆಯೇ ನಿಬಂಧನೆಗಾಗಿ ಕಾನೂನು ಕ್ರಮ ಮತ್ತು ಆರೈಕೆಗಾಗಿ ಕರ್ತನ ಕೆಲಸ, ಇವೆಲ್ಲವೂ ಕ್ರೈಸ್ತ ಸೈನಿಕರಾಗಿ ನಮ್ಮ ಜೀವನದ ಸರಿಯಾದ ಭಾಗವಾಗಿದೆ.

ಅಪೋಸ್ತಲ ಪೇತ್ರನು ಪಂಚಾಶತ್ತಮ ದಿನದಲ್ಲಿ ಕರ್ತನ “ಪುನರುತ್ಥಾನ” ಮತ್ತು ಪರಲೋಕಕ್ಕೆ “ಏರಿಹೋಗುವಿಕೆಯನ್ನು” ಸಾರುವಷ್ಟು ದೇವರ ಸೇವೆ ಯಾವ ರೀತಿ ಸಲ್ಲಿಸುತ್ತಿದ್ದನೋ, ಅದೇ ರೀತಿ ಮೀನು ಹಿಡಿಯುವಾಗ ಅದರ ಬಾಯಿಂದ ನಾಣ್ಯವನ್ನು ಪಡೆದು ಯೇಸುಕ್ರಿಸ್ತನ ತೆರಿಗೆಯನ್ನು ಮತ್ತು ತನ್ನ ತೆರಿಗೆಯನ್ನು ಪಾವತಿಸಿ ದೇವರಿಗೆ ಸೇವೆ ಸಲ್ಲಿಸುತ್ತಿದ್ದನು. ಅಪೋಸ್ತಲ ಪೌಲನು ಅರಿಯೋಪಾಗದ ಮಂಗಳನ ಬೆಟ್ಟದಲ್ಲಿ ಯೇಸು ಕ್ರಿಸ್ತನನ್ನು ಮತ್ತು ಆತನ ಪುನರುತ್ಥಾನವನ್ನು ಬೋದಿಸುತ್ತಾ, (ಹೊರೆಯಾಗದ ರೀತಿಯಲ್ಲಿ ಜೀವನ ನಡೆಸಲು) ಡೇರೆಗಳನ್ನು(tent) ಮಾಡುತ್ತ ನಿಜವಾಗಿಯೂ ಶಿಲುಬೆಯ ಸೈನಿಕನಾಗಿದ್ದು ತನ್ನ ಸರಿಯಾದ ಕೆಲಸವನ್ನು ಮಾಡುತ್ತಿದ್ದನು. ನಮ್ಮ ರಕ್ಷಣೆಯ ನಾಯಕನಾದ ಕ್ರಿಸ್ತನ ಮಹಿಮೆಗೆ ಮತ್ತು ಅವರ ಘನತೆಗೆ ಅಥವಾ ನಮ್ಮ ಯಾವುದೇ ಸಹ-ಸೈನಿಕರ ಪ್ರಯೋಜನಕ್ಕಾಗಿ ಅಥವಾ ಈ ಯುದ್ಧಕ್ಕೆ ನಮ್ಮ ಸ್ವಂತ ಸಿದ್ಧತೆಗಾಗಿ ಅಥವಾ ನಮ್ಮ ನಾಯಕ ಗುರುತಿಸಿದ ಮತ್ತು ಅನುಮೋದಿಸಿದ ಜವಾಬ್ದಾರಿಗಳ ನಿರ್ವಹಣೆಯಲ್ಲಿ, ನಾವು ಏನು ಮಾಡಿದರೂ ಅದು ಸೈನಿಕರಾದ ನಮಗೆ ಸರಿಯಾದ ಕೆಲಸವಾಗಿದೆ, ಅದು ನಮ್ಮ ಜೀವನದ ವ್ಯವಹಾರಗಳಲ್ಲಿ ಸಿಕ್ಕಿಹಾಕಿಕೊಳ್ಳುವುದು ಎಂದು ಅರ್ಥವಿಲ್ಲ.



The Bangalore Bible Students